

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಮಾರ್ಚ್ 17 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 327 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹ 4




ಚುನಾವಣಾ ಅಂತಿಮ ಪೂರ್ವ ಸಮೀಕ್ಷೆ ವರದಿ ನಂತರ

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

● ಸಿಎಂ ಬಸವರಾಜ ಬೊಮ್ಮಾಯಿ ಮಾಹಿತಿ ● ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗೆ ಕಿಮ್ಮತ್ತಿಲ್ಲ

ಬೆಂಗಳೂರು, ಮಾ. 16(ಕೆಎಂಶಿ)–ವಿಧಾನಸಭಾ ಚುನಾವಣಾ ಅಂತಿಮ ಪೂರ್ವ ಸಮೀಕ್ಷೆ ನಡೆಯುತ್ತಿದ್ದು, ಅದರ ವರದಿ ಬಂದ ನಂತರವೇ ಪಕ್ಷದ ಅಭ್ಯರ್ಥಿಗಳ ಪಟ್ಟಿ ಬಿಡುಗಡೆಯಾಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.



ಕಾಂಗ್ರೆಸ್‌ನವರು ಏನು ಮಾಡುತ್ತಾರೆ ಎಂಬುದು ನಮಗೆ ಬೇಕಾಗಿಲ್ಲ. ಅವರ ಅಭ್ಯರ್ಥಿಗಳ ಪಟ್ಟಿಯನ್ನು ಎಂದಾದರೂ ಬಿಡುಗಡೆ ಮಾಡಿಕೊಳ್ಳಲಿ. ಬಿಜೆಪಿ ವರಿಷ್ಠರು ನಡೆಸುತ್ತಿರುವ ಸಮೀಕ್ಷಾ ವರದಿ ನಂತರವೇ ನಮ್ಮ ಪಟ್ಟಿ ಹೊರ ಬರಲಿದೆ. ನಾವು ಚುನಾವಣಾ ವೇಳಾಪಟ್ಟಿಯನ್ನು ಹಾಕಿಕೊಂಡಿದ್ದೇವೆ. ಅದರಂತೆ ನಮ್ಮ ಅಭ್ಯರ್ಥಿಗಳ ಪಟ್ಟಿಯನ್ನು ಹಂತ ಹಂತವಾಗಿ ಬಿಡುಗಡೆ ಮಾಡುವುದಾಗಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣೆಯಲ್ಲಿ ಹೊಸ ಮುಖಗಳಿಗೆ ಹೆಚ್ಚಿನ ಅವಕಾಶ ದೊರೆಯಬಹುದೆಂಬ ಇಂಗಿತ ವ್ಯಕ್ತಪಡಿಸಿದ್ದಾರೆ. ಪ್ರತಿ ಚುನಾವಣೆಯಲ್ಲೂ ಪಕ್ಷ ಹಲವಾರು ತೀರ್ಮಾನ ತೆಗೆದುಕೊಳ್ಳುತ್ತದೆ. ನಾವು ಗೆಲ್ಲಲು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇದರಲ್ಲಿ ಹೊಸತನವೇನಿಲ್ಲ ಎಂದರು. ಹತಾಶೆಗೊಂಡಿರುವ ಕಾಂಗ್ರೆಸ್ ಚುನಾವಣೆಗಾಗಿ ಸುಳ್ಳು ಭರವಸೆಗಳ ಮಹಾಪೂರವನ್ನೇ ಹರಿಸುತ್ತಿದೆ. ಇದು ಗ್ಯಾರಂಟಿ ಕಾರ್ಡ್, ಡೆಬಿಟ್, ಕ್ರೆಡಿಟ್ ಇಲ್ಲದ ಪ್ರಯೋಜನಕ್ಕೆ ಬಾರದ ವಿಸಿಟಿಂಗ್ ಕಾರ್ಡ್ ಇದ್ದಂತೆ ಎಂದು ಟೀಕಿಸಿದ್ದಾರೆ. ಅವರ ಭರವಸೆಗಳಿಂದ ನಮ್ಮ ಪಕ್ಷ ಹತಾಶವಾಗಿಲ್ಲ. ಜನರೇ ಅದರ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ. ಇವರ ಮಾತಿನ ಮೇಲೆ ವಿಶ್ವಾಸವಿಲ್ಲ ಎಂದು ಗ್ಯಾರಂಟಿ ಕಾರ್ಡ್ ಕೊಟ್ಟಿದ್ದಾರೆ. ಕಾರ್ಡ್ ಹಿಂದೆ ಗೃಹಲಕ್ಷ್ಮೀ ಎಂದು ಬರೆದಿದ್ದಾರೆ. ಬ್ಯಾಂಕ್‌ನಲ್ಲಿ ಹಣವಿಟ್ಟು ಕಾರ್ಡ್ ಕೊಟ್ಟರೆ ಬೆಲೆ ಇರುತ್ತದೆ. ಇಲ್ಲದಿದ್ದರೆ, ಅದೊಂದು ವಿಸಿಟಿಂಗ್ ಕಾರ್ಡ್ ಅಷ್ಟೇ. ಆ ಪಕ್ಷ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡುತ್ತದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ಟೋಲ್ ಸಂಗ್ರಹಿಸಲಿಲ್ಲವೆ. ಎಲ್ಲದರಲ್ಲೂ ರಾಜಕಾರಣ ಮಾಡುತ್ತದೆ. ಕೆಟ್ಟ ಪರಂಪರೆ ಆ ಪಕ್ಷದಲ್ಲಿದೆ. ಸಮಸ್ಯೆ ಇದ್ದರೆ,

▸ 8ನೇ ಪುಟಕ್ಕೆ

ಸರ ಕದ್ದ ಆರು ಗಂಟೆಯಲ್ಲೇ ಸರಗಳ್ಳನ ಬಂಧನ

ಮೈಸೂರು ವಿವಿ ಪುರಂ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ನೇತೃತ್ವದ ತಂಡದ ಯಶಸ್ವಿ ಕ್ಷಿಪ್ರ ಕಾರ್ಯಾಚರಣೆ

ಮೈಸೂರು,ಮಾ.16(ಆರ್‌ಕೆ)–ವೃದ್ಧೆಯಿಂದ ಚಿನ್ನದ ಸರ ಅಪಹರಣವಾದ ನಂತರ ಕೇವಲ ಆರು ಗಂಟೆಯಲ್ಲಿ ಸರಗಳ್ಳನ ಪತ್ತೆ ಮಾಡಿ ಬಂಧಿಸುವಲ್ಲಿ ಮೈಸೂರಿನ ವಿವಿ ಪುರಂ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ. ಗುರುವಾರ ಬೆಳಗ್ಗೆ 7.15ರಲ್ಲಿ ಯಾದವಗಿರಿ ಒಂದನೇ ಮುಖ್ಯ ರಸ್ತೆಯ ಪಲಟೈನ್ ಎಲೈಟ್ ಅಪಾರ್ಟ್‌ಮೆಂಟ್ ನಿವಾಸಿ 70 ವರ್ಷ ವಯಸ್ಸಿನ ಪುಷ್ಪಾದೇವಿ ಅವರ 65 ಗ್ರಾಂನ ಚಿನ್ನದ ಸರವನ್ನು ಸರಗಳ್ಳ ಕಿತ್ತುಕೊಂಡು ಪರಾರಿಯಾಗಿದ್ದು, ಮಧ್ಯಾಹ್ನ 1.10ರ ವೇಳೆಗೆ ಅವರಿಂದ ಸರ ಅಪಹರಿಸಿದ್ದ ವಿಜಯನಗರ 2ನೇ ಹಂತದ ನಿವಾಸಿ ವಿಕಾಸ್ (26) ಎಂಬಾತನನ್ನು ಪೊಲೀಸರು ಬಂಧಿಸಿ, ಪುಷ್ಪಾದೇವಿಯವರ ಸರ ಮತ್ತು ಕೃತ್ಯಕ್ಕೆ ಬಳಸಿದ್ದ ಹೋಂಡಾ ಆಕ್ಟೀವಾ ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದಾರೆ.



ಇನ್ಸ್‌ಪೆಕ್ಟರ್ ಎಂ.ಮೋಹನ್‌ಕುಮಾರ್





ಸರ ಕಳೆದುಕೊಂಡ ಪುಷ್ಪಾದೇವಿ

ವಿವರ: ಯಾದವಗಿರಿ ಒಂದನೇ ಮುಖ್ಯ ರಸ್ತೆಯ ದಾಸ್‌ಪ್ರಕಾಶ್ ಪ್ಯಾರಡೈಸ್ ಹೋಟೆಲ್ ಸಮೀಪ ಪುಷ್ಪಾದೇವಿಯವರು ಇಂದು ಬೆಳಗ್ಗೆ 7.15ರ ಸುಮಾರಿನಲ್ಲಿ ವಾಯುವಿಹಾರದಲ್ಲಿದ್ದ ವೇಳೆ ಸ್ಕೂಟರ್ ನಿಲ್ಲಿಸಿಕೊಂಡು ನಿಂತಿದ್ದ ಯುವಕ ಅವರ ಕೊರಳಲ್ಲಿದ್ದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿದ್ದಾನೆ. ವಿಷಯ ತಿಳಿಯುತ್ತಿದ್ದಂತೆಯೇ ತಮ್ಮ ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ಆಗಮಿಸಿದ ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್ ಘಟನೆ ನಡೆದ ಸ್ಥಳದ ಸುತ್ತಮುತ್ತ ಇದ್ದ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸಿ, ಪುಷ್ಪಾದೇವಿಯವರ ಸರ ಅಪಹರಣ ಮಾಡಿದವನು ನೇವಿ ಬ್ಲೂ ಬಣ್ಣದ ಹೋಂಡಾ ಆಕ್ಟೀವಾದಲ್ಲಿ ಬಂದಿದ್ದಾನೆ ಎಂಬುದನ್ನು ಖಚಿತಪಡಿಸಿಕೊಂಡರಾದರೂ, ಸ್ಕೂಟರ್‌ನ ನೋಂದಣಿ ಸಂಖ್ಯೆ ಅಸ್ಪಷ್ಟವಾಗಿ ಸಿಸಿ ಕ್ಯಾಮರಾದಲ್ಲಿ ದಾಖಲಾಗಿತ್ತು ಎಂದು ಹೇಳಲಾಗಿದೆ.

ತಕ್ಷಣವೇ ಕಾರ್ಯಪ್ರವೃತ್ತರಾದ ಅವರು, ಸರ ಅಪಹರಣದ ನಂತರ ಆತ ತೆರಳಿದ ಮಾರ್ಗದಲ್ಲಿರುವ ಹಾಗೂ ಘಟನಾ ಸ್ಥಳಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಲ್ಲಿರುವ ಸಿಸಿ ಕ್ಯಾಮರಾಗಳ ದೃಶ್ಯಾವಳಿಗಳನ್ನು ಕ್ಷಿಪ್ರಗತಿಯಲ್ಲಿ ಪರಿಶೀಲಿಸುವಂತೆ ತಮ್ಮ ಸಿಬ್ಬಂದಿಗೆ ನಿರ್ದೇಶನ ನೀಡಿದ್ದಾರೆ. ಅದರಂತೆ ಪರಿಶೀಲನೆ ನಡೆಸಿದಾಗ ಸ್ಕೂಟರ್‌ನ ನೋಂದಣಿ ಸಂಖ್ಯೆ ಪತ್ತೆಯಾಗಿದೆ. ಸ್ವಲ್ಪವೂ ತಡ ಮಾಡದೇ ಆರ್‌ಟಿಓ ಕಚೇರಿ ಸಂಪರ್ಕಿಸಿ ಸ್ಕೂಟರ್‌ನ ಮಾಲೀಕನ ವಿಳಾಸವನ್ನು ಪಡೆದ ಪೊಲೀಸರು, ಅಲ್ಲಿಗೆ ತೆರಳಿ

▸ 8ನೇ ಪುಟಕ್ಕೆ

ನಾಳೆಯಿಂದ ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ ಆರಂಭ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ

ಮಡಿಕೇರಿ, ಮಾ.16– ಕೊಡವ ಸಮುದಾಯದ ಕುಟುಂಬಗಳ ನಡುವಣ 23ನೇ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ–2023'ಕ್ಕೆ ಮಾ.18ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಪೋಕ್ಲು ಬೇತು ಗ್ರಾಮದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಚಾಲನೆ ನೀಡಲಿದ್ದು, ಯಶಸ್ವಿ ಪಂದ್ಯಾವಳಿಗಾಗಿ ಅಗತ್ಯ ಸಿದ್ಧತೆಗಳನ್ನು ನಡೆಸಲಾಗಿದೆ ಎಂದು ಹಾಕಿ ಉತ್ಸವ ಸಮಿತಿ ಸಂಚಾಲಕ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ತಿಳಿಸಿದ್ದಾರೆ. ಹಾಕಿ ಉತ್ಸವದ ಉದ್ಘಾಟನಾ ಸಮಾರಂಭ ಮಧ್ಯಾಹ್ನ 2.20ಕ್ಕೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಕ್ರೀಡಾ ಸಚಿವ ಡಾ. ಕೆ.ಸಿ.ನಾರಾಯಣಗೌಡ, ಸಂಸದ ಪ್ರತಾಪ ಸಿಂಹ, ಶಾಸಕರುಗಳಾದ ಕೆ.ಜಿ.ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್ ಸೇರಿದಂತೆ ಹಲಗಣ್ಯರು ಪಾಲ್ಗೊಳ್ಳಲಿದ್ದಾರೆ.

[ವಿವರ: ಪುಟ–6]





ಜೂಜಾಟ ಅಡ್ಡೆ ಮೇಲೆ ದಾಳಿ

7 ಮಂದಿ ಬಂಧನ, 12.54 ಲಕ್ಷ ನಗದು, 7.60 ಲಕ್ಷದ ಕಾಯಿನ್ ಜಪ್ತಿ

ಮೈಸೂರು, ಮಾ.16(ಎಂಕೆ)– ಪ್ರತ್ಯೇಕ ಸ್ಥಳಗಳಲ್ಲಿ ಜೂಜು ಅಡ್ಡೆ ಮೇಲೆ ದಾಳಿ ನಡೆಸಿರುವ ಸಿಸಿಬಿ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 7 ಜನರನ್ನು ಬಂಧಿಸಿ 12,54,765 ರೂ. ನಗದು, 7,60,000 ರೂ. ಮುಖಬೆಲೆಯ ವಿವಿಧ ಬಣ್ಣದ ಕಾಯಿನ್‌ಗಳು, 6 ಮೊಬೈಲ್, ಕೌಂಟಿಂಗ್ ಮೆಷಿನ್ ಹಾಗೂ ಇಸ್ಪೀಟ್ ಕಾರ್ಡ್‌ಗಳನ್ನು ವಶಕ್ಕೆ ಪಡೆದಿದ್ದಾರೆ.

ವಿಜಯನಗರ ಪೊಲೀಸ್ ಠಾಣೆ ವ್ಯಾಪ್ತಿಯ ಹುಣಸೂರು ಮುಖ್ಯರಸ್ತೆಯಲ್ಲಿರುವ ಸಿಟಿ ಸ್ಪೋರ್ಟ್ಸ್ ಕ್ಲಬ್ ಮೇಲೆ ಮಾ.9 ರಂದು ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಸಿಸಿಬಿ ಪೊಲೀಸರು, ಅಂದರ್–ಬಾಹರ್ ಜೂಜಾಟದಲ್ಲಿ ತೊಡಗಿದ್ದ ಮೂವರನ್ನು ಬಂಧಿಸಿದ್ದಾರೆ. ಜೂಜಾಟಕ್ಕಿಟ್ಟಿದ್ದ 12,50,660 ರೂ.ನಗದು, 6 ಮೊಬೈಲ್, ಕೌಂಟಿಂಗ್ ಮೆಷಿನ್, ಇಸ್ಪೀಟ್ ಕಾರ್ಡ್‌ಗಳು ಹಾಗೂ ಟೋಕನ್ ಕಾಯಿನ್‌ಗಳನ್ನು ವಶಕ್ಕೆ ಪಡೆದಿದ್ದಾರೆ. ಈ ಸಂಬಂಧ ವಿಜಯನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹಾಗೆಯೇ ನಜರ್‌ಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಚಾಮುಂಡಿ ಬೆಟ್ಟದ ರಸ್ತೆಯಲ್ಲಿರುವ ಜೆ.ಸಿ.ನಗರದ ನ.05ರ ಕಟ್ಟಡದ ಮೇಲೆ ದಾಳಿ ಮಾಡಿದ ಸಿಸಿಬಿ ಪೊಲೀಸರು, ಹಣಕ್ಕೆ ಸಮಾನವಾದ ಕಾಯಿನ್‌ಗಳನ್ನು ಪಣವಾಗಿಟ್ಟುಕೊಂಡು ಅಂದರ್–ಬಾಹರ್ ಜೂಜಾಟದಲ್ಲಿ ತೊಡಗಿದ್ದ 5 ಜನರನ್ನು ಬಂಧಿಸಿದ್ದಾರೆ. ಬಂಧಿತರಿಂದ 7,60,000 ರೂ. ಮುಖಬೆಲೆಯ ವಿವಿಧ ಬಣ್ಣದ ಕಾಯಿನ್‌ಗಳು, 4,105 ರೂ.ನಗದು ಹಣವನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿಪ್ಪು ನಿಜಕನಸುಗಳು 50ನೇ ಪ್ರದರ್ಶನ: ಮಾ.19ರಂದು ಸುವರ್ಣ ಪ್ರದರ್ಶನ ಸಂಭ್ರಮ

ಮೈಸೂರು, ಮಾ. 16–ರಂಗಾಯಣ ಮೈಸೂರು 2022–23ನೇ ಸಾಲಿನಲ್ಲಿ ಸಿದ್ಧಪಡಿಸಿದ ವಿಶೇಷ ರಂಗಪ್ರಯೋಗ 'ಟಿಪ್ಪು ನಿಜಕನಸುಗಳು'. ನಾಟಕದ ಪ್ರಥಮ ಪ್ರದರ್ಶನ 2022 ನವಂಬರ್ 20 ರಂದು ಮೈಸೂರಿನ ಭೂಮಿಗೀತ ರಂಗಮಂದಿರದಲ್ಲಿ ನಡೆಯಿತು. ನಂತರ ಕೆಲವು ಪ್ರದರ್ಶನಗಳು ಭೂಮಿಗೀತ ರಂಗಮಂದಿರ ಮತ್ತು ಕಲಾಮಂದಿರದಲ್ಲಿ ನಡೆದ ನಂತರ ಮೂರು ಹಂತಗಳಲ್ಲಿ 20 ಜಿಲ್ಲಾ ಕೇಂದ್ರಗಳಲ್ಲಿ ಒಟ್ಟು 46 ಪ್ರದರ್ಶನಗಳನ್ನು ಹೌಸ್‌ಫುಲ್ ಆಗಿ ಮುಗಿಸಿದೆ. ಇದೀಗ ಭೂಮಿಗೀತ ರಂಗಮಂದಿರದಲ್ಲಿ ಮಾರ್ಚ್ 12 ಮತ್ತು 15 ರಂದು 2 ಪ್ರದರ್ಶನವಾಗಿದ್ದು, 18 ರಂದು ಮತ್ತೊಂದು ಪ್ರದರ್ಶನವಿದೆ. ಮಾರ್ಚ್ 19 ರಂದು 50ನೇ ಪ್ರದರ್ಶನ ನಡೆಯಲಿದೆ. ಈ ಪ್ರದರ್ಶನಗಳ ಟಿಕೆಟ್‌ಗಳು ಈಗಾಗಲೇ ಖರೀದಿಯಾಗಿವೆ. ಈ ಸಂತೋಷದ ಕ್ಷಣವನ್ನು ಸಂಭ್ರಮಿಸಲು ಮಾ.19(ಭಾನುವಾರ)ರ ಬೆಳಗ್ಗೆ 11 ಗಂಟೆಗೆ 'ಸತ್ಯದ ಅನಾವರಣದ ಸುವರ್ಣ ಪ್ರದರ್ಶನ ಸಂಭ್ರಮ' ವಿಶೇಷ ಕಾರ್ಯಕ್ರಮವನ್ನು ರಂಗಾಯಣದಲ್ಲಿ ಆಯೋಜಿಸಲಾಗಿದೆ. ಶ್ರೀ ಗಣಪತಿ ಸಚ್ಚಿದಾನಂದ ಅವಧೂತ ದತ್ತಪೀಠ ಆಶ್ರಮದ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿಯವರು ಆಶೀರ್ವಚನ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ ಉಪಸ್ಥಿತರಿರುವರು. 'ಟಿಪ್ಪು ನಿಜಕನಸುಗಳು' ನಾಟಕದ ವಿಚಾರವಾಗಿ ತಮ್ಮ ಅನಿಸಿಕೆಯನ್ನು ಹಿರಿಯ ಪತ್ರಕರ್ತ ರವೀಂದ್ರ ಜೋಶಿ, ಶಿಕ್ಷಣ ತಜ್ಞರಾದ ಎಂ.ಅಶೋಕ್ ಕುಮಾರ್ ವ್ಯಕ್ತಪಡಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಂಗಾಯಣ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ವಹಿಸಲಿದ್ದಾರೆ.

ಪತ್ರಕರ್ತರಿಗೆ ನಾಳೆ ರಾಜ್ಯ ಮಟ್ಟದ ದತ್ತಿ ಪ್ರಶಸ್ತಿ ಪ್ರದಾನ

ಮೈಸೂರು, ಮಾ.16–ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಮತ್ತು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಹಯೋಗದೊಂದಿಗೆ ರಾಜ್ಯ ಮಟ್ಟದ ದತ್ತಿ ಪ್ರಶಸ್ತಿ ಪ್ರಧಾನ ಕಾರ್ಯಕ್ರಮವನ್ನು ಶನಿವಾರ(ಮಾ.18) ಬೆಳಗ್ಗೆ 10.35ಕ್ಕೆ ನಗರದ ರಾಮಾನುಜ ರಸ್ತೆಯಲ್ಲಿರುವ ರಾಜೇಂದ್ರ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ.

ವಿಶ್ರಾಂತ ಹೈಕೋರ್ಟ್ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್ ದಾಸ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ವಹಿಸಲಿದ್ದು, ಹಿರಿಯ ಪತ್ರಕರ್ತ ಕೃಷ್ಣ ಪ್ರಸಾದ್ ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಪ್ರಾಸ್ತಾವಿಕವಾಗಿ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ 'ವಿಜಯವಾಣಿ' ಸಂಪಾದಕ ಕೆ.ಎನ್.ಚನ್ನೇಗೌಡ, ಹಿರಿಯ ಪತ್ರಕರ್ತ ಜಿ.ಎನ್.ಮೋಹನ್, ಮೇಯರ್ ಶಿವಕುಮಾರ್, ಶಾಸಕ ಎಸ್.ಎ.ರಾಮದಾಸ್, ಉದ್ಯಮಿ ಎಂ.ರಾಜೇಂದ್ರ ಮತ್ತು ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಭಾಗವಹಿಸಲಿದ್ದಾರೆ.

ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತೆ ರಾಜ್ಯ ಪ್ರವಾಸ



ಬೆಂಗಳೂರು, ಮಾ.16– ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಶುಕ್ರವಾರದಿಂದ ಎರಡು ದಿನಗಳ ಕಾಲ ರಾಜ್ಯಕ್ಕೆ ಪ್ರವಾಸ ಕೈಗೊಳ್ಳಲಿದ್ದಾರೆ. ಈ ವೇಳೆ ಅವರು, ಹಲವು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದಾರೆ.

ಮೂಲಗಳ ಪ್ರಕಾರ, ಮಾರ್ಚ್ 17 ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ನಡ್ಡಾ ಅವರು ರಥಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಅವರು ರ್‍ಯಾಲಿಯನ್ನು ಉದ್ದೇಶಿಸಿ ಭಾಷಣ ಮಾಡಲಿದ್ದಾರೆ. ಮರುದಿನ ಅವರು ಮತ್ತೆ ರಥಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ತುಮಕೂರಿನಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಸಂತ್ರಸ್ತ ಮಹಿಳೆಯರಿಗೆ ನೆರವಾಗಲು ಸಖಿ ಒನ್ ಸ್ಟಾಪ್ ಸೆಂಟರ್ ಆರಂಭ

ಮೈಸೂರು, ಮಾ.16– ಮಹಿಳೆಗೆ ಶೀಘ್ರವಾಗಿ ಸೂಕ್ತ ವೈದ್ಯಕೀಯ ಚಿಕಿತ್ಸೆ, ಕಾನೂನು ನೆರವುಗಾಗಿ ಮೈಸೂರಿನಲ್ಲಿ 'ಸಖಿ ಒನ್ ಸ್ಟಾಪ್ ಸೆಂಟರ್' ಆರಂಭವಾಗಿದೆ.

ಮೈಸೂರಿನ ಕೆ.ಆರ್.ಆಸ್ಪತ್ರೆಯ ಸ್ಟೋನ್ ಬಿಲ್ಡಿಂಗ್ ಪಕ್ಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅನುದಾನ 46.00 ಲಕ್ಷ ರೂ. ವೆಚ್ಚದಲ್ಲಿ 'ಸಖಿ ಒನ್ ಸ್ಟಾಪ್ ಸೆಂಟರ್' ಕಟ್ಟಡ ನಿರ್ಮಾಣಗೊಂಡಿದೆ. 'ಸಖಿ ಒನ್ ಸ್ಟಾಪ್ ಸೆಂಟರ್' ಅನ್ನು ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ಡೀನ್ ಡಾ.ದಾಕ್ಷಾಯಿಣಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಸವರಾಜು ಮತ್ತು ಶಾಸಕ ಎಲ್.ನಾಗೇಂದ್ರ ಗುರುವಾರ ಉದ್ಘಾಟಿಸಿದರು.

ನಂತರ ಎಲ್.ನಾಗೇಂದ್ರ ಮಾತನಾಡಿ, ರಾಜ್ಯ ಸರ್ಕಾರದ ಅನುದಾನದಲ್ಲಿ ನಿರ್ಮಾಣಗೊಂಡ ಈ ಕಟ್ಟಡದಲ್ಲಿ 24X7 ದೌರ್ಜನ್ಯಕ್ಕೊಳಗಾದ, ಅತ್ಯಾಚಾರಕ್ಕೊಳಗಾದ ಯುವತಿ, ಮಹಿಳೆಗೆ ಶೀಘ್ರವಾಗಿ ಸೂಕ್ತ ವೈದ್ಯಕೀಯ ಚಿಕಿತ್ಸೆ, ಕಾನೂನು ನೆರವು, ಆಪ್ತ ಸಮಾಲೋಚನೆ, ಪೊಲೀಸ್ ನೆರವು ಹಾಗೂ ತಾತ್ಕಾಲಿಕ ಆಶ್ರಯ ಒದಗಿಸುವ ಕಟ್ಟಡವಾಗಿದ್ದು, ಇಲ್ಲಿ ಕಾರ್ಯನಿರ್ವಹಿಸುವ ಪ್ರತಿಯೊಬ್ಬ ಸಿಬ್ಬಂದಿಯೂ ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸುವಂತೆ ಸೂಚಿಸಿದರು. ಈ ಕಾರ್ಯಕ್ರಮದಲ್ಲಿ ಆಶ್ರಯ ಸಮಿತಿ ಸದಸ್ಯ ಅನೂಜ್ ಸಾರಸ್ವತ್, ನಗರ ಭಾ.ಜ.ಪ ಉಪಾಧ್ಯಕ್ಷ ಹರ್ಷ, ಚಾಮರಾಜ ಉಪಾಧ್ಯಕ್ಷ ಜಯಣ್ಣ, ಎಂ.ಡಿ.ಸಿ.ಸಿ ಬ್ಯಾಂಕ್ ನಿರ್ದೇಶಕ ಅರವಿಂದ, ವಾರ್ಡ್ ಅಧ್ಯಕ್ಷ ಗಣೇಶ, ಯುವ ಮೋರ್ಚಾದ ಯೋಗೀಶ್, ಕೇಬಲ್ ವಿಜಯ್, ನಿರ್ಮಿತಿ ಕೇಂದ್ರದ ಇಂಜಿನಿಯರ್ ಲವ ಮತ್ತಿತರರಿದ್ದರು.



ಮೈಸೂರು ಕುವೆಂಪುನಗರದ ನವಿಲು ರಸ್ತೆಯಲ್ಲಿರುವ ಶ್ರೀ ಗುರು ರಾಘವೇಂದ್ರ ದೇವಸ್ಥಾನದ ಅವರಣದಲ್ಲಿ ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ವತಿಯಿಂದ ಹಿಂದೂ ಸಂಪ್ರದಾಯದ ಪ್ಲವನಾಮ ಸಂವತ್ಸರದ ನೂತನ ವರ್ಷಾಚರಣೆಯಾದ ಚಾಂದ್ರಮಾನ ಯುಗಾದಿ ಹಬ್ಬವನ್ನು ಸ್ವಾಗತಿಸಿ, ಬ್ರಾಹ್ಮಣ ಸಮುದಾಯದವರಿಗೆ ಒಂಟಿಕೊಪ್ಪಲ್ ಪಂಚಾಂಗವನ್ನು ಕಾಂಗ್ರೆಸ್ ಮುಖಂಡ ಎನ್.ಎಂ. ನವೀನ್ ಕುಮಾರ್ ವಿತರಿಸಿದರು. ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ಅಧ್ಯಕ್ಷ ಎಸ್.ಬಿ. ವಾಸುದೇವಮೂರ್ತಿ, ಪ್ರಕಾಶ್, ದೇವಸ್ಥಾನದ ಪ್ರಧಾನ ಅರ್ಚಕರಾದ ಶ್ರೀಧರ್ ವಿಠಲ್, ಸುರೇಶ್, ವಿನಯ್ ಕಣಗಾಲ್, ವೆಂಕಟೇಶ್ ಬಾಬು, ಪ್ರಸಾದ್, ರಾಜೇಶ್, ಪ್ರವೀಣ್, ಭರತ್ ಹಾಗೂ ಇನ್ನಿತರರು ಈ ವೇಳೆ ಹಾಜರಿದ್ದರು.

ಮೈಸೂರು, ಚಾ.ನಗರ, ಹಾಸನದಲ್ಲಿ ಬಿಜೆಪಿ ಅಧಿಕ ಸ್ಥಾನ ಗೆಲ್ಲುವುದರತ್ತ ಗಮನಹರಿಸಿ; ಉಳಿದಿದ್ದನ್ನು ನಮಗೆ ಬಿಡಿ

● ಸಚಿವ ಸೋಮಣ್ಣರಿಗೆ ಅಮಿತ್ ಶಾ ಅಭಯ
● ಪಕ್ಷ ಅಧಿಕಾರಕ್ಕೆ ಬಂದರೆ ಸರ್ಕಾರದಲ್ಲಿ ಉನ್ನತ ಸ್ಥಾನದ ಭರವಸೆ
● ಸೋಮಣ್ಣ ಪುತ್ರನಿಗೂ ಪದಾಧಿಕಾರಿಗಳ ಉನ್ನತ ಸ್ಥಾನದ ಭರವಸೆ



ಬೆಂಗಳೂರು, ಮಾ.16(ಕೆಎಂಶಿ)–ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ತಿರುಗಿ ಬಿದ್ದಿರುವ ವಸತಿ ಸಚಿವ ವಿ. ಸೋಮಣ್ಣ ಅವರಿಗೆ ಮೈಸೂರು, ಚಾಮರಾಜನಗರ ಹಾಗೂ ಹಾಸನ ಜಿಲ್ಲಾ ಚುನಾವಣಾ ಹೊಣೆಗಾರಿಕೆಯನ್ನು ಬಿಜೆಪಿ ವರಿಷ್ಠರು ವಹಿಸಿದ್ದಾರೆ.

ಯಡಿಯೂರಪ್ಪ ಮತ್ತು ಅವರ ಪುತ್ರರ ರಾಜಕೀಯ ಹಸ್ತಕ್ಷೇಪದಿಂದ ಅಸಮಾಧಾನಗೊಂಡು ಬಿಜೆಪಿ ತೊರೆದು ಕಾಂಗ್ರೆಸ್ ಸೇರಲು ಮುಂದಾಗಿದ್ದ ಅವರನ್ನು, ದೆಹಲಿಗೆ ಕರೆಸಿಕೊಂಡ ಗೃಹ ಸಚಿವ ಅಮಿತ್ ಶಾ, ಈ ಹೊಣೆಗಾರಿಕೆ ವಹಿಸಿದ್ದಾರೆ.

ಅಷ್ಟೇ ಅಲ್ಲ ವಿಧಾನಸಭಾ ಚುನಾವಣೆಯ ನಂತರ ನಿಮಗೆ ಪಕ್ಷ ಅಧಿಕಾರಕ್ಕೆ ಬಂದರೆ ಸರ್ಕಾರದಲ್ಲಿ ಅತ್ಯುನ್ನತ ಸ್ಥಾನ ದೊರೆಯಲಿದೆ. ತಕ್ಷಣವೇ ನಿಮ್ಮ ಪುತ್ರ ಅರುಣ್ ಸೋಮಣ್ಣ ಅವರಿಗೆ ಪಕ್ಷದಲ್ಲಿ ಪದಾಧಿಕಾರಿಗಳ ಉನ್ನತ ಸ್ಥಾನ ನೀಡುವುದಾಗಿ ಭರವಸೆಯಿತ್ತಿದ್ದಾರೆ.

ನಿನ್ನೆ ರಾತ್ರಿ ಅಮಿತ್ ಶಾ ಅವರ ಮನೆಯಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ರಾಜ್ಯ ಚುನಾವಣಾ ಉಸ್ತುವಾರಿ ಹೊಣೆ ಹೊತ್ತಿರುವ ಧರ್ಮೇಂದ್ರ ಪ್ರಧಾನ್, ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಸಂತೋಷ್ ಉಪಸ್ಥಿತರಿದ್ದರು. ಮಾತುಕತೆ ಸಂದರ್ಭದಲ್ಲಿ ಸೋಮಣ್ಣ ಅವರಿಗೆ ಹೊಣೆಗಾರಿಕೆ ವಹಿಸಿದ ಅಮಿತ್ ಶಾ, ಹಳೆ ಮೈಸೂರು ಭಾಗದಲ್ಲಿ ಪಕ್ಷ ಹೆಚ್ಚಿನ ಸೀಟುಗಳನ್ನು ಗೆಲ್ಲುವಂತೆ ನೋಡಿಕೊಳ್ಳಿ ಎಂದಿದ್ದಾರೆ. ಬೆಂಗಳೂರು ಹೊರತುಪಡಿಸಿದಂತೆ ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಮೂವತ್ತೈದು ಸ್ಥಾನಗಳನ್ನು ಗೆಲ್ಲುವುದು ನಮ್ಮ ಗುರಿಯಾಗಿದ್ದು, ಇದನ್ನು ಸಾಧಿಸಲು ನಿಮ್ಮ ಶಕ್ತಿ ಬೇಕು ಎಂದು ಅಮಿತ್ ಶಾ ಅವರು ಸೋಮಣ್ಣ ಅವರಿಗೆ ತಿಳಿಸಿದ್ದಾರೆ.

ಮೈಸೂರು,ಚಾಮರಾಜನಗರ ಮತ್ತು ಹಾಸನ ಜಿಲ್ಲೆಗಳಲ್ಲಿ ಪಕ್ಷ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕು. ಆದರೆ ಕಳೆದ ಹಲವು ಚುನಾವಣೆಗಳಲ್ಲಿ ಪಕ್ಷ ಇಲ್ಲಿ ನಿರೀಕ್ಷಿತ ಸಾಧನೆ ಮಾಡಲು ಸಾಧ್ಯವಾಗುತ್ತಿಲ್ಲ. ಈ ಕೊರತೆ ನೀಗಿದರೆ ಸ್ವತಂತ್ರವಾಗಿ ಅಧಿಕಾರಕ್ಕೆ ಬರುವ ಬಿಜೆಪಿಯ ಕನಸು ಈಡೇರುತ್ತದೆ ಎಂದು ಅಮಿತ್ ಶಾ ವಿವರಿಸಿದ್ದಾರೆ. ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತವರ ಪುತ್ರ ವಿಜಯೇಂದ್ರ ಅವರು ಪದೇ ಪದೇ ತಮ್ಮನ್ನು ಟಾರ್ಗೆಟ್ ಮಾಡುತ್ತಿರುವ ಕುರಿತು ಸೋಮಣ್ಣ ಅವರು ದೂರಿದಾಗ, ಅವರ ವಿಷಯವನ್ನು ನಮಗೆ ಬಿಡಿ ಎಂದಿದ್ದಾರೆ.

ಇನ್ನು ಮುಂದೆ ನಿಮ್ಮ ವಿಷಯದಲ್ಲಿ ಯಾರ ಹಸ್ತಕ್ಷೇಪವೂ ಇಲ್ಲದಂತೆ ನಾವು ನೋಡಿಕೊಳ್ಳುತ್ತೇವೆ. ನೀವು ಏನೇ ಇದ್ದರೂ ನಮ್ಮ ಗಮನಕ್ಕೆ ತನ್ನಿ, ಮುಂದೇನು ಮಾಡಬೇಕು ಎಂಬುದನ್ನು ನಮಗೆ ಬಿಡಿ ಎಂದು ವಿವರಿಸಿದ್ದಾರೆ. ಮುಂದಿನ ಮೂರು ತಿಂಗಳ ಕಾಲ ಮೌನವಾಗಿರಿ, ಮುಂದೇನಾಗುತ್ತದೆ ಎಂಬುದನ್ನು ಕಾದು ನೋಡಿ.ಮೊದಲು ನಾವು ಚುನಾವಣೆಯಲ್ಲಿ ಗೆಲ್ಲುವ ಕಡೆ ಗಮನಹರಿಸೋಣ ಎಂದು ಅಮಿತ್ ಶಾ ಹೇಳಿದ್ದಾರೆ.

ಹಳೆ ಮೈಸೂರು ಭಾಗದ ಜಿಲ್ಲೆಗಳ ಕಡೆ ಗಮನ ಕೇಂದ್ರೀಕರಿಸಿದರೆ ಪಕ್ಷ ಗಣನೀಯ ಪ್ರಮಾಣದ ಸೀಟುಗಳನ್ನು ಗೆಲ್ಲುತ್ತದೆ ಎಂಬ ಕುರಿತು ನಮಗೆ ಮಾಹಿತಿ ಇದೆ.ಮುಂದಿನ ದಿನಗಳಲ್ಲಿ ನೀವು ಉಳಿದ ವಿಷಯಗಳ ಕಡೆ ಗಮನ ಹರಿಸದೆ ಈ ಭಾಗದ ಜಿಲ್ಲೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವ ಕಡೆ ಗಮನಹರಿಸಿ ಎಂದಿದ್ದಾರೆ. ಉನ್ನತ ಮೂಲಗಳ ಪ್ರಕಾರ, ನಾವು ಪಕ್ಷಕ್ಕಾಗಿ ದುಡಿಯುತ್ತಿರುವವರು, ಯಡಿಯೂರಪ್ಪ ಅವರು ನಮ್ಮ ನಾಯಕರು.ಆದರೆ ನಮ್ಮ ಮೇಲೆ ಹಿಡಿತ ಸಾಧಿಸಲು ವಿಜಯೇಂದ್ರ ಯಾರು ಎಂದು ಸೋಮಣ್ಣ ಪ್ರಶ್ನಿಸಿದ್ದಾರೆ. ಈ ಸಂದರ್ಭದಲ್ಲಿ ಮಾತನಾಡಿದ ಅಮಿತ್ ಶಾ ಅವರು, ಅವರ ವಿಷಯ ನಮಗೆ ಬಿಡಿ.ಇನ್ನು ಮುಂದೆ ಅವರ ಬಗ್ಗೆ ಬಹಿರಂಗವಾಗಿ ಏನೂ ಹೇಳಿಕೆ ಕೊಡಬೇಡಿ. ಉಳಿದಿದ್ದನ್ನು ನಾವು ಗಮನದಲ್ಲಿಟ್ಟುಕೊಂಡಿರುತ್ತೇವೆ ಎಂದು ಸಮಾಧಾನಿಸಿದ್ದಾರೆ.

ಅಮಿತ್ ಶಾ ಅವರ ಮಾತಿನಿಂದ ಸಮಾಧಾನಗೊಂಡ ಸೋಮಣ್ಣ ಅವರು, ಇದೀಗ ಬಿಜೆಪಿಯಲ್ಲೇ ಉಳಿದು ಹೋರಾಡಲು ತೀರ್ಮಾನಿಸಿದ್ದು, ಈ ಬೆಳವಣಿಗೆ ಬಿಜೆಪಿ ಪಾಳೆಯದಲ್ಲಿ ಭಾರೀ ಕುತೂಹಲ ಸೃಷ್ಟಿಸಿದೆ. ಈ ಮಧ್ಯೆ ದೆಹಲಿಯಿಂದ ಹಿಂತಿರುಗಿದ ನಂತರ ಇಂದು ಸುದ್ದಿಗಾರರ ಜತೆ ಮಾತನಾಡಿದ ಸೋಮಣ್ಣ, ನಮ್ಮ ಗೊಂದಲವನ್ನು ಪಕ್ಷದ ವರಿಷ್ಠರು ಬಗೆಹರಿಸಿದ್ದಾರೆ ಎಂದು ಹೇಳಿದರು. ಯಡಿಯೂರಪ್ಪ ಅವರ ಪುತ್ರ ವಿಜಯೇಂದ್ರ ಇನ್ನೂ ಯುವಕ, ಬೆಳೆಯಬೇಕಾದವರು. ಅವರು ಕೂಡ ತಮ್ಮ ಕೆಲಸದ ಮೇಲೆ ಗಮನಹರಿಸಿದರೆ ಒಳ್ಳೆಯದು ಎಂದರು.

ನಾನು ಯಡಿಯೂರಪ್ಪ, ಅದೇ ರೀತಿ ಜೆ.ಹೆಚ್.ಪಟೇಲ್, ಹೆಚ್.ಡಿ. ದೇವೇಗೌಡ, ರಾಮಕೃಷ್ಣ ಹೆಗಡೆ ಅವರಂತಹ ನಾಯಕರ ಗರಡಿಯಲ್ಲಿದ್ದವನು. ನಾನೇನು ಕೆಲಸ ಮಾಡಬೇಕೋ ಅದನ್ನು ಮಾಡುತ್ತಿದ್ದೇನೆ. ವಿಜಯೇಂದ್ರ ತಾವು ಮಾಡಬೇಕಾದ ಕೆಲಸದ ಕಡೆ ಗಮನ ಕೊಡಲಿ ಎಂದ ಅವರು, ಈ ಸೋಮಣ್ಣನಿಗೆ ಸೋಮಣ್ಣನೇ ಸರಿಸಾಟಿ ಎಂದರು.

ಯಡಿಯೂರಪ್ಪ ಅವರ ಬಗ್ಗೆ ಯಾರಾದರೂ ಮಾತನಾಡಿದರೆ ಸಹಿಸುವುದಿಲ್ಲ ಎಂಬ ವಿಜಯೇಂದ್ರ ಅವರ ಮಾತಿಗೆ ಪ್ರತಿಕ್ರಿಯಿಸಿದ ಅವರು, ಈ ಮಾತಿಗೂ ತಮಗೂ ಸಂಬಂಧವಿಲ್ಲ. ಆಗಸದಲ್ಲಿ ಮುಖ ಮಾಡಿ ಉಗುಳಿದರೆ ಅವರ ಮುಖಕ್ಕೇ ಬೀಳುತ್ತದೆ ಎಂದು ವ್ಯಂಗ್ಯವಾಡಿದರು. ನಾನು ಚುನಾವಣಾ ತಂತ್ರಜ್ಞ, ನಾನು ಹೇಗೆ ಚುನಾವಣೆ ಮಾಡುತ್ತೇನೆ ಎಂಬುದು ಮೂರೂ ಪಕ್ಷದವರಿಗೆ ಗೊತ್ತು. ಹೀಗಾಗಿ ಉಳಿದಿದ್ದನ್ನೆಲ್ಲ ಪಕ್ಕಕ್ಕಿಟ್ಟು ಮಾಡುವ ಕೆಲಸದ ಕಡೆ ಗಮನ ಕೊಡೋಣ ಎಂದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಮಾ.16–ಮಾ.18 ರಂದು ಬೈಲಕೊಪ್ಪ ಮತ್ತು ಪಿರಿಯಾಪಟ್ಟಣ ವಿದ್ಯುತ್ ವಿತರಣಾ ಕೇಂದ್ರದ ತ್ರೈಮಾಸಿಕ ನಿರ್ವಹಣೆ ನಿಮಿತ್ತ ಬೈಲಕೊಪ್ಪ ಟೌನ್, ಚನ್‌ಕಲ್, ಕೊಪ್ಪ, ನವಿಲೂರು, ಹುಣಸವಾಡಿ, ಆವರ್ತಿ, ಪುನಾಡಹಳ್ಳಿ, ಟಿಬೆಟ್ ಕ್ಯಾಂಪ್, ಪಿರಿಯಾಪಟ್ಟಣ ಟೌನ್ ಮತ್ತು ಮುತ್ತೂರು, ಮಾಲಂಗಿ, ಚೌತಿ, ಚಿಟ್ಟೇನಹಳ್ಳಿ, ಕಂಪಲಾಪುರ, ಕೀರನಹಳ್ಳಿ, ಪಂಚವಳ್ಳಿ, ದೊಡ್ಡಬೇಲಾಳು, ಗ್ರಾಮ ಪಂಚಾಯಿತಿಗಳಿಗೆ ಬರುವ ಎಲ್ಲಾ ಗ್ರಾಮಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಾ.19, ಕಾವೇರಿ 2.0 ತಂತ್ರಾಂಶದ ತರಬೇತಿ ಕಾರ್ಯಾಗಾರ

ಮೈಸೂರು, ಮಾ.16–ಆಸ್ತಿಗಳ ನೋಂದಣಿ ಸಂಬಂಧ ಸಾರ್ವಜನಿಕರಿಗೆ ಅನುಕೂಲಕರವಾಗುವಂತೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಹೊಸದಾಗಿ ಕಾವೇರಿ 2.0 ತಂತ್ರಾಂಶವನ್ನು ಜಾರಿಗೆ ತಂದಿದ್ದು, ಇದರ ಅನುಷ್ಠಾನದ ಕುರಿತು ಮೈಸೂರು ಜಿಲ್ಲೆಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಿಬ್ಬಂದಿ ವರ್ಗ ಹಾಗೂ ಗಣಕಯಂತ್ರ ನಿರ್ವಾಹಕರಿಗೆ ತರಬೇತಿ ಕಾರ್ಯಾಗಾರವನ್ನು ಮಾ.19 ರಂದು ಬೆಳಗ್ಗೆ 10 ಗಂಟೆಗೆ ಸರ್ವಶ್ರೀ ಕಾಂಪ್ಲೆಕ್ಸ್ ಕಟ್ಟಡದ ಮೊದಲನೇ ಮಹಡಿ ಮೈಸೂರು ಉಪನೋಂದಣಾಧಿಕಾರಿಗಳ ಕಚೇರಿ ಮೇಲೆ, ತ್ರಿವೇಣಿ ವೃತ್ತ, 1ನೇ ಮಹಡಿ, ಡಾ. ರಾಜಕುಮಾರ್ ರಸ್ತೆ ಇಲ್ಲಿ ಆಯೋಜಿಸಲಾಗಿದೆ. ಮೈಸೂರು ನಗರ ಮತ್ತು ತಾಲೂಕು ಸಾರ್ವಜನಿಕರು ಪತ್ರ ಬರಹಗಾರರು ಮತ್ತು ವಕೀಲರು ಕಾರ್ಯಾಗಾರದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಳ್ಳಬೇಕೆಂದು ಜಿಲ್ಲಾ ನೋಂದಣಾಧಿಕಾರಿ ಹಾಗೂ ಮುದ್ರಾಂಕಗಳ ಉಪ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

ಸಹೋದರರ ತಂತ್ರಕ್ಕೆ ಕುಮಾರಸ್ವಾಮಿ ಪ್ರತಿತಂತ್ರ

ಕನಕಪುರದಲ್ಲಿ ತಮ್ಮ ಕುಟುಂಬದವರ ಸ್ಪರ್ಧೆಗಿಳಿಸುವ ಚಿಂತನೆ

ಬೆಂಗಳೂರು, ಮಾ.16(ಕೆಎಂಶಿ)–ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸ್ಪರ್ಧಿಸುವ ಕನಕಪುರ ವಿಧಾನಸಭಾ ಕ್ಷೇತ್ರದಲ್ಲಿ ಕುಟುಂಬದ ಪ್ರಬಲ ಅಭ್ಯರ್ಥಿಯೊಬ್ಬರನ್ನು ಕಣಕ್ಕಿಳಿಸಲು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮುಂದಾಗಿದ್ದಾರೆ. ಶಿವಕುಮಾರ್ ಸಹೋದರ, ಸಂಸದ ಡಿ.ಕೆ.ಸುರೇಶ್ ಅವರನ್ನು ರಾಮನಗರ ವಿಧಾನಸಭಾ ಕ್ಷೇತ್ರದಿಂದ ಕಣಕ್ಕಿಳಿಸುವ ತಂತ್ರಗಾರಿಕೆ ರೂಪಿಸಿದ್ದರೆ, ಕುಮಾರಸ್ವಾಮಿ ಅವರು ಅದಕ್ಕೆ ಪ್ರತಿತಂತ್ರ ರೂಪಿಸಿದ್ದಾರೆ.

ಸುರೇಶ್ ರಾಮನಗರದಿಂದ ಕಣಕ್ಕಿಳಿದರೆ, ಚನ್ನಪಟ್ಟಣ ತೊರೆದು ಮತ್ತೆ ಸ್ವಕ್ಷೇತ್ರದಿಂದ ಕುಮಾರಸ್ವಾಮಿ ಕಣಕ್ಕಿಳಿದು ಡಿ.ಕೆ. ಶಿವಕುಮಾರ್ ಸಹೋದರರ ಚುನಾವಣಾ ಸವಾಲನ್ನು ಸ್ವೀಕರಿಸಲಿದ್ದಾರೆ. ಕಳೆದ ಕೆಲವು ಚುನಾವಣೆಗಳಲ್ಲಿ ಕನಕಪುರದಿಂದ ಸ್ಪರ್ಧಿಸುವ ಜೆಡಿಎಸ್ ಅಭ್ಯರ್ಥಿಗಳು ಕೊನೆಗಳಿಗೆಯಲ್ಲಿ ದುರ್ಬಲಗೊಳ್ಳುತ್ತಿದ್ದಾರೆ. ಹಾಗಾಗಿ ಕ್ಷೇತ್ರದಲ್ಲಿ ಡಿಕೆಶಿ ಕುಟುಂಬದವರು ವಿರೋಧಿಗಳು ಇಲ್ಲದೆ ಪ್ರಬಲವಾಗಿ ಬೇರೂರಿದ್ದರು. ಶಿವಕುಮಾರ್‌ಗೆ ತಮ್ಮ ಪಕ್ಷದಲ್ಲೇ ಕಾಲೆಯುವವರು ಇದ್ದಾರೆ. ಆದರೂ ಕನಕಪುರದ ಮಟ್ಟಿಗೆ ಅವರ ಆಟ ಏನೂ ನಡೆಯುತ್ತಿರಲಿಲ್ಲ. ಕನಕಪುರದಲ್ಲಿ ಜೆಡಿಎಸ್ ಪಕ್ಷದ ಕಾರ್ಯಕರ್ತರು ಇಲ್ಲವೇ ಮುಖಂಡರಿಗೆ ನೀಡಿದರೆ, ಡಿಕೆಶಿ ಕುಟುಂಬದವರನ್ನು ಎದುರಿಸಲು ಸಾಧ್ಯವಿಲ್ಲ. ಹೀಗಾಗಿ ತಮ್ಮ ಮತ ಬ್ಯಾಂಕ್ ಗಟ್ಟಿ ಮಾಡಿಕೊಂಡು ಸಹೋದರರ ಸವಾಲು ಸ್ವೀಕರಿಸಿ ಪ್ರತಿ ಸವಾಲು ಹಾಕಲು ತಮ್ಮ ಕುಟುಂಬದವರನ್ನೇ ಸ್ಪರ್ಧೆಗಿಳಿಸುವ ಬಗ್ಗೆ ತಮ್ಮ ಚಿಂತಕರ ಚಾವಡಿಯಲ್ಲಿ ಕುಮಾರಸ್ವಾಮಿ ಚರ್ಚಿಸಿದ್ದಾರೆ.



ಈ ಸಂಬಂಧ ನೀಲನಕ್ಷೆಯನ್ನು ಸಿದ್ಧಪಡಿಸಿದ್ದಾರೆ. ಕಾಂಗ್ರೆಸ್‌ನಲ್ಲಿರುವ ಡಿಕೆಶಿ ವಿರೋಧಿಗಳಿಗೆ ಕುಮಾರಸ್ವಾಮಿ ರಾಜಕೀಯವಾಗಿ ತೊಡೆತಟ್ಟಿರುವುದು ಒಂದಷ್ಟು ಸಂತಸ ತಂದಿದೆ. ಅದರಲ್ಲೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮುಖ್ಯಮಂತ್ರಿಗಾಗಿ ಹಲವರು ಪೈಪೋಟಿ ನಡೆಸಿದ್ದಾರೆ. ಅವರಲ್ಲಿ ಕೆಲವರು ಪರೋಕ್ಷವಾಗಿ ಹೆಚ್‌ಡಿಕೆ ಕುಟುಂಬದ ಜತೆ ಕೈಜೋಡಿಸುವ ಸಾಧ್ಯತೆ ಹೆಚ್ಚಿರುತ್ತದೆ.

2013ರ ವಿಧಾನಸಭಾ ಚುನಾವಣೆಯಲ್ಲಿ ಇಂತಹ ಘಟನೆ ಕಾಂಗ್ರೆಸ್‌ನಲ್ಲಿ ನಡೆದಿರುವುದನ್ನು ಇಲ್ಲಿ ಸ್ಮರಿಸಬಹುದು.

ಈ ಹಿಂದೆ ಕನಕಪುರದಲ್ಲಿ ಜನತಾ ಪರಿವಾರದಿಂದ ಒಕ್ಕಲಿಗರು ಅಲ್ಲದವರನ್ನು ಕಣಕ್ಕಿಳಿಸಿದರೂ ದೇವೇಗೌಡರು ಅವರನ್ನು ಗೆಲ್ಲಿಸುವ ಸಾಮರ್ಥ್ಯ ಹೊಂದಿದ್ದರು. ದಿ. ರಾಮಕೃಷ್ಣ ಹೆಗಡೆ, ಮಾಜಿ ಸಚಿವ ಪಿಜಿಆರ್ ಸಿಂಧ್ಯಾ ಕನಕಪುರದಲ್ಲಿ ಆಯ್ಕೆ ಆಗಿರುವುದು ಇನ್ನೂ ನೆನಪಿನ ಅಂಗಳದಲ್ಲಿದೆ. ತಮ್ಮ ತವರು ಜಿಲ್ಲೆಯಲ್ಲಿ ಅನ್ಯ ಜಿಲ್ಲೆಯವರು ಹಿಡಿತ ಸಾಧಿಸಿರುವುದನ್ನು ಡಿಕೆಶಿ ಕುಟುಂಬ ಸಹಿಸುತ್ತಿಲ್ಲ. ಹೀಗಾಗಿ ಜೆಡಿಎಸ್ ಪ್ರಭಾವ ಹತ್ತಿಕ್ಕಲು ಸಹೋದರರೇ ಚುನಾವಣಾ ಕಣಕ್ಕಿಳಿಯಲು ಮುಂದಾಗಿದ್ದಾರೆ.

ಮೊದಲಿನಿಂದಲೂ ರಾಜಕೀಯವಾಗಿ ಬದ್ಧ ದ್ವೇಷಿಗಳಾಗಿದ್ದ ಹೆಚ್.ಡಿ.ಕೆ ಮತ್ತು ಡಿಕೆಶಿ ಈಗಲೂ ಅದನ್ನೇ ಮುಂದುವರೆಸುವ ಹಾದಿಯಲ್ಲಿ ಇದ್ದಾರೆ. ಆಗೊಂದು ವೇಳೆ ಈ ರೀತಿಯ ಸ್ಪರ್ಧೆ ಏರ್ಪಟ್ಟರೆ ಕನಕಪುರ ಮತ್ತು ರಾಮನಗರ ಕ್ಷೇತ್ರಗಳು ಹೈವೋಲ್ಟೇಜ್ ಕ್ಷೇತ್ರಗಳಾಗಿ ಚುನಾವಣೆಯಲ್ಲಿ ರಾಷ್ಟ್ರದ ಗಮನ ಸೆಳೆಯಲಿವೆ. ಮೈತ್ರಿ ಸರ್ಕಾರದ ಅವಧಿಯಲ್ಲಿ ಮಾತ್ರ ದ್ವೇಷ ಮರೆತು ಮಿತ್ರತ್ವ ತೋರಿದರು. ಸರ್ಕಾರದ ಪತನದೊಂದಿಗೆ ಮಿತ್ರತ್ವವೂ ದೂರವಾಯಿತು. ಬಳಿಕ ತಮ್ಮ ಹಳೆಯ ಮಾರ್ಗಕ್ಕೆ ಮರಳಿದ್ದು, ಆರೋಪ ಪ್ರತ್ಯಾರೋಪದಲ್ಲಿ ತೊಡಗಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್‌ಗೆ ಜನಸಾಮಾನ್ಯರ ವಿರೋಧ ಇಲ್ಲ

ಇದೆಲ್ಲಾ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜಕಾರಣ: ಮುಖ್ಯಮಂತ್ರಿ ಬೊಮ್ಮಾಯಿ ಕಿಡಿನುಡಿ

ಬೆಂಗಳೂರು, ಮಾ.16(ಕೆಎಂಶಿ)– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ಸಂಗ್ರಹದ ಬಗ್ಗೆ ಜನಸಾಮಾನ್ಯರು ತಕರಾರು ಮಾಡುತ್ತಿಲ್ಲ ಎಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ಅಧ್ಯಕ್ಷ ಡಿ.ಕೆ.ಶಿವಕುಮಾರ್ ರಾಜಕಾರಣ ಮಾಡುತ್ತಿದ್ದಾರೆ ಎಂದು ಕಿಡಿಕಾರಿದ್ದಾರೆ.


ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿವಕುಮಾರ್ ಬಳಸುವ ಭಾಷೆ, ನಡೆದುಕೊಂಡ ರೀತಿ ಯಾವುದೇ ಕನ್ನಡಿಗರಿಗೆ ಶೋಭೆ ತರುವಂಥದ್ದಲ್ಲ ಎಂದರು.

ರಾಷ್ಟ್ರೀಯ ಹೆದ್ದಾರಿ ಬರುವ ಮುನ್ನವೂ ಟೋಲ್ ಸಂಗ್ರಹವಾಗುತ್ತದೆ ಎನ್ನುವುದು ಎಲ್ಲರಿಗೂ ತಿಳಿದಿದೆ. ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಲಾಗುವುದು. ಬಹಳಷ್ಟು ಸೇವೆಗಳು ಸರ್ವಿಸ್ ರಸ್ತೆಯಲ್ಲಿಯೇ ಇದೆ. ಅಲ್ಲೆಲ್ಲೂ ಟೋಲ್ ಇಲ್ಲ. ವಿನಾಕಾರಣ ರಾಜಕಾರಣವಾಗುತ್ತಿದೆ ಎಂದರು.

ಗಡಿ ಕನ್ನಡಿಗರಿಗೆ ಆರೋಗ್ಯ ವಿಮೆ ಯೋಜನೆಯ ಮಹಾರಾಷ್ಟ್ರ ಸಚಿವ ಸಂಪುಟದ ನಿರ್ಣಯವನ್ನು ತೀವ್ರವಾಗಿ ಖಂಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕರ್ನಾಟಕ ಗಡಿ ಭಾಗದ ಜನರಿಗೆ ಆರೋಗ್ಯ ಯೋಜನೆ ವಿಮೆ ಯೋಜನೆಯನ್ನು ಮಹಾರಾಷ್ಟ್ರದ ಸಂಪುಟ ನಿರ್ಣಯ ಘೋಷಿಸಿರುವುದು ಅಕ್ಷಮ್ಯ ಅಪರಾಧ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಮಾತನಾಡಿದಾಗ ಸುಪ್ರೀಂಕೋರ್ಟ್ ಆದೇಶ ಬರುವವರೆಗೆ ಕಾಯಬೇಕು. ಯಾವುದೇ ಪ್ರಚೋದನೆಯಾಗಬಾರದೆಂದು ಒಪ್ಪಲಾಗಿತ್ತು ಈಗ ಅದರ ಉಲ್ಲಂಘನೆಯಾಗಿದೆ. ಕೂಡಲೇ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕು. ಈ ವಿಚಾರವನ್ನು ಗೃಹ ಸಚಿವರ ಗಮನಕ್ಕೂ ತರಲಾಗುವುದು. ಈ ರೀತಿಯ ಯೋಜನೆಗಳನ್ನು ನಾವೂ ಕೂಡ ಪ್ರಕಟಿಸಬಹುದು. ಹಲವಾರು ತಾಲೂಕುಗಳು, ಗ್ರಾಮ ಪಂಚಾಯಿತಿಗಳು ಮಹಾರಾಷ್ಟ್ರದಲ್ಲಿ ನಮಗೆ ನ್ಯಾಯ ಸಿಗುತ್ತಿಲ್ಲ, ಕರ್ನಾಟಕಕ್ಕೆ ಸೇರಬೇಕು ಎಂದು ಈಗಾಗಲೇ ನಿರ್ಣಯ ಮಾಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ಇದ್ದಾಗ ಮಹಾರಾಷ್ಟ್ರದ ಸರ್ಕಾರ ಬಹಳ ಜವಾಬ್ದಾರಿಯಿಂದ ನಡೆದು ಕೊಳ್ಳಬೇಕು ಎಂದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

17.3.2023 ಶುಕ್ರವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ, 05.03.2023ರಿಂದ 17.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೀವನ್ ಜೋತ್ ವೆಲ್ಫೇರ್ ಫೆಡರೇಷನ್, ವಡೋದರ (ಗುಜರಾತ್) :** ಕ್ರಾಫ್ಟ್ ಬಜಾರ್, ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ, ಸ್ಥಳ: ಜೆಎಸ್‌ಎಸ್ ಮೈಸೂರ್ ಹರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ.

■ **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಅಸ್ತಿತ್ವ ಬಳಗ:** ಡಾ. ಪುನೀತ್ ರಾಜ್‌ಕುಮಾರ್ ಜನ್ಮದಿನದ ಪ್ರಯುಕ್ತ ಅಪ್ಪು ಆಲದ ಮರ ದೃಶ್ಯಕಾವ್ಯ ಲೋಕಾರ್ಪಣೆ ಕಾರ್ಯಕ್ರಮ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಮುಜಾಫರ್ ಎಚ್. ಅಸ್ಸಾದಿ, ಉದ್ಘಾಟನೆ : ಸಂಸ್ಕೃತಿ ಚಿಂತಕ ಶಂಕರ್ ದೇವನೂರು, ದೃಶ್ಯ ಕಾವ್ಯ ಲೋಕಾರ್ಪಣೆ : ಶ್ರೀಮತಿ ಲಕ್ಷ್ಮೀ ಗೋವಿಂದರಾಜು, ಮುಖ್ಯ ಅತಿಥಿಗಳು: ನ್ಯಾಯವಾದಿ ಅಪ್ಪುಗಿರಿ, ಪ್ರೊ. ವಿಜಯಕುಮಾರಿ ಎಸ್. ಕರಿಕಲ್, ಡಾ. ಎನ್.ಕೆ. ಲೋಲಾಕ್ಷಿ, ನಾಗೇಶ್ ಕಂದೇಗಾಲ, ಚಿರಂಜೀವಿ ರೇವತ್, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಬೆಳಗ್ಗೆ 9.30 ರಿಂದ.

■ **ಸಹರಾ ಆರ್ಟ್ ಅಂಡ್ ಕ್ರಾಫ್ಟ್ ಶಾಪಿಂಗ್ ಫೆಸ್ಟಿವಲ್:** ಹ್ಯಾಂಡಿಕ್ರಾಫ್ಟ್ ಮತ್ತು ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿಗಳ ಕಚೇರಿ ಹಿಂಭಾಗ, ಬೆಳಗ್ಗೆ 10.30 ರಿಂದ ರಾತ್ರಿ 9.30 ರವರೆಗೆ.

■ **ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಮೈಸೂರು ಜಿಲ್ಲಾ ಸಹಕಾರ ಒಕ್ಕೂಟ, ಸಹಕಾರ ಇಲಾಖೆ:** ರಾಜ್ಯದ ಕೆಐಸಿಎಂ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿಗೆ ರಾಜ್ಯ ಮಟ್ಟದ ವಿಶೇಷ ತರಬೇತಿ ಕಾರ್ಯಕ್ರಮ, ಉದ್ಘಾಟನೆ: ಶಾಸಕ ಜಿ.ಟಿ.ದೇವೇಗೌಡ, ಅಧ್ಯಕ್ಷತೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಮುಖ್ಯ ಅತಿಥಿಗಳು : ಮಹಾಮಂಡಳ ಉಪಾಧ್ಯಕ್ಷ ಜಗದೀಶ ಮಲ್ಲಿಕಾರ್ಜುನ ಕವಟಗಿಮಠ, ಮಹಾಮಂಡಳ ನಿರ್ದೇಶಕರಾದ ಬಿ.ಸಿ. ಲೋಕಪ್ಪಗೌಡ, ಜಯಕರಶೆಟ್ಟಿ ಬಿ. ಇಂದ್ರಾಳಿ, ನಾಮನಿರ್ದೇಶಿತ ನಿರ್ದೇಶಕ ವಿ. ರಘು, ಮಹಾಮಂಡಳ ವ್ಯವಸ್ಥಾಪಕ ನಿರ್ದೇಶಕ ಅರಳಿ ಸೂರ್ಯಕಾಂತ್, ಕೆ.ಸಿ. ನಾಗರತ್ನ, ಡಾ.ಜಿ. ಉಮೇಶ್, ಬಾಪುಗೌಡ ಡಿ. ಪಾಟೀಲ್, ಲಕ್ಷ್ಮೀಪತಯ್ಯ, ಎಂ.ಬಿ. ಮಂಜುನಾಥ್ ಸಿಂಗ್, ಸ್ಥಳ:ಹೋಟೆಲ್ ಲೀ ರುಚಿ ದಿ ಪ್ರಿನ್ಸ್, ಹಿನಕಲ್, ಬೆಳಗ್ಗೆ 10.30 ರಿಂದ.

■ **ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ :** ಡಾ. ಪುನೀತ್ ರಾಜ್‌ಕುಮಾರ್ ಹುಟ್ಟುಹಬ್ಬ ಆಚರಣೆ, ಉದ್ಘಾಟನೆ: ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಅಧ್ಯಕ್ಷತೆ: ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಪುಷ್ಪಾರ್ಚನೆ: ಕಾಂಗ್ರೆಸ್ ಮುಖಂಡ ಎಂ. ಪ್ರದೀಪ್ ಕುಮಾರ್, ಮುಖ್ಯ ಭಾಷಣಕಾರರು: ಸಾಹಿತಿ ಬನ್ನೂರು ಕೆ. ರಾಜು, ಅತಿಥಿಗಳು: ಎಸ್.ಇ. ಗಿರೀಶ್, ಕೆ.ಎಸ್.ಶಿವರಾಮು, ಬಿ.ಬಿ.ರಾಜಶೇಖರ್, ಸ್ಥಳ: ಅಕ್ಕನ ಬಳಗ ಶಾಲಾ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 11.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ–ಗೀತಾ ವೈ.ಪುಟ್ಟಿ, ಹಂಸಿನಿ ಎಸ್.ಕುಮಾರ್, ಎ.ಎಸ್.ನಾಗಲಕ್ಷ್ಮೀ, ವ್ಯಾಖ್ಯಾನ–ಡಾ.ಎನ್.ಎಸ್. ತಾರಾನಾಥ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 10.00 ಎಂ.ಡಿ.ಸುಮತಿ ಮುರಾರಿ–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ–ಹೆಚ್.ಭುವನೇಶ್ವರಿ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು–ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ– ಮಂಡ್ಯದ ಅರುಣೋದಯ ಸಂಘದ ಸದಸ್ಯರಿಂದ ಕಿರು ಪ್ರಹಸನ, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ವೃತ್ತಿ ಮಾರ್ಗದರ್ಶನ–ಅಪರಾಧ ಶಾಸ್ತ್ರ ಮತ್ತು ನ್ಯಾಯ ವಿಜ್ಞಾನ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಶಿಲ್ಪಶ್ರೀ ಅವರೊದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್ ವಾಣಿ, 8.15 ರೂಪಕ "ವೇದ ವೈಶಾಲ್ಯ", ರಚನೆ–ವಿದ್ವಾನ್ ನಾರಾಯಣ ಎನ್.ದೇಸಾಯಿ, 9.15 ಜನಪದ ಸಂಗೀತ–ನಾಗಬಸಮ್ಮ ಮತ್ತು ತಂಡ, 10.00 ವಾದ್ಯವೃಂದ, ನಿರ್ದೇಶನ– ಹೆಚ್.ಎನ್.ಭಾಸ್ಕರ್, 10.30 ಸವಿನೆನಪು

■ **ಮೈಸೂರು ವಿವಿ, ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗ:** ಯೋಜನಾ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸೀನಿಯರ್ ಡೇಟಾ ವಿಜ್ಞಾನಿ ಡಾ.ಎಂ.ಆರ್.ವಿನಯ್, ಅಧ್ಯಕ್ಷತೆ: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ. ಎಂ.ಮಹೇಶ, ಸ್ಥಳ: ಮಾನವಿಕ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11.30ಕ್ಕೆ.

■ **ಪುನೀತ್ ರಾಜಕುಮಾರ್ ಅಭಿಮಾನಿ ಬಳಗ, ಪ್ರಜ್ಞಾವಂತ ನಾಗರಿಕ ವೇದಿಕೆ:** ಡಾ.ಪುನೀತ್ ರಾಜ್‌ಕುಮಾರ್ ಜನ್ಮ ದಿನಾಚರಣೆ ಅಂಗವಾಗಿ ಮಜ್ಜಿಗೆ, ಹಣ್ಣು, ಹಂಪಲು ವಿತರಣೆ, ಮುಖ್ಯ ಅತಿಥಿಗಳು: ಶಾಸಕ ಎಲ್. ನಾಗೇಂದ್ರ, ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ಮೈಲ್ಯಾಕ್ ಅಧ್ಯಕ್ಷ ಆರ್. ರಘು ಕೌಟಿಲ್ಯ, ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್, ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಸ್ಥಳ: ಕೆ.ಆರ್. ಆಸ್ಪತ್ರೆ ಮುಂಭಾಗ, ಬೆಳಗ್ಗೆ 11.30ಕ್ಕೆ.

■ **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ :** ವಿದ್ವಾನ್ ಪಣೀಂದ್ರಾಚಾರ್ಯ ಅವರಿಂದ ಭಗವದ್ಗೀತೆಯ 6ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಯರ ಮಠ, ಜಯಲಕ್ಷ್ಮಿಪುರಂ, ಸಂಜೆ 5ಕ್ಕೆ.

■ **ಗಾನಭಾರತೀ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಘಟಕ:** ಗಾನಯೋಗಿ ಪಂಚಾಕ್ಷರ ಗವಾಯಿಗಳ ಸ್ಮರಣಾರ್ಥ ವಚನ ಸಂಗೀತೋತ್ಸವ, ಸಾನ್ನಿಧ್ಯ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸುಗಮ ಸಂಗೀತ ಕಲಾವಿದ ಪ್ರೊ.ಮಲ್ಲಣ್ಣ ಮತ್ತು ಹಿಂದೂಸ್ಥಾನಿ ಗಾಯಕರಾದ ವಿದುಷಿ ಗೀತಾ ಹೆಬ್ಬಾರ ಅವರಿಂದ ವಚನ ಸಂಗೀತ, ಪ್ರಸನ್ನಕುಮಾರ್–ಕ್ಯಾಸಿಯೋ, ನಾಗರಾಜ–ತಬಲ, ವಿನ್ಸೆಂಟ್–ರಿದಂ ಪ್ಯಾಡ್, ಸ್ಥಳ: ವೀಣೆಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 5ಕ್ಕೆ.

■ **ರೋಟರಿ ಮೈಸೂರು ಉತ್ತರ:** ಜಿಲ್ಲಾ ಗವರ್ನರ್ ರೋ.ಎನ್.ಪ್ರಕಾಶ್ ಕಾರಂತ್ ಭೇಟಿ, ಉಪಸ್ಥಿತರು: ಸಹಾಯಕ ಗವರ್ನರ್ ರೋ.ಕೆ.ಮಂಜುನಾಥ್, ರೋ.ರಾಜಶೇಖರ ಕದಂಬ, ಅಧ್ಯಕ್ಷತೆ : ರೋಟರಿ ಮೈಸೂರು ಉತ್ತರ ಅಧ್ಯಕ್ಷ ರೋ. ಎಸ್.ಎಚ್.ಜಗದೀಶ್, ಸ್ಥಳ: ವಿಂಡ್ ಶೈಮ್ಸ್, ನಜರ್‌ಬಾದ್, ಸಂಜೆ 6ಕ್ಕೆ

■ **ಅಪ್ಪು ಅಭಿಮಾನಿಗಳ ಬಳಗ :** ಡಾ. ಪುನೀತ್ ರಾಜ್‌ಕುಮಾರ್ ಜನ್ಮ ದಿನದ ವಿಶೇಷ ಕಾರ್ಯಕ್ರಮ, ಚಂದ್ರಮೌಳೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ, ಸಿಹಿ ವಿತರಣೆ, ಉದ್ಘಾಟನೆ: ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಉಪಸ್ಥಿತರು : ಪಿ. ಪ್ರಶಾಂತ್‌ಗೌಡ, ಸ್ಥಳ: ದೇವರಾಜ ಅರಸು ರಸ್ತೆ, ಸಂಜೆ 7ಕ್ಕೆ

ಎರಡು ದಿನದಲ್ಲಿ ಕಾಂಗ್ರೆಸ್ ಮೊದಲ ಪಟ್ಟಿ ಬಿಡುಗಡೆ ಸಾಧ್ಯತೆ

ಬೆಂಗಳೂರು, ಮಾ.16– ರಾಜ್ಯ ವಿಧಾನ ಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ನಾಳೆ ತಪ್ಪಿದರೆ ನಾಡಿದ್ದು ಬಿಡುಗಡೆ ಆಗುವ ಸಾಧ್ಯತೆ ಇದೆ. ನಾಳೆ ದೆಹಲಿಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿ ಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠೆ ಸೋನಿಯಾಗಾಂಧಿ ಸೇರಿದಂತೆ ಪ್ರಮುಖರ ನೇತೃತ್ವದಲ್ಲಿ ಕಾಂಗ್ರೆಸ್‌ನ ಕೇಂದ್ರ ಚುನಾ ವಣಾ ಸಮಿತಿ ಸಭೆ ನಡೆಯಲಿದೆ. ಸ್ಕ್ರೀನಿಂಗ್ ಕಮಿಟಿ ಶಿಫಾರಸು ಮಾಡಿದ ಹೆಸರುಗಳು ಅಲ್ಲಿ ಚರ್ಚೆಯಾಗಲಿವೆ. ಬಳಿಕ ವರಿಷ್ಠರು ಅಳೆದು ತೂಗಿ, ಪಟ್ಟಿ ಫೈನಲ್ ಮಾಡಲಿದ್ದಾರೆ ಎಂದು ಬಲ್ಲ ಮೂಲಗಳು ತಿಳಿಸಿವೆ.

ಸ್ಕ್ರೀನಿಂಗ್ ಕಮಿಟಿಯಲ್ಲಿ ಹಲವು ಸುತ್ತಿನ ಪರಿಶೀಲನೆ ಬಳಿಕ 120 ಕ್ಷೇತ್ರಗಳಿಗೆ ಸಿಂಗಲ್ ಹೆಸರುಗಳನ್ನು ಫೈನಲ್ ಮಾಡಲಾಗಿದೆ. ಉಳಿದಂತೆ 80 ಕ್ಷೇತ್ರಗಳಿಗೆ ಇಬ್ಬರು ಅಥವಾ ಮೂವರು ಆಕಾಂಕ್ಷಿಗಳ ಹೆಸರನ್ನು ಶಾರ್ಟ್ ಲಿಸ್ಟ್ ಮಾಡಿ ಕಳಿಸಲಾಗಿದೆ ಎನ್ನಲಾಗಿದೆ.

ಯಾವ್ಯಾವ ಕ್ಷೇತ್ರಕ್ಕೆ ಸಿಂಗಲ್ ಹೆಸರು: ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಕೋಲಾರ ಟಿಕೆಟ್ ಫಿಕ್ಸ್ ಆಗುವ ಸಾಧ್ಯತೆ ಇದೆ. ನಂಜನಗೂಡು– ದರ್ಶನ್ ಧ್ರುವ ನಾರಾಯಣ, ಸೊರಬ–ಮಧು ಬಂಗಾರಪ್ಪ ಚಿತ್ರದುರ್ಗ– ವೀರೇಂದ್ರ ಪಪ್ಪಿ ಹಿರಿಯೂರು – ಸುಧಾಕರ್, ಹಿರೇಕೆರೂರು–ಯು.ಬಿ. ಬಣಕಾರ್, ವಿರಾಜಪೇಟೆ–ಪೊನ್ನಣ್ಣ, ಬಸವನಗುಡಿ–ಯು.ಬಿ. ವೆಂಕಟೇಶ್, ರಾಜಾಜಿನಗರ – ಪುಟ್ಟಣ್ಣ, ರಾಮನಗರ – ಇಕ್ಬಾಲ್ ಹುಸೇನ್, ಮಾಗಡಿ –ಬಾಲಕೃಷ್ಣ ಹೊಸಕೋಟೆ – ಶರತ್ ಬಚ್ಚೇಗೌಡ, ನಿಪ್ಪಾಣಿ–ಕಾಕಾ ಸಾಹೇಬ್ ಪಾಟೀಲ್, ಹುಕ್ಕೇರಿ–ಎ.ಬಿ. ಪಾಟೀಲ್, ಗೋಕಾಕ್ –ಅಶೋಕ್ ಪೂಜಾರಿ, ಹುನಗುಂದ– ವಿಜಯಾನಂದ ಕಾಶಪ್ಪನವರ್, ಮುದ್ದೇ ಬಿಹಾಳ–ಸಿ.ಎಸ್. ನಾಡಗೌಡ, ರಾಯ ಚೂರು–ಎನ್.ಎಸ್ ಬೋಸರಾಜ್, ಕನಕಗಿರಿ–ಶಿವರಾಜ್ ತಂಗಡಗಿ, ಯಲಬುರ್ಗಾ –ಬಸವರಾಜ್ ರಾಯರೆಡ್ಡಿ ಮಾತ್ರ ಹೆಸರಿದೆ.

ಇವರಿಗೂ ಟಿಕೆಟ್ ಖಾತರಿ ಸಾಧ್ಯತೆ: ಇನ್ನು ಚಿಂತಾಮಣಿ–ಎಂ.ಸಿ. ಸುಧಾಕರ್, ಚಿಕ್ಕಬಳ್ಳಾಪುರ–ಕೊತ್ತೂರ್ ಮಂಜುನಾಥ್, ಬೈಂದೂರು–ಗೋಪಾಲ್ ಪೂಜಾರಿ, ಕಾಪು–ವಿನಯ್ ಕುಮಾರ್ ಸೊರಕೆ, ಕಡೂರು–ವೈಎಸ್‌ವಿ ದತ್ತಾ, ಟಿ. ನರಸಿಪುರ–ಸುನಿಲ್ ಬೋಸ್, ಕಾರವಾರ–ಸತೀಶ್ ಸೈಲ್, ಭಟ್ಕಳ– ಮಂಕಾಳ ವೈದ್ಯ, ಹಾನಗಲ್ – ಶ್ರೀನಿವಾಸ್ ಮಾನೆ ಅವರಿಗೂ ಟಿಕೆಟ್ ಖಚಿತ ಎಂದು ಹೇಳಲಾಗುತ್ತಿದೆ.

ಎರಡೂ್ಮರು ಹೆಸರು: ಕೆಲವು ಕ್ಷೇತ್ರದಲ್ಲಿ ಇಬ್ಬಿಬ್ಬರು ಆಕಾಂಕ್ಷಿಗಳ ಹೆಸರನ್ನು ಕಳಿಸಲಾಗಿದೆ. ಬೆಳಗಾವಿ ಉತ್ತರ ಫೀರೋಜ್ ಸೇಠ್ ಅಥವಾ ಆಸೀಫ್ ಸೇಠ್, ಕುಡಚಿ – ಶ್ಯಾಮ್ ಭೀಮ್ ಘಾಟ್ಗೆ ಅಥವಾ ಮಹೇಂದ್ರ ತಮ್ಮಣ್ಣ, ಕಾಗವಾಡ–ರಾಜೂ ಕಾಗೆ ಅಥವಾ ದಿಗ್ವಿಜಯ್ ದೇಸಾಯಿ, ಅಥಣಿ– ಗಜಾನನ್ ಮಂಗಸೂಳಿ ಅಥವಾ ಶ್ರೀಕಾಂತ್ ಪೂಜಾರಿ, ಹೊಳಲ್ಕೆರೆ– ಸವಿತಾ ರಘು ಅಥವಾ ಆಂಜನೇಯ, ತೀರ್ಥಹಳ್ಳಿ – ಕಿಮ್ಮನೆ ರತ್ನಾಕರ್ ಅಥವಾ ಮಂಜುನಾಥ್ ಗೌಡ, ಬಳ್ಳಾರಿ ಸಿಟಿ–ಅಲ್ಲಂ ಪ್ರಶಾಂತ್ ಅಥವಾ ಅನಿಲ್ ಲಾಡ್, ಶಿಗ್ಗಾಂವಿ–ಅಜಂಪೀರ್ ಖಾದ್ರಿ ಅಥವಾ ಸೋಮಣ್ಣ ಬೇವಿನಮರದ, ಗಂಗಾವತಿ–ಇಕ್ಬಾಲ್ ಅನ್ಸಾರಿ ಅಥವಾ ಎಚ್.ಆರ್. ಶ್ರೀನಾಥ್, ಕಲಬುರಗಿ ಗ್ರಾಮೀಣ–ರೇವುನಾಯಕ ಬೆಳಮಗಿ ಅಥವಾ ವಿಜಯಕುಮಾರ್, ತೇರದಾಳ್ –ಉಮಾಶ್ರೀ ಅಥವಾ ಮಲ್ಲೇಶಪ್ಪ ಹೆಸರು ಶಿಫಾರಸ್ಸಾಗಿದೆ.

ಹಾಗೆಯೇ ಬಾಗಲಕೋಟೆ– ಎಚ್.ವೈ. ಮೇಟಿ ಅಥವಾ ದೇವರಾಜ್ ಪಾಟೀಲ್, ಚಾಮುಂಡೇಶ್ವರಿ– ಮರೀಗೌಡ ಅಥವಾ ಮಾವಿನಹಳ್ಳಿ ಸಿದ್ದೇಗೌಡ, ಮಂಗಳೂರು ದಕ್ಷಿಣ– ಐವಾನ್ ಡಿಸೋಜಾ ಅಥವಾ ಜೆ.ಆರ್. ಲೋಬೋ, ಬೆಳ್ತಂಗಡಿ – ರಕ್ಷಿತ್ ಅಥವಾ ಶಿವರಾಂ, ಬೆಂಗಳೂರು ದಕ್ಷಿಣ– ಆರ್.ಕೆ. ರಮೇಶ್ ಅಥವಾ ಸುಷ್ಮಾ ರಾಜಗೋಪಾಲ್, ದಾಸರಹಳ್ಳಿ– ಕೃಷ್ಣಮೂರ್ತಿ ಅಥವಾ ಸಿ.ಎಂ ಧನಂಜಯ, ಕಲಘಟಗಿ– ಸಂತೋಷ್ ಲಾಡ್ ಅಥವಾ ನಾಗರಾಜ್ ಚಬ್ಬಿ, ಕುಂದಗೋಳ– ಕುಸುಮಾ ಶಿವಳ್ಳಿ ಅಥವಾ ಚಂದ್ರಶೇಖರ್ ಜತ್ತಲ್, ದೊಡ್ಡಬಳ್ಳಾಪುರ –ವೆಂಕಟರಮಣಯ್ಯ ಅಥವಾ ಬಿಸಿ ಆನಂದ್, ಪಾವಗಡ– ವೆಂಕಟರಮಣಪ್ಪ ಅಥವಾ ಎಚ್.ವಿ ವೆಂಕಟೇಶ್, ಲಿಂಗಸಗೂರು–ಡಿಎಸ್ ಹೂಲಗೇರಿ ಅಥವಾ ರುದ್ರಯ್ಯ ಹೆಸರು ಶಿಫಾರಸ್ಸಾಗಿದೆ ಎಂದು ಹೇಳಲಾಗಿದೆ.



ಮಾಜಿ ಸಂಸದ ದಿವಂಗತ ಆರ್.ಧ್ರುವನಾರಾಯಣ ಅವರ ನಿವಾಸಕ್ಕೆ ಭೇಟಿ ನೀಡಿದ ಕರ್ನಾಟಕ ಪ್ರದೇಶ ಕುರುಬರ ಸಂಘದ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಧ್ರುವ ಅವರ ಪುತ್ರ ದರ್ಶನ್ ಅವರಿಗೆ ಸಾಂತ್ವನ ಹೇಳಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಗಂಧನಹಳ್ಳಿ ವೆಂಕಟೇಶ್, ಕುರಿಹುಂಡಿ ರಾಜು ಉಪಸ್ಥಿತರಿದ್ದರು.

ಸಾರಿಗೆ ನೌಕರರ ವೇತನ ಶೇ.15ರಷ್ಟು ಹೆಚ್ಚಳ ತಕ್ಷಣ ಆದೇಶ: ಸಿಎಂ ಬೊಮ್ಮಾಯಿ ಭರವಸೆ

ಬೆಂಗಳೂರು, ಮಾ.16– ಕೆಪಿಟಿಸಿಎಲ್ ಮತ್ತು ಸಾರಿಗೆ ನೌಕರರ ವೇತನ ಹೆಚ್ಚಳಕ್ಕೆ ನಿರ್ಧಾರ ಕೈಗೊಳ್ಳಲಾಗಿದ್ದು, ತಕ್ಷಣ ಅಧಿಕೃತ ಆದೇಶ ಹೊರಡಿಸುತ್ತೇವೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೆಪಿಟಿಸಿಎಲ್ ನೌಕರರ ಶೇ.20 ಮತ್ತು ಸಾರಿಗೆ ನೌಕರರ ಶೇ.15ರಷ್ಟು ವೇತನ ಹೆಚ್ಚಳ ಮಾಡಲು ನಿರ್ಧರಿಸಲಾಗಿದ್ದು, ಈ ಕುರಿತು ತಕ್ಷಣ ಅಧಿಕೃತ ಆದೇಶ ಹೊರಡಿಸುತ್ತೇವೆ ಎಂದು ಹೇಳಿದರು. ವೇತನ ಹೆಚ್ಚಳ ಮಾಡುವಂತೆ ಆಗ್ರಹಿಸಿ ಸಾರಿಗೆ ನೌಕರರು ಮುಷ್ಕರಕ್ಕೆ ಮುಂದಾಗಿದ್ದು. ನೌಕರರ ಸಂಘದ ಜೊತೆಗೆ ಸರ್ಕಾರ ಸರಣಿ ಮಾತುಕತೆಗಳನ್ನು ನಡೆಸುತ್ತಲೇ ಇದೆ. ನೌಕರರ ಬೇಡಿಕೆ ಹಿನ್ನೆಲೆಯಲ್ಲಿ ಶೇ. 10 ರಷ್ಟು ವೇತನ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುವುದಾಗಿ ಸಾರಿಗೆ ಸಚಿವ ಶ್ರೀರಾಮುಲು ಭರವಸೆ ಕೊಟ್ಟಿದ್ದರು. ಆದರೆ. ಇದಕ್ಕೆ ಸಾರಿಗೆ ನೌಕರರು ಒಪ್ಪಿಗೆ ನೀಡಿರಲಿಲ್ಲ. ಈ ಹಿನ್ನೆಲೆಯಲ್ಲಿ ಶೇ.15ರಷ್ಟು ಏರಿಕೆ ಮಾಡಲಾಗಿದೆ.

ಶರಣ ಸಾಹಿತ್ಯ ಪರಿಷತ್ ಸೇರಿ ಹಲವು ಸಂಘ-ಸಂಸ್ಥೆಗಳಿಂದ ಮಲೆಯೂರು ಗುರುಸ್ವಾಮಿಯವರಿಗೆ ನುಡಿನಮನ

ಮೈಸೂರು, ಮಾ.16(ಎಂಕೆ)– ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಹಿರಿಯ ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿಯವರಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು ನಗರ ಮತ್ತು ಜಿಲ್ಲಾ ಘಟಕ ಹಾಗೂ 30ಕ್ಕೂ ಹೆಚ್ಚು ಸಂಘ-ಸಂಸ್ಥೆಗಳಿಂದ 'ನುಡಿನಮನ' ಸಲ್ಲಿಸಲಾಯಿತು.

ಈ ವೇಳೆ ದಿವಂಗತ ಪ್ರೊ.ಮಲೆಯೂರು ಗುರುಸ್ವಾಮಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ, ಮೌನಾಚರಣೆ ಮೂಲಕ ಭಾವ ಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬಳಿಕ ಸಾಹಿತಿ ಶಂಕರ್ ದೇವನೂರು ಮಾತ ನಾಡಿ, ಪದವಿ ವಿದ್ಯಾರ್ಥಿಯಾಗಿದ್ದ ವೇಳೆ ನನ್ನ ಗುರುಗಳು ಆಗಿದ್ದ ಮಲೆಯೂರು ಗುರು ಸ್ವಾಮಿಯವರು ತಾಯಿ ಸ್ವರೂಪರಾಗಿದ್ದರು. ಬದುಕು ಬೆಳಕಾಗಬೇಕು ಎಂಬಂತೆ ಜೀವನ ನಡೆಸಿದ ಅವರು, ಸಾವಿನ ನಂತರವೂ ಎಲ್ಲರ ಹೃದಯದಲ್ಲಿ ಅಚ್ಚಳಿಯದೆ ನೆನಪಾಗಿ ಉಳಿಯುವವರ ಸಾಲಿನಲ್ಲಿರುವ ಮಹಾನು ಭಾವರಾಗಿದ್ದಾರೆ ಎಂದು ಸ್ಮರಿಸಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಮಾತನಾಡಿ, ಮಲೆಯೂರು ಗುರುಸ್ವಾಮಿ ಅವರೊಂದಿಗೆ 3 ದಶಕಗಳಿಂದ ಒಡನಾಟವಿದೆ. ಅವರ 'ಕಪಿಲೆ ಹರಿದಳು ಕಡಲಿಗೆ' ಕಾದಂಬರಿ ಸಂಗೀತ ರಸಸ್ವಾದ ದಿಂದ ಕೂಡಿದ್ದು, ನಿಜ ಸಂಗತಿಗಳನ್ನು ಕಾಲ್ಪನಿಕ ದೃಶ್ಯವನ್ನಾಗಿ ಕಟ್ಟಿಕೊಡುವ ವಿಶೇಷ ಬರವಣಿಗೆ ಅವರದ್ದಾಗಿದೆ ಎಂದರು.



ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಸಭಾಂಗಣದಲ್ಲಿ ಹಿರಿಯ ಸಾಹಿತಿ ಪ್ರೊ.ಮಲೆಯೂರು ಗುರುಸ್ವಾಮಿಯವರಿಗೆ ವಿವಿಧ ಸಂಘ-ಸಂಸ್ಥೆಗಳಿಂದ 'ನುಡಿನಮನ' ಸಲ್ಲಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ ಮತ್ತಿತರರಿದ್ದರು.

ಮಾರ್ಗದರ್ಶಕ: ಕವಯತ್ರಿ ಲತಾ ರಾಜಶೇಖರ್ ಮಾತನಾಡಿ, ಜಾತ್ಯಾತೀತ ಮನೋಭಾವ, ಮಾನವೀಯ ಕಳಕಳಿ ಹೊಂದಿದ್ದ ಮಲೆಯೂರು ಗುರುಸ್ವಾಮಿ ಯವರು, ನನಗೆ ಮಾರ್ಗದರ್ಶಕರಾಗಿದ್ದರು. ಬಸವ ಮಹಾದರ್ಶನ ಮಹಾಕಾವ್ಯ ಬರೆಯುವ ವೇಳೆ ನನಗೆ ಸೂಕ್ತ ಮಾರ್ಗ ದರ್ಶನ ನೀಡಿದರಲ್ಲದೆ ಬಸವೇಶ್ವರ ಎಂಬ ಅಂಕಿತನಾಮ ಬರೆಯುವಾಗಲೂ ನನಗಿದ್ದ ಗೊಂದಲಗಳನ್ನು ನಿವಾರಣೆ ಮಾಡಿದ್ದರು ಎಂದು ನೆನೆದರು.

ಸೂಕ್ತ ಸ್ಥಾನ–ಮಾನ ದೊರೆಯಲಿಲ್ಲ: ಹಿರಿಯ ಸಾಹಿತಿ ಕೆ.ಸಿ.ಶಿವಪ್ಪ ಮಾತನಾಡಿ, ಮನಸಾರೆ ಗೌರವಿಸುವ ವ್ಯಕ್ತಿಗಳಲ್ಲಿ ಒಬ್ಬರಾದ ಮಲೆಯೂರು ಗುರುಸ್ವಾಮಿ, ನನ್ನ ಚೌಪದಿಗಳಿಗೆ ಮುದ್ದುರಾಮ ಎಂಬ ಹೆಸರನ್ನು ಸೂಚಿಸಿದವರಾಗಿದ್ದಾರೆ. ಕವನೀಯ ಸಾಹಿತಿಗಳಾದ ಅವರಿಗೆ ದೊರಕಬೇಕಾದ ಸ್ಥಾನ–ಮಾನ ದೊರಕ ಲಿಲ್ಲ ಎಂಬ ಕೊರಗು ನನಗಿದೆ. ಆದರೆ ಅವರು ಎಂದೂ ಬಿರುದು ಸನ್ಮಾನಗಳನ್ನು ಅಪೇಕ್ಷೆ ಮಾಡಿದವರಲ್ಲ. ಜ್ಞಾನ ಪಿಪಾಸು ಮಲೆಯೂರು, ಸಾಹಿತ್ಯ ಪ್ರಿಯ, ವಚನ ವಿಮರ್ಶಕ ಎಂದು ನುಡಿನಮನ ಸಲ್ಲಿಸಿದರು.

ಪ್ರೋತ್ಸಾಹ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮಾತನಾಡಿ, ಸಿಕ್ಕಾಗ ಲೆಲ್ಲಾ ಅಭಿಮಾನದಿಂದ ಮಾತನಾಡಿಸುತ್ತಿದ್ದ ಮಲೆಯೂರು ಗುರುಸ್ವಾಮಿಯವರು, ಸ್ವಚ್ಛ ಭಾರತ್ ಅಭಿಮಾನಕ್ಕೆ ಪ್ರೋತ್ಸಾಹ ನೀಡು ತ್ತಿದ್ದರು. ಸಾವಿರ ಜನ–ಸಾವಿರ ಗಿಡ ಸ್ವಚ್ಛತಾ ಕಾರ್ಯಕ್ರಮದ ಬಳಿಕ ನನಗೆ ಕರೆ ಮಾಡಿ, ಮಹಾರಾಜರ ಕೈಯ್ಯಲ್ಲಿ ಪೊರಕೆ ಹಿಡಿಸಿದಿರಲ್ಲಾ ಎಂದಿದ್ದರು. ಹಾಗೆಯೇ 300ನೇ ಸ್ವಚ್ಛ ಭಾರತ್ ಅಭಿಯಾನಕ್ಕೆ ಆಹ್ವಾನಿತರಾಗಿ ಬಂದಿದ್ದ ಅವರು, ಮೋದಿಯವರು ಮರೆತರೂ ನೀವು ಮಾತ್ರ ಸ್ವಚ್ಛ ಭಾರತ್ ಅಭಿಯಾನ ಮರೆಯುವುದಿಲ್ಲ ಎಂದು ಹೇಳುವ ಮೂಲಕ ಪ್ರೋತ್ಸಾಹಿಸಿದ್ದರು ಎಂದು ಮೆಲುಕು ಹಾಕಿದರು.

> ಆಂತರಿಕ ಹಾಗೂ ಭೌತಿಕವಾಗಿ ಆಕರ್ಷಕ ವ್ಯಕ್ತಿ ಮಲೆಯೂರು ಗುರುಸ್ವಾಮಿ. ಸಾರ್ವಜನಿಕ ಸಮಾರಂಭಗಳಲ್ಲಿಯೂ ತುಂಬಾ ಕುತೂಹಲದಿಂದ ಕೇಳುವಂತೆ ಮಾತನಾಡುತ್ತಿದ್ದರು. ನಿರ್ಲಿಪ್ತವಾದ ಜೀವನ ನಡೆಸಿದ ಅವರು, ಅನವಶ್ಯಕ ಚರ್ಚೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಆಳವಾದ ಅಧ್ಯಯನ, ವಿಷಯಕ್ಕನುಗುಣವಾಗಿ ವಿಚಾರ ಪ್ರಸ್ತಾಪ ಮಾಡುತ್ತಿದ್ದರು. ಪ್ರತಿಯೊಂದು ಸಂಗತಿಗಳನ್ನು ಸೂಕ್ಷ್ಮವಾಗಿ ಗಮನಿಸಿ, ಸಾಮಾಜಿಕ ನೆಲೆಗಟ್ಟಿನಲ್ಲಿ ಬರೆಯುತ್ತಿದ್ದ ಸಾಹಿತಿ.
> – ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ಸುತ್ತೂರು ಕ್ಷೇತ್ರ

ನಿವೃತ್ತ ಪ್ರಾಧ್ಯಾಪಕ ಪ್ರೊ.ನೀಲಗಿರಿ ಎಂ.ತಳವಾರ್, ಸಮಾಜ ಸೇವಕ ರಘುರಾಂ ವಾಜಪೇಯಿ, ಲೇಖಕಿ ಪದ್ಮಶೇಖರ್, ಸಪ್ತಸ್ವರ ಬಳಗದ ಕೃಷ್ಣಪ್ಪ, ಪದವಿ ಕಾಲೇಜುಗಳ ನಿವೃತ್ತ ಅಧ್ಯಾಪಕರ ಸಂಘದ ಶಿವಾಜಿ ಜೋಯಿಸ್, ಪ್ರಕಾಶಕ ಡಿ.ಎನ್.ಲೋಕಪ್ಪ, ಜೆಡಿಎಸ್ ಮುಖಂಡ ಕೆ.ವಿ.ಮಲ್ಲೇಶ್ ಸೇರಿದಂತೆ 30ಕ್ಕೂ ಮಂದಿ ಪ್ರೊ.ಮಲೆಯೂರು ಗುರುಸ್ವಾಮಿಯವರಿಗೆ ನುಡಿನಮನ ಸಲ್ಲಿಸಿದರು. ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮೀಜಿ, ಸಿದ್ದಮಲ್ಲ ಸ್ವಾಮೀಜಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮಗು ಸದಾನಂದ ಮತ್ತಿತರರು ಉಪಸ್ಥಿತರಿದ್ದರು.

ವರುಣಾ, ಚಾಮುಂಡೇಶ್ವರಿಯಲ್ಲಿ ಅಕ್ರಮ ಮದ್ಯ ಮಾರಾಟಕ್ಕೆ ಅಂತ್ಯ ಹಾಡ್ತೇವೆ!

ಕರ್ನಾಟಕ ರಾಷ್ಟ್ರ ಸಮಿತಿ ಅಭ್ಯರ್ಥಿಗಳ ಭರವಸೆ

ಮೈಸೂರು, ಮಾ.16(ಜಿಎ)–ಮೈಸೂರು ಜಿಲ್ಲೆಯ ವರುಣಾ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಅಕ್ರಮ ಮದ್ಯ ಮಾರಾಟ ವ್ಯಾಪಕವಾಗಿದ್ದು, ನಮ್ಮ ಪಕ್ಷ ಅಧಿಕಾರಕ್ಕೆ ಬಂದರೆ ಮದ್ಯ ನಿಷೇಧ ಮಾಡುತ್ತೇವೆ ಎಂದು ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ(ಕೆಆರ್‌ಎಸ್)ದ ಅಭ್ಯರ್ಥಿಗಳು ಘೋಷಿಸಿದರು.






ನಗರದ ಪತ್ರಕರ್ತರ ಭವನದಲ್ಲಿ ವರುಣಾ ಮತ್ತು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಪ್ರತ್ಯೇಕ ಸುದ್ದಿಗೋಷ್ಠಿ ನಡೆಸಿ ತಮ್ಮ ಪಕ್ಷದ ಪ್ರಣಾಳಿಕೆಯಲ್ಲಿರುವ ಪ್ರಮುಖ ಅಂಶಗಳು ಮತ್ತು ಕ್ಷೇತ್ರದಲ್ಲಿ ಆಗಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಪ್ರಸ್ತಾಪಿಸಿದರು.

ಮೊದಲಿಗೆ ವರುಣಾ ಕ್ಷೇತ್ರದ ಅಭ್ಯರ್ಥಿ ಎಂ.ರವಿಕುಮಾರ್ ಮಾತನಾಡಿ, ವರುಣಾ ಕ್ಷೇತ್ರದಲ್ಲಿ ಅನೇಕ ಪ್ರಾಥಮಿಕ ಆರೋಗ್ಯ ಕೇಂದ್ರಗಳು ದುಸ್ಥಿತಿಯಲ್ಲಿದ್ದು, ಅವುಗಳು ಬದಲಾವಣೆಯಾಗಬೇಕಿದೆ. ಈ ಸಂಬಂಧ ಈಗಾಗಲೇ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಜನಸ್ನೇಹಿ ಪೊಲೀಸ್ ಹಾಗೂ ದಲ್ಲಾಳಿಗಳಿಲ್ಲದೆ ಕಂದಾಯ ಇಲಾಖೆ ಸೇವೆಗಳು ರೈತರಿಗೆ ನೇರವಾಗಿ ಸಿಗುವಂತಾಗಬೇಕಿದೆ ಎಂದರು. ಕ್ಷೇತ್ರದಲ್ಲಿ ಪ್ರಮುಖವಾಗಿ ಅಕ್ರಮ ಮದ್ಯ ಮಾರಾಟ ವ್ಯಾಪಕವಾಗಿದೆ. ವರುಣಾ ಕ್ಷೇತ್ರದಲ್ಲಿಯೇ ಸುಮಾರು 10 ಸಾವಿರಕ್ಕೂ ಅಧಿಕ ಕಡೆ ಮದ್ಯ ಮಾರಾಟವಾಗುತ್ತಿದೆ. ಇದರ ಬಗ್ಗೆ ಅನೇಕ ಬಾರಿ ಅಧಿಕಾರಿಗಳಿಗೆ ದೂರಿದ್ದು, ಕೆಲವೊಂದು ರೈಡ್ ನಾವೇ ಮಾಡಿಸಿದ್ದೇವೆ. ಆದರೂ ಈ ದಂಧೆ ನಿಂತಿಲ್ಲ. ಮದ್ಯದಿಂದ ಸರ್ಕಾರಕ್ಕೆ ವಾರ್ಷಿಕ 37 ಸಾವಿರ ಕೋಟಿ ರೂ. ಆದಾಯ ಬರುತ್ತಿದೆ. ಆದರೆ, ಸರ್ಕಾರ ಮದ್ಯಪಾನ ಬಿಡಿಸಲು ಒಂದು ಲಕ್ಷ ಕೋಟಿ ರೂ. ವ್ಯಯಿಸುತ್ತಿದೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಅಭ್ಯರ್ಥಿ ಎಂ.ಎಸ್.ಪ್ರವೀಣ್ ಮಾತನಾಡಿ, ಈ ಕ್ಷೇತ್ರದ ಪ್ರತಿ ಗ್ರಾಮದಲ್ಲಿಯೂ ಮೂರರಿಂದ ನಾಲ್ಕು ಅಕ್ರಮ ಮದ್ಯ ಮಾರಾಟ ಕೇಂದ್ರಗಳಿವೆ. ಆದ್ದರಿಂದ ಗ್ರಾಮಗಳಲ್ಲಿ ಅನಧಿಕೃತ ಮದ್ಯ ಮಾರಾಟಕ್ಕೆ ಕಡಿವಾಣ ಹಾಕುವುದು ನಮ್ಮ ಪ್ರಮುಖ ಉದ್ದೇಶವಾಗಿದೆ. ಪಕ್ಷ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿಯೇ ಮದ್ಯ ನಿಷೇಧ ಮಾಡುವ ಗುರಿಯಿದೆ ಎಂದರು.

ನಾನು ಕ್ಷೇತ್ರದಿಂದ ಆಯ್ಕೆಗೊಂಡರೆ, ಪ್ರತಿಯೊಂದು ಸರ್ಕಾರಿ ಶಾಲೆಯೂ ಖಾಸಗಿ ಶಾಲೆಯನ್ನು ಮೀರಿಸುವಂತೆ ಸುಧಾರಣೆ ಮಾಡುತ್ತೇನೆ. ಬಿಪಿಎಲ್ ಕಾರ್ಡ್‌ದಾರರಿಗೆ ಉಚಿತ ಮನೆಯ ನಕ್ಷೆ ಹಾಗೂ ಅನುಮೋದನೆ ಮಾಡಿಕೊಡುತ್ತೇನೆ ಜೊತೆಗೆ ಒತ್ತುವರಿಯಾಗಿರುವ ಸಾರ್ವಜನಿಕ ಆಸ್ತಿಪಾಸ್ತಿಗಳನ್ನು ತೆರವುಗೊಳಿಸುತ್ತೇನೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವರುಣಾ ಮತ್ತು ಚಾಮುಂಡೇಶ್ವರಿ ಕ್ಷೇತ್ರದ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ(ಕೆಆರ್‌ಎಸ್) ಪದಾಧಿಕಾರಿಗಳು ಉಪಸ್ಥಿತರಿದ್ದರು.



ವಿಧಾನಪರಿಷತ್ ಮಾಜಿ ಸದಸ್ಯರಾದ ದಿವಂಗತ ಎನ್.ಮಂಜುನಾಥ್ ಅವರ 6ನೇ ವರ್ಷದ ಪುಣ್ಯ ಸ್ಮರಣೆ ಕಾರ್ಯಕ್ರಮವನ್ನು ಮೈಸೂರಿನ ಎನ್.ಆರ್.ಮೊಹಲ್ಲಾದಲ್ಲಿರುವ ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದಲ್ಲಿ ಆಚರಿಸಲಾಯಿತು. ಎನ್.ಮಂಜುನಾಥ್ ಅವರ ಪುತ್ರ, ಟಿ.ಎನ್‌ಎನ್ ಅಕಾಡೆಮಿ ಸಂಸ್ಥಾಪಕ ಅಧ್ಯಕ್ಷರಾದ ಎಂ. ಪ್ರಫುಲ್ ಕುಮಾರ್ ಪುಷ್ಪಾರ್ಚನೆ ನೆರವೇರಿಸಿದರು. ಡಾ. ಆಶಾ ಮಂಜುನಾಥ್, ಸಾಹಿತಿಗಳಾದ ಎಂಜಿಆರ್ ಅರಸ್, ಮಾಜಿ ಕಾರ್ಪೊರೇಟರ್ ಆರ್. ಸೋಮಸುಂದರ್, ಟಿಎನ್‌ಎನ್ ಆದರ್ಶ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಎಂ.ಪಾಟೀಲ್, ಪುಟ್ಟರಾಜು, ಕೆ.ಪುಟ್ಟಯ್ಯ, ಪ್ರಸಾದ್ ಸುಭಾಷ್, ಮಹೇಶ್, ಸತ್ಯಪ್ರಕಾಶ್, ರ್‍ಯಾಂಬೋ ಮಹದೇವ್, ನಂಜನಗೂಡು ಸುಂದರ್, ಆಲತ್ತೂರು ಸುರೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಧ್ರುವನಾರಾಯಣ್ ಈ ತಲೆಮಾರಿನ ಜನಪರ ಮಾದರಿ ರಾಜಕಾರಣಿ

ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಸ್ಮರಣೆ



ಮೈಸೂರು, ಮಾ.16(ಎಸ್‌ಬಿಡಿ)– ಮಾಜಿ ಸಂಸದ ಆರ್.ಧ್ರುವನಾರಾಯಣ್ ಅವರು ಪ್ರಜ್ಞಾವಂತ, ಸಂವೇದನಾಶೀಲ ಮಾದರಿ ರಾಜಕಾರಣಿಯಾಗಿದ್ದರು ಎಂದು ಸಾಹಿತಿ ಪ್ರೊ.ಕಾಳೇಗೌಡ ನಾಗವಾರ ಸ್ಮರಿಸಿಕೊಂಡರು.

ಮೈಸೂರಿನ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಎಂ.ಕೆ.ಸೋಮಶೇಖರ್ ಅಭಿಮಾನಿ ಬಳಗದ ವತಿಯಿಂದ ಗುರುವಾರ ಏರ್ಪಡಿಸಿದ್ದ ದಿವಂಗತ ಆರ್.ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿ, ಹೊಸ ತಲೆಮಾರಿನ ರಾಜಕಾರಣದಲ್ಲಿ ಧ್ರುವನಾರಾಯಣ್ ಮಾದರಿಯಾಗಿದ್ದರು. ಅತ್ಯಂತ ಪ್ರಜ್ಞಾವಂತ, ಸಂವೇದನಾ ಶೀಲರಾಗಿದ್ದ ಅವರು ಸಾಮಾಜಿಕ ನ್ಯಾಯದ ಪರ ಹೆಚ್ಚು ಸಕ್ರಿಯರಾಗಿದ್ದರು ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮಾತನಾಡಿ, ನಮ್ಮ ನಾಯಕರಾದ ಆರ್.ಧ್ರುವನಾರಾಯಣ್ ಅವರು ಯಾವುದೇ ಅನಾರೋಗ್ಯದ ಲಕ್ಷಣಗಳಿಲ್ಲದೆ ಹಠಾತ್ ನಿಧನ ಹೊಂದಿದ್ದು ಅತೀವ ನೋವಿನ ಸಂಗತಿ. ಅವರು ಭೂಮಂಡಲದಲ್ಲಿ ಧ್ರುವತಾರೆಯಂತೆ ಮಿಂಚಿ ಬಹುಬೇಗ ಮರೆಯಾದರು. ಯುವ ರಾಜಕಾರಣಿಗಳಿಗೆ ನೈತಿಕ ರಾಜಕಾರಣದ ಬಗ್ಗೆ ಹೆಚ್ಚು ಮಾರ್ಗದರ್ಶನ ಮಾಡುತ್ತಿದ್ದರು. ಸುಳ್ಳು, ವಂಚನೆ, ಹಣ, ಕಮಿಷನ್, ಜಾತಿ ವಿಚಾರಗಳಿಂದ ದೂರವಿದ್ದರು. ಅಂತರ್ಮುಖಿಯಾಗಿದ್ದ ಅವರು ಎಷ್ಟೋ ನೋವುಗಳನ್ನು ಬಹಿರಂಗಪಡಿಸದೆ ತಾವೇ ಅನುಭವಿಸಿದ್ದರು. ಲೋಕಸಭಾ ಚುನಾವಣೆಯಲ್ಲಿ ಪರಾಭವಗೊಂಡ ನಂತರ ಜಿಲ್ಲಾ ಹಾಗೂ ನಗರ ಕಾಂಗ್ರೆಸ್‌ನ ಬಹುತೇಕ ಚಟುವಟಿಕೆಯಲ್ಲಿ ಭಾಗಿಯಾಗಿ ಮಾರ್ಗದರ್ಶನ ನೀಡುತ್ತಿದ್ದರು. ಕೊರೊನಾ ಸಂದರ್ಭದಲ್ಲಿ 'ಆರೋಗ್ಯ ಹಸ್ತ' ಅಭಿಯಾನದ ನೇತೃತ್ವ ವಹಿಸಿಕೊಂಡು ಅದರಲ್ಲಿ ಯಶಸ್ವಿಯಾಗಿದ್ದರು ಎಂದು ಸ್ಮರಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಮಾದರಿ ವ್ಯಕ್ತಿತ್ವದ ಧ್ರುವನಾರಾಯಣ್ ಅವರ ಸಮಯಪಾಲನೆ, ಶಿಸ್ತು, ಪಕ್ಷಸಂಘಟನೆ ವೈಖರಿ ಅನುಕರಣೀಯವಾಗಿತ್ತು ಪಕ್ಷ ಸಂಘಟನೆಗಾಗಿ ಆರೋಗ್ಯವನ್ನು ಲೆಕ್ಕಿಸದೆ ಹಗಲಿರುಳು ಶ್ರಮಿಸಿದ್ದರು. ಆದರೆ ಪಕ್ಷ ಅಧಿಕಾರಕ್ಕೇರುವ ಸಂದರ್ಭದಲ್ಲಿ ದೂರವಾಗಿದ್ದು ತುಂಬಾ ನೋವು ತಂದಿದೆ. ಚಾಮರಾಜನಗರ, ಮೈಸೂರು, ಮಂಡ್ಯ, ಹಾಸನ, ಕೊಡಗು ಭಾಗದ ಮುಖಂಡರೊಂದಿಗೆ ಕೊಂಡಿಯಾಗಿ ಸಾಮರಸ್ಯ ಗಟ್ಟಿಗೊಳಿಸಿದ್ದರು. ಎಲ್ಲಾ ಕ್ಷೇತ್ರಗಳಲ್ಲೂ ಅವರ ಅಭಿಮಾನಿಗಳು, ಹಿತೈಷಿಗಳಿದ್ದರು. ಎಲ್ಲಾ ಜಾತಿ, ಧರ್ಮದವರನ್ನೂ ಒಗ್ಗೂಡಿಸಿಕೊಂಡು ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಅಂತಹ ಮಹಾನ್ ಚೇತನ ಇಲ್ಲವಾಗಿದ್ದು ವೈಯಕ್ತಿಕವಾಗಿ ಹಾಗೂ ಪಕ್ಷಕ್ಕೆ ದೊಡ್ಡ ನಷ್ಟವಾಗಿದೆ ಎಂದು ತಿಳಿಸಿದರು.

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಎಲ್ಲಾ ಜಾತಿ, ಸಮುದಾಯಗಳ ಜೊತೆ ಒಳ್ಳೆಯ ಬಾಂಧವ್ಯ ಹೊಂದಿದ್ದ ಕಲ್ಪನೆಗೂ ಮೀರಿದ ವ್ಯಕ್ತಿತ್ವದ ಧ್ರುವನಾರಾಯಣ್, ದೇಶದ ಸಂವಿಧಾನ ಉಳಿವಿಗಾಗಿ, ಶಾಂತಿ, ಭ್ರಾತೃತ್ವಕ್ಕಾಗಿ ಶ್ರಮಿಸಿದ್ದರು.

ಸಭೆಯಲ್ಲಿ ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಮಹಿಳಾ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಪ್ರಧಾನ ಕಾರ್ಯದರ್ಶಿ ಶಿವಣ್ಣ, ಮಾಜಿ ಮೇಯರ್ ನಾರಾಯಣ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಜಿ.ಸೋಮಶೇಖರ್, ಶ್ರೀಧರ್, ಮಾಧ್ಯಮ ವಕ್ತಾರ ಶ್ರೀನಿವಾಸ್, ಮುಖಂಡರಾದ ಜೋಗಿ ಮಹೇಶ್, ಭಾಸ್ಕರ್ ಎಲ್.ಗೌಡ, ಗೋಪಿನಾಥ್, ತಿವಾರಿ, ಈಶ್ವರ್ ಚಕ್ಕಡಿ, ಎಂ.ಸಿ.ಚಿಕ್ಕಣ್ಣ, ಎನ್.ಮಾರಾ, ಶಿವಮಲ್ಲು, ರವಿಶಂಕರ್, ಶ್ರೀನಾಥ್ ಬಾಬು, ಗುಣಶೇಖರ್, ಫಾರೂಖ್, ಲೋಕೇಶ್, ಕುಮಾರ್ ಮಾದಾಪುರ, ವಸಂತ್ ನಾಯಕ್, ಸೇವಾದಳ ಗಿರೀಶ್, ಆನಂದ್, ಮೈಸೂರು ಬಸವಣ್ಣ, ಕವಿತಾ ಕಾಳೆ ಮತ್ತಿತರರು ಭಾಗವಹಿಸಿದ್ದರು.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇ ಟೋಲ್ ವಸೂಲಿ ವಿರೋಧಿಸಿ

ರೈತ ಸಂಘದಿಂದ ನೂರೊಂದು ವಾಹನದಲ್ಲಿ ಸಂಚರಿಸುವ ಚಳವಳಿ

ಮೈಸೂರು,ಮಾ.16(ಎಸ್‌ಬಿಡಿ)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಟೋಲ್ ನೀಡದೆ ನೂರೊಂದು ವಾಹನದಲ್ಲಿ ತೆರಳುವ ಮೂಲಕ ಬೃಹತ್ ಚಳವಳಿ ನಡೆಸಲು ಕರ್ನಾಟಕ ರಾಜ್ಯ ರೈತ ಸಂಘ ನಿರ್ಧರಿಸಿದೆ.

ಮೈಸೂರು–ಹುಣಸೂರು ರಸ್ತೆ ಕೃಷಿ ಮಾರುಕಟ್ಟೆ ಅಧ್ಯಯನ ಸಂಸ್ಥೆಯಲ್ಲಿ ನಡೆದ ಸಂಘದ ಕಾರ್ಯಕಾರಣಿ ಸಭೆಯಲ್ಲಿ ಈ ತೀರ್ಮಾನ ಕೈಗೊಂಡಿರುವುದಾಗಿ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ರಾಜಕೀಯ ಉದ್ದೇಶದಿಂದ ಉದ್ಘಾಟಿಸಿದ್ದು ತಪ್ಪು. ಇದರಿಂದ ಬಿಜೆಪಿಗೆ ನಷ್ಟವೇ ಹೊರತು ಯಾವುದೇ ಲಾಭವಾಗದು. ಸಾರ್ವಜನಿಕರು ಶಾಪ ಹಾಕುತ್ತಿದ್ದಾರೆ. ಈಗಾಗಲೇ ಅಲ್ಲಿ 78 ಅಪಘಾತಗಳು ಸಂಭವಿಸಿವೆ. ಭಾರೀ ಟೋಲ್ ಸಂಗ್ರಹದಿಂದ ಜನ ಸಾಮಾನ್ಯರಿಗೆ ತೊಂದರೆಯಾಗುತ್ತಿದೆ. ಈವರೆಗೂ ರೈತ ಸಂಘದವರು ಎಲ್ಲಿಯೂ ಟೋಲ್ ಕಟ್ಟುವುದಿಲ್ಲ. ಹಾಗೆಯೇ ಶೀಘ್ರದಲ್ಲೇ ಮೈಸೂರಿನಿಂದ ಬೆಂಗಳೂರಿಗೆ ಕಾರು ಇನ್ನಿತರ 101 ವಾಹನಗಳಲ್ಲಿ ಟೋಲ್ ಪಾವತಿಸದೆ ಸಂಚರಿಸುವ ಮೂಲಕ ಜನ ಸಾಮಾನ್ಯರು ಟೋಲ್ ಪಾವತಿಸದಂತೆ ಕರೆ ನೀಡಲಾಗುವುದು. ರಾಜ್ಯದ ಎಲ್ಲಾ ಹೆದ್ದಾರಿಗಳಲ್ಲೂ ಟೋಲ್ ವಿರುದ್ಧ ಇದೇ ರೀತಿ ಪ್ರತಿಭಟಿಸಲು ತೀರ್ಮಾನಿಸಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಹೆದ್ದಾರಿ ಭ್ರಷ್ಟಾಚಾರದ ಕರ್ಮಕಾಂಡ ಈ ಹೆದ್ದಾರಿಗಳನ್ನು ಎಂಎನ್‌ಸಿ ಹಾಗೂ ಕಾರ್ಪೊರೇಟ್ ಕಂಪನಿಗಳ ಅನುಕೂಲಕ್ಕಾಗಿ ಮಾಡಲಾಗಿದೆಯೇ ಹೊರತು ಸಾಮಾನ್ಯರಿಗೆ ಅನುಕೂಲಕರವಲ್ಲ. ಸಂಪೂರ್ಣವಾಗಿ ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿದ್ದು, ಕೇಂದ್ರ ಸಚಿವರ ಮಕ್ಕಳ ಬೇನಾಮಿ ಹೆಸರಲ್ಲಿ ಗುತ್ತಿಗೆ ಪಡೆದು ತೆರಿಗೆ ಹಣವನ್ನು ಲೂಟಿ ಮಾಡುತ್ತಿದ್ದಾರೆ. ಹೆದ್ದಾರಿ ನಿರ್ಮಾಣದ ಅಂದಾಜು ವೆಚ್ಚ ಇನ್ನಿತರ ಸಂಪೂರ್ಣ ಮಾಹಿತಿಯನ್ನು ಜನರ ಮುಂದಿಡುವುದು ಕೇಂದ್ರ ಸರ್ಕಾರದ ಕರ್ತವ್ಯ. ಸಂಸದ ಪ್ರತಾಪ್ ಸಿಂಹ ಅವರಿಗೆ ಕಾಮನ್ ಸೆನ್ಸ್ ಇಲ್ಲ. ಹೆದ್ದಾರಿ ತೋರಿಸಿ ಮತ ಕೇಳುತ್ತಿದ್ದಾರೆ. ಅದೆಷ್ಟೋ ಹಳ್ಳಿಗಳಿಗೆ ರಸ್ತೆ ಸಂಪರ್ಕವೇ ಇಲ್ಲ. ಹಲವು ರಸ್ತೆಗಳು ಗುಂಡಿ ಬಿದ್ದು ಹಾಳಾಗಿ ಹೋಗಿವೆ. ಅದರ ಬಗ್ಗೆ ಏಕೆ ಮಾತನಾಡುವುದಿಲ್ಲ ಎಂದು ಪ್ರಶ್ನಿಸಿದರು.

ಜನತಾ ಪ್ರಣಾಳಿಕೆ: ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹೊಸ್ತಿಲಲ್ಲಿ ಎಲ್ಲಾ ಪಕ್ಷಗಳೂ ಜನಸಾಮಾನ್ಯರ ಸಮಸ್ಯೆಗಳನ್ನು ಮರೆತು ಅನಗತ್ಯ ವಿಚಾರಗಳ ಬಗ್ಗೆ ಚರ್ಚೆ, ಆರೋಪ–ಪ್ರತ್ಯಾರೋಪದಲ್ಲಿ ಮುಳುಗಿವೆ. ರೈತರ ನೂರೆಂಟು ಸಮಸ್ಯೆಗಳ ಬಗ್ಗೆ ಯಾವ ಪಕ್ಷದವರೂ ಮಾತನಾಡುತ್ತಿಲ್ಲ. ಈ ಪರಿಸ್ಥಿತಿಯಲ್ಲಿ ರೈತ ಸಂಘವು, ಸಮಾನಮನಸ್ಕ ವ್ಯಕ್ತಿಗಳು ಹಾಗೂ ಸಂಘಟನೆಗಳೊಂದಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ನಿರ್ಧರಿಸಿದೆ. ಈ ನಿಟ್ಟಿನಲ್ಲಿ 'ಜನತಾ ಪ್ರಣಾಳಿಕೆ' ಸಿದ್ಧಪಡಿಸಲು 7 ಜನರ ಸಮಿತಿ ರಚಿಸಲಾಗಿದ್ದು, ಮೂರ್‍ನಾಲ್ಕು ದಿನಗಳಲ್ಲಿ ಕರಡು ಪ್ರತಿ ಸಿದ್ಧವಾಗಲಿದೆ. ನಂತರ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಲಾಗುವುದು. ಈಗಾಗಲೇ ಸರ್ವೋದಯ ಕರ್ನಾಟಕ ಪಕ್ಷದ ಐವರು ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಮತ್ಯಾವ ಕ್ಷೇತ್ರಗಳಿಂದ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕೆಂಬ ನಿಟ್ಟಿನಲ್ಲಿ ಜಿಲ್ಲಾವಾರು ಅಭಿಪ್ರಾಯ ಸಂಗ್ರಹಿಸಲಾಗುವುದು. ನಮ್ಮ ಅಭ್ಯರ್ಥಿಗಳು ಸ್ಪರ್ಧಿಸದ ಕ್ಷೇತ್ರಗಳಲ್ಲಿ ನಮ್ಮ ನಿಲುವಿನ ಬಗ್ಗೆಯೂ ಸಭೆಯಲ್ಲಿ ತೀರ್ಮಾನಿಸಲಾಗುವುದು ಎಂದು ತಿಳಿಸಿದರು.

ಮಾ.27ಕ್ಕೆ ಪ್ರತಿಭಟನೆ: ಸಂಘದ ಗೌರವಾಧ್ಯಕ್ಷ ಚಾಮರಸ ಮಾಲಿಪಾಟೀಲ್ ಮಾತನಾಡಿ, ಹಗಲಿನಲ್ಲೇ ಕನಿಷ್ಠ 10 ಗಂಟೆ ಕೃಷಿ ಪಂಪ್‌ಸೆಟ್‌ಗೆ ವಿದ್ಯುತ್ ಪೂರೈಸಬೇಕು. ಲೋಪದೋಷಗಳನ್ನು ಸರಿಪಡಿಸಬೇಕು, ಕೃಷಿ ಪಂಪ್‌ಸೆಟ್‌ಗೂ ಬಿಲ್ ವ್ಯವಸ್ಥೆ ಜಾರಿ ಚಿಂತನೆಯನ್ನು ಕೈಬಿಡಬೇಕೆಂದು ಆಗ್ರಹಿಸಿ ಮಾ.27ಕ್ಕೆ ರಾಜ್ಯದ ಎಲ್ಲಾ ಎಸ್ಕಾಂ ಕಚೇರಿಗಳ ಮುಂದೆ ಆ ಭಾಗದ ರೈತರು ಬೃಹತ್ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ ಎಂದರು.

ಸಂಘದ ಪ್ರಧಾನ ಕಾರ್ಯದರ್ಶಿ ಟಿ.ನೆಲನೂರು ಶಂಕ್ರಪ್ಪ, ಕಾರ್ಯಾಧ್ಯಕ್ಷ ಜೆ.ಎಂ.ವೀರ ಸಂಗಯ್ಯ, ಉಪಾಧ್ಯಕ್ಷರಾದ ಎಂ.ಎಂ.ಮಹೇಶ್ ಪ್ರಭು, ಶಿವಾನಂದ ಗುಗ್ಗುವೆ, ಮಹಿಳಾ ಪ್ರಧಾನ ಕಾರ್ಯದರ್ಶಿ ಮಂಜುಳಾ ಅಕ್ಕಿ, ಸಂಘಟನಾ ಕಾರ್ಯದರ್ಶಿ ಎಸ್.ಸಿ.ಮಧುಚಂದನ್, ಸರ್ವೋದಯ ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಸನ್ನ ಎನ್.ಗೌಡ, ಕಾರ್ಯಾಧ್ಯಕ್ಷ ಅಮ್ಜದ್ ಪಾಷ, ಕೆ.ಮಲ್ಲಯ್ಯ, ಮಲ್ಲಿಕಾರ್ಜುನ ಸತ್ಯಂಪೇಟೆ ಮತ್ತಿತರರು ಹಾಜರಿದ್ದರು.

ಕುಸಿದು ಬಿದ್ದ ಕೋಲ್ಡ್ ಸ್ಟೋರೇಜ್; 20ಕ್ಕೂ ಹೆಚ್ಚು ಕಾರ್ಮಿಕರು ಅವಶೇಷಗಳಡಿ ಸಿಲುಕಿರುವ ಶಂಕೆ

ಸಂಭಾಲ್, ಮಾ.16– ಸಂಭಾಲ್ ಜಿಲ್ಲೆಯಲ್ಲಿ ಗುರುವಾರ ಕೋಲ್ಡ್ ಸ್ಟೋರೇಜ್ ಕುಸಿದು ಬಿದ್ದಿದ್ದು, 20ಕ್ಕೂ ಹೆಚ್ಚು ಕಾರ್ಮಿಕರು ಅವಶೇಷಗಳಡಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ವರದಿಗಳ ಪ್ರಕಾರ, ಈ ಘಟನೆಯು ಚಂದೌಸಿಯ ಮಾವಾಯಿ ಗ್ರಾಮದ ಕೋಲ್ಡ್ ಸ್ಟೋರೇಜ್‌ನಲ್ಲಿ ನಡೆದಿದೆ. ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ತಂಡಗಳೊಂದಿಗೆ ತಕ್ಷಣ ಸ್ಥಳಕ್ಕೆ ತಲುಪುವಂತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಗಾಯಗೊಂಡವರಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಈ ಮಧ್ಯೆ, ಸ್ಥಳೀಯ ಜನರು ಈಗಾಗಲೇ ಗ್ರಾಮಕ್ಕೆ ತಲುಪಿದ್ದು, ರಕ್ಷಣಾ ಕಾರ್ಯಾಚರಣೆಗೆ ಸಹಾಯ ಮಾಡುತ್ತಿದ್ದಾರೆ. ಕಟ್ಟಡ ಕುಸಿತದ ನಂತರ ಅಮೋನಿಯಾ ಅನಿಲ ಸೋರಿಕೆಯಾಗಿದೆ. ಅಗ್ನಿಶಾಮಕ ದಳದ ಸಿಬ್ಬಂದಿ ಒಳಗೆ ಬಂದು ಸೋರಿಕೆಯನ್ನು ತಡೆದಿದ್ದಾರೆ ಎಂದು ವರದಿಯಾಗಿದೆ. ಏಳರಿಂದ ಎಂಟು ಜೆಸಿಬಿ ಯಂತ್ರಗಳು ಅವಶೇಷಗಳನ್ನು ತೆರವುಗೊಳಿಸಲು ಮತ್ತು ಅದರ ಅಡಿಯಲ್ಲಿ ಸಿಲುಕಿರುವವರನ್ನು ರಕ್ಷಿಸಲು ಕೆಲಸ ಮಾಡುತ್ತಿವೆ. ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗುತ್ತಿದೆ.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ವಧು ಪರೀಕ್ಷೆ ಸಮಯದಲ್ಲಿ ನೀವು ತುಂಬಾ ಕೋಪದಲ್ಲಿದ್ರಿ ನೆನಪಿದೆಯೇ?

ಗಂಡ : ಹೌದು ! ಕೋಪದಲ್ಲಿ ತೆಗೆದುಕೊಳ್ಳುವ ಯಾವ ನಿರ್ಧಾರವೂ ಸರಿಯಿರುವುದಿಲ್ಲ ಎಂದು ನಮ್ಮ ಮದುವೆಯ ನಂತರವೇ ಗೊತ್ತಾದದು.

ಮೈಸೂರು ಮಿತ್ರ
ಶುಕ್ರವಾರ, 17 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಭವಿಷ್ಯತ್ತಿನೊಂದಿಗೆ ಯಾರು ಅತೀ ಸಮೀಪವರ್ತಿಯಾಗಿದ್ದಾನೋ ಅವನನ್ನು ನಾನು ಸನ್ಮಾರ್ಗಿ ಎಂದು ಭಾವಿಸುತ್ತೇನೆ. –ಹೆನ್ರಿಕ್ ಇಬ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಊರನ್ನೇ ಬಿಟ್ಟೋನಿಗೆ ನೀರಿನ ಹಂಗೇನು

ನಿಮ್ಮ ಪತ್ರಗಳು

ಸಂಚಾರಿ ಪೋಲೀಸರ ಹೊಸ ದಂಡದ ಪರಿ?

ಮಾನ್ಯರೆ,

ಮೈಸೂರು ನಗರದಲ್ಲಿ ಸಂಚಾರಿ ಪೊಲೀಸರು ವಾಹನಗಳ ತಪಾಸಣೆಯಲ್ಲಿ ಪ್ರಮುಖವಾಗಿ ಹೆಲ್ಮೆಟ್ ರಹಿತ ಚಾಲನೆ, ರಹದಾರಿ ರಹಿತ ಚಾಲನೆಗಾಗಿ ಹಿಡಿದು ದಂಡ ವಸೂಲಿ ಮಾಡುತ್ತಿರುವುದು ಸರಿಯಷ್ಟೆ, ಅದರೆ ಇತ್ತೀಚೆಗೆ ದ್ವಿಚಕ್ರ ವಾಹನ ಸವಾರರಿಂದ ಹೊಸ ದಂಡ ವಸೂಲಿ ಮಾಡುತ್ತಿರುವುದು ಬಹುತೇಕರಿಗೆ ತಿಳಿದಿಲ್ಲವಷ್ಟೆ. ದಿನಾಂಕ 15.3.2023 ರಂದು ಓರ್ವ ವ್ಯಕ್ತಿ ಆಕ್ಟೀವಾ ವಾಹನದಲ್ಲಿ ಸುಮಾರು ಇಪ್ಪತ್ತು ಕಚೇರಿ ಕಡತಗಳನ್ನು ಕಾಲಿಡುವ ಮುಂಭಾಗದಲ್ಲಿ ತೆಗೆದುಕೊಂಡು ಹೋಗುವಾಗ, ಯಾದವಗಿರಿ ಕೆಳಸೇತುವೆ ಬಳಿ ವಾಹನ ತಪಾಸಣೆ ನಡೆಸುತ್ತಿದ್ದ ಸಂಚಾರಿ ಪೊಲೀಸರು ತಡೆದು, ನಂತರ ಅತ ಕೊಂಡೊಯ್ಯುತ್ತಿರುವ ಕಡತಗಳು ಓವರ್‌ಲೋಡ್ ಆಗಿರುವುದರಿಂದ, ಅದಕ್ಕಾಗಿ ಆತನ ಬಳಿ ಒಂದು ಸಾವಿರ ರೂ. ದಂಡ ಕಟ್ಟಲು ತಿಳಿಸಿದರು. ಅಮಾಯಕ ಕಚೇರಿ ಅಟೆಂಡರ್ ಹಲವಾರು ವರುಷಗಳಿಂದಲೂ ತಾನು ಈ ಕೆಲಸ ನಿರ್ವಹಿಸುತ್ತಿದ್ದು, ಇದೇ ಮೊದಲ ಬಾರಿಗೆ ಓವರ್‌ಲೋಡ್‌ಗೆ ದಂಡ ವಿಧಿಸಿರುವುದಕ್ಕೆ ದಂಗಾಗಿ ಹೋಗಿದ್ದ. ಅಲ್ಲೇ ನೋಡುತ್ತಿದ್ದ ಕೆಲವರಿಗೂ ಇದು ಹೊಸದು ಎನಿಸಿದರೂ, ಬಹುಶಃ ಸರ್ಕಾರವು ತನ್ನ ಖಜಾನೆ ತುಂಬಿಸಲು ಈ ರೀತಿಯ ಹೊಸ ಪ್ರಯೋಗಗಳನ್ನು ಮಾಡಿ ಜನರಿಗೆ ಹಿಂಸಿಸುತ್ತಿರಬಹುದೇ ಎನ್ನುವ ಪ್ರಶ್ನೆ ಕಾಡಿದ್ದು ತಪ್ಪಲ್ಲ. ಕೊನೆಗೆ ಆ ಹುಡುಗ ನೂರು ಕೊಟ್ಟು ಅಲ್ಲಿಂದ ತೆರಳಿದ. ಮೂವರು ನಾಲ್ವರನ್ನು ಕೂರಿಸಿಕೊಂಡು ಹೋಗುತ್ತಿರುವುದನ್ನು ಕಂಡೂ ಸುಮ್ಮನಿರುವ ಪೊಲೀಸರು ಕೇವಲ ಕಚೇರಿಯಿಂದ ಕಚೇರಿಗೆ ದಿನನಿತ್ಯದ ಕಡತಗಳನ್ನು ತೆಗೆದುಕೊಂಡು ಹೋಗುವವರಿಗೆ ಓವರ್ ಲೋಡ್ ವಿಧಿಸಿರುವ ದಂಡ ಎಷ್ಟರ ಮಟ್ಟಿಗೆ ಸರಿ? ಬಹುಶಃ ಪೊಲೀಸ್ ಅಧಿಕಾರಿಗಳು ಇದಕ್ಕೆ ಸಮಜಾಯಿಷಿ ನೀಡುವರೇ? ಅಥವಾ ಇನ್ನೂ ಮುಂದೆ ಈ ರೀತಿಯ ಹೊಸ ಹೊಸ ದಂಡಗಳನ್ನು ಹುಡುಕಿಕೊಂಡು ಹಾಕುವರೇ?

–ವಿಜಯ್ ಹೆಮ್ಮಿಗೆ, ಮೈಸೂರು

ಹೊಟ್ಟೆ ಮೇಲೆ ಹೊಡೆಯದಿರಿ

ಮಾನ್ಯರೆ,

ಯಾವುದೇ ಪಕ್ಷ ಅಧಿಕಾರದಲ್ಲಿ ಇದ್ದಾಗ ಹೊಸ ಯೋಜನೆಗಳನ್ನು ಜಾರಿಗೆ ತರುತ್ತವೆ. ಮುಂದೆ ಮತ್ತೊಂದು ಪಕ್ಷ ಅಧಿಕಾರಕ್ಕೆ ಬಂದಾಗ ಹಿಂದಿನ ಯೋಜನೆಗಳ ಮೇಲೆ ಒತ್ತು ನೀಡುವುದು ವಿರಳ. ಈ ಹಿಂದೆ ಸಿದ್ದರಾಮಯ್ಯ ಸರ್ಕಾರ ಅಧಿಕಾರದಲ್ಲಿದ್ದಾಗ ಜಾರಿಗೆ ತಂದ ಯೋಜನೆಗಳಲ್ಲಿ ಬಡವರು ಹಾಗೂ ಮಧ್ಯಮ ವರ್ಗದ ಜನರಿಗೆ ಪ್ರಯೋಜನಕಾರಿಯಾಗಿದ್ದು ಇಂದಿರಾ ಕ್ಯಾಂಟೀನ್ ಯೋಜನೆ. ದಿನಗೂಲಿ ಕಾರ್ಮಿಕರಿಗೆ, ಆಟೋ ಚಾಲಕರಿಗೆ, ವಿದ್ಯಾರ್ಥಿಗಳಿಗೆ ಮತ್ತು ಇನ್ನಿತರ ಕಾರ್ಮಿಕರಿಗೆ ಇಂದಿರಾ ಕ್ಯಾಂಟೀನ್ ವರದಾನವಾಗಿತ್ತು.

ಈಗಾಗಲೇ ಹತ್ತಕ್ಕೂ ಹೆಚ್ಚು ಕ್ಯಾಂಟೀನ್ ರಾತ್ರಿ ಊಟ ವಿತರಣೆ ನಿಲ್ಲಿಸಿ, ಮೊಬೈಲ್ ಕ್ಯಾಂಟೀನ್‌ಗಳನ್ನು ಸಹ ಸ್ಥಗಿತಗೊಳಿಸಲಾಗಿದೆ. ಕೆಲ ಭಾಗಗಳಲ್ಲಿ ಇಂದಿರಾ ಕ್ಯಾಂಟೀನ್‌ಗಳು ಮುಚ್ಚುವ ಸ್ಥಿತಿಯಲ್ಲಿವೆ. ಅದಕ್ಕೆ ಕಾರಣ ಬಿಜೆಪಿ ಸರ್ಕಾರ ಇವುಗಳ ಬಗ್ಗೆ ತಳೆದಿರುವ ನಿರ್ಲಕ್ಷ್ಯ. ಇಂದಿರಾ ಕ್ಯಾಂಟೀನ್ ಉಸ್ತುವಾರಿ ವಹಿಸಲಾಗಿದ್ದ ಸಂಸ್ಥೆಗಳಿಗೆ ಕಳೆದ ವರ್ಷ ಅಗಸ್ಟ್ 2022ರಿಂದಲೇ ಬಿಲ್ ಪಾವತಿ ಆಗಿಲ್ಲ ಎಂದು ಸುದ್ದಿ. ಆಹಾರದ ರುಚಿ ಕಡಿಮೆಯಾಗಿರುವುದರಿಂದ ಕ್ಯಾಂಟೀನ್‌ಗೆ ಹೋಗುವ ಜನರ ಸಂಖ್ಯೆ ಕೂಡ ಇಳಿಕೆಯಾಗುತ್ತಿದೆ. ಹಾಗಾಗಿ ಸರ್ಕಾರ ರಾಜ್ಯದಲ್ಲಿ ಹೊಸ ಯೋಜನೆಗಳಿಗೆ ಚಾಲನೆ ನೀಡುವುದು ಮಾತ್ರವಲ್ಲದೆ, ಇಂದಿರಾ ಕ್ಯಾಂಟೀನ್ ಯೋಜನೆಗೂ ಕೂಡ ಒತ್ತು ನೀಡಲಿ.

–ಆನಂದ ಜೇವೂರ್, ಕಲಬುರಗಿ

ಅಪಾಯಕ್ಕೆ ಆಹ್ವಾನ ನೀಡುವ ವೃಕ್ಷಗಳು

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಅರೇನಹಳ್ಳಿ ಮತ್ತು ದೊಡ್ಡಬೇಲಾಳು ಗ್ರಾಮಗಳ ಮಧ್ಯೆ ರಸ್ತೆಯ ಇಕ್ಕೆಲಗಳಲ್ಲಿ ಬೆಳೆದು ಒಣಗಿ ಬೋಳಾಗಿ ನಿಂತಿರುವ ಮರಗಳು ಅಪಾಯಕ್ಕೆ ಆಹ್ವಾನ ನೀಡುವಂತಿವೆ.

ಪಿರಿಯಾಪಟ್ಟಣ ಮತ್ತು ಕೆ.ಆರ್.ನಗರ ತಾಲೂಕು ಗಳಿಗೆ ಪ್ರಮುಖ ಸಂಪರ್ಕ ಮುಖ್ಯ ರಸ್ತೆಯಲ್ಲಿರುವ ಅನೇಕ ಮರಗಳು ಬೇರು ಸಮೇತ ಒಣಗಿ ನಿಂತಿವೆ. ಬೇರುಗಳ ಸಡಿಲಿಕೆಯೇ ಇದಕ್ಕೆ ಮುಖ್ಯ ಕಾರಣ ಇರಬಹುದು. ಬೇಸಿಗೆ ಋತುವಿನ ಆರಂಭಕ್ಕೂ ಮುನ್ನ ಮರಗಳು ಎಲೆಗಳ ಉದುರಿಸಿ ಹಳೆಬೇರಿನಲ್ಲೇ ಹೊಸಚಿಗುರು ಮೂಡಿಸುವ ಯುಗಾದಿಯ ನವ ವಸಂತದ ಕಾಲದಲ್ಲೇ ಬರೇ ಬೋಳಾಗಿ ಒಣಗಿ ನಿಂತಿರುವುದು ಬೇಸರದ ವಿಷಯ. ಆದರೆ ಇಲ್ಲೇ ತಿರುಗಾಡುವ ಜನಪ್ರತಿನಿಧಿಗಳ ಕಣ್ಣಿಗೆ ಇದು ಇನ್ನೂ ಬೀಳದಿರುವುದು ಅವರ ಜನಪರ ಕಾಳಜಿಯನ್ನು ಕುರಿತು ಹೇಳುತ್ತದೆಯಲ್ಲವೇ! ಯಾರಾದರೂ ಪ್ರಯಾಣಿಕರು, ಪಾದಚಾರಿಗಳು, ರಾತ್ರಿವೇಳೆಯಲ್ಲಿ ಸಂಚರಿಸುವಾಗ ಗಾಳಿಗೋ ದಿಢೀರ್ ಮಳೆಗೋ ಬೀಳುವ ಸಂಭವ ಹೆಚ್ಚಾಗಿದ್ದು, ಈ ಬಗ್ಗೆ ಸ್ಥಳೀಯ ಆಡಳಿತ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಲು ಮುಂದಾಗಬೇಕೆಂಬುದು ಸಾರ್ವಜನಿಕರ ಮನವಿ.

–ಎ.ಎಸ್.ಗೋವಿಂದೇಗೌಡ, ಅರೇನಹಳ್ಳಿ, ಪಿ. ಪಟ್ಟಣ ತಾ.

ನಿಜವಾದ ಸಂಶೋಧಕರು ಪಿಎಚ್‌ಡಿ ಪಡೆಯುವಂತಾಗಲಿ

ಮಾನ್ಯರೆ,

ಇದೀಗ ಯುಜಿಸಿ ಅಧ್ಯಕ್ಷ ಜಗದೇಶ್ ಕುಮಾರ್ ಅವರು, ಪಿಹೆಚ್‌ಡಿ ಪದವಿ ಸಹಾಯಕ ಪ್ರಾಧ್ಯಾಪಕ ಅಥವಾ ಪ್ರಾಧ್ಯಾಪಕ ಹುದ್ದೆಗೆ ಇನ್ನು ಮುಂದೆ ಅಗತ್ಯ ಅರ್ಹತೆ ಆಗಿರುವುದಿಲ್ಲ ಎಂಬ ಐತಿಹಾಸಿಕ(!) ಘೋಷಣೆ ಮಾಡಿದ್ದಾರೆ. ಅಂತೂ ಯುಜಿಸಿ ಅಧ್ಯಕ್ಷರಿಗೆ ಈಗಲಾದರೂ ಪಿಹೆಚ್‌ಡಿ ಪದವಿಗೂ ಪಾಠ ಮಾಡುವುದಕ್ಕೂ ಸಂಬಂಧವಿಲ್ಲವೆಂಬ ವಿಚಾರ ಹೊಳೆದಿರುವುದಕ್ಕೆ ಅವರಿಗೆ ಅಭಿನಂದನೆಗಳು!. ಆದರೆ ಕಾಲ ಮೀರಿದೆ. ದೇಶದಾದ್ಯಂತ ಸಾವಿರಾರು ಯೋಗ್ಯ ಅಭ್ಯರ್ಥಿಗಳು ಕಳೆದ ಇಪ್ಪತ್ತಕ್ಕೂ ಹೆಚ್ಚು ವರ್ಷಗಳಿಂದ ಎನ್‌ಇಟಿ ಪಾಸು ಮಾಡಿಕೊಂಡು ಪಿಹೆಚ್‌ಡಿಗಳೊಂದಿಗೆ ಸ್ಪರ್ಧಿಸಲಾಗದೆ(?) ಬೀದಿ ಬೀದಿ ಅಲೆಯುತ್ತಿದ್ದಾರೆ. ಇಲ್ಲವೇ ಸಿಕ್ಕ ಸಿಕ್ಕ ಕೆಲಸ ಮಾಡಿಕೊಂಡು ಜೀವನ ತಳ್ಳುತ್ತಿದ್ದಾರೆ ! ಹಳ್ಳಿಗಳಲ್ಲಿ ಒಂದು ಗಾದೆ ಮಾತಿದೆ 'ಕೆಟ್ಟ ಮೇಲೆ ಬುದ್ಧಿ ಬಂತು, ಅಟ್ಟ ಮೇಲೆ ಒಲೆ ಉರಿಯಿತು' ಅಂತ. ಹಾಗೆ ಯುಜಿಸಿಗೆ ಕೆಟ್ಟ ಮೇಲೆ ಬುದ್ಧಿ ಬಂದಿದೆ. ಇನ್ನು ಮುಂದಾದರೂ ಪಿಹೆಚ್‌ಡಿ ಪದವಿಗಳು 'ಸಂತೆಯಲ್ಲಿ ಕಡ್ಲೆ ಪುರಿಯಂತೆ' ಮಾರಾಟವಾಗುವುದು ನಿಂತು 'ನಿಜವಾದ ಸಂಶೋಧಕರು' ಪಿಹೆಚ್‌ಡಿ ಪದವಿಗಳನ್ನು ಪಡೆಯುವಂತಾಗಲೆಂದು ಆಶಿಸೋಣವೇ?

–ರಾಜಶೇಖರಮೂರ್ತಿ, ಅತಿಥಿ ಉಪನ್ಯಾಸಕ, ರಾಮನಗರ.

ತಿದ್ದುಪಡಿ ಹಾಗೂ ಸ್ಪಷ್ಟೀಕರಣ

'ಮೈಸೂರು ಮಿತ್ರ' ಗುರುವಾರದ ಸಂಚಿಕೆಯ ನಾಲ್ಕನೇ ಪುಟದಲ್ಲಿ ಪ್ರಕಟವಾಗಿದ್ದ **'ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಣನೆ... ನಾಟಕೀಯಮಯ್ಯಾ ಈ ರಾಜಕೀಯ ರಂಗ'** ಕಿರು ಲೇಖನದ ಲೇಖಕರು ರವಿ ಎಂ. ಆಗಿದ್ದು, ಕಣ್ತಪ್ಪಿನಿಂದಾಗಿ ಬೇರೆಯವರ ಹೆಸರು ಪ್ರಕಟವಾಗಿತ್ತು. ಇದಕ್ಕಾಗಿ ವಿಷಾದಿಸುತ್ತೇವೆ. – ಸಂಪಾದಕ



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಕನ್ನಡಿಗರ ಹೃದಯದಲ್ಲಿ ಅಪ್ಪು ಶಾಶ್ವತ

ಮಾರ್ಚ್ 17, ಖ್ಯಾತ ಚಲನ ಚಿತ್ರನಟ "ಪವರ್ ಸ್ಟಾರ್" ಡಾ.ಪುನೀತ್ ರಾಜ್ ಕುಮಾರ್ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.

ವಿಧಿಯ ಕ್ರೂರ ಆಟವು ಪ್ರತಿಭಾವಂತ ನಟ ಪುನೀತ್ ರಾಜಕುಮಾರ್ ಅವರನ್ನು ನಮ್ಮಿಂದ ಕಸಿದು ಕೊಂಡಿದೆ. ಇದು ಸಾಯುವ ವಯಸ್ಸಲ್ಲ. ಮುಂಬರುವ ಪೀಳಿಗೆಯೂ ಅವರ ಅದ್ಭುತ ವ್ಯಕ್ತಿತ್ವ ಮತ್ತು ಕಾರ್ಯಕ್ಕಾಗಿ ಅವರನ್ನು ಪ್ರೀತಿಯಿಂದ ಸ್ಮರಿಸಲಿದೆ..... 2021 ಅಕ್ಟೋಬರ್ 29 ರಂದು ಕಿರಿಯ ವಯಸ್ಸಿನ ಮಹಾನ್ ನಟ ಡಾ.ಪುನೀತ್ ರಾಜಕುಮಾರ್‌ರ ನಿಧನದ ಸುದ್ದಿ ಕೇಳುತ್ತಲೇ ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿ ದುಃಖದಿಂದ ಉದ್ಗರಿಸಿದ್ದ ಈ ನುಡಿಗಳು ಅಕ್ಷರಕ್ಷರವೂ ಸತ್ಯ. "ಅಪ್ಪು ಹುಟ್ಟಿನಿಂದಲೇ ಕಲಾವಿದ.ಕಲೆ ಅನ್ನುವುದನ್ನು ಯಾರೂ ಅವನಿಗೆ ಹೇಳಿ ಕೊಟ್ಟಿಲ್ಲ. ರಾಜಕುಮಾರ್ ಅವರ ಮೇರು ಕಾಲದಲ್ಲಿ ಹುಟ್ಟಿದ್ದ ಪುನೀತ್ ಅವರ ಕಲಾ ಪ್ರತಿಭೆಯನ್ನು ಹುಟ್ಟುವಾಗಲೇ ಹೊತ್ತು ತಂದಿದ್ದ.ರಾಜಕುಮಾರ್ ಅವರ 'Concentrated' ಪ್ರತಿಭೆ ಅಪ್ಪು. ಯುವ ನಟರು ಇವನಿಂದ ಕಲಿಯುವಂತಹದ್ದು ಬಹಳಷ್ಟಿದೆ....." ಪುನೀತ್ ಹುಟ್ಟಿದಂದಿನಿಂದಲೂ ಪ್ರತಿ ಹೆಜ್ಜೆಯನ್ನೂ ಕಂಡಿದ್ದ ಖ್ಯಾತ ಚಿತ್ರ ನಿರ್ದೇಶಕ ಎಸ್.ಕೆ. ಭಗವಾನ್ ಮಾತುಗಳಿವು. ಪುನೀತ್ ರಾಜಕುಮಾರ್ ಜನ್ಮತಃ ಕಲಾವಿದ. ನಟನೆ ಎಂಬುದು ಅವರಲ್ಲಿ ರಕ್ತಗತವಾಗಿ ಬಂದಿತ್ತು. ದೇಶದ ಪ್ರಧಾನಿಯಿಂದ ಹಿಡಿದು ಓರ್ವ ಸಾಮಾನ್ಯ ವ್ಯಕ್ತಿಯ ತನಕ ಪ್ರತಿಯೊಬ್ಬರೂ ಅಭಿಮಾನಿಸುವ ಅಪರೂಪದ ಕಲಾವಿದರಾಗಿದ್ದರು ಪುನೀತ್ ರಾಜಕುಮಾರ್.

ಐದಾರು ತಿಂಗಳ ಎಳೆಯ ಮಗುವಿನಲ್ಲೇ ಪ್ರಸಿದ್ಧ ನಿರ್ದೇಶಕ ವಿ.ಸೋಮಶೇಖರ್ ನಿರ್ದೇಶನದ 'ಪ್ರೇಮದ ಕಾಣಿಕೆ' ಚಿತ್ರದ ಮೂಲಕ ಕನ್ನಡದ ಬೆಳ್ಳಿತೆರೆಯಲ್ಲಿ ಮೊಟ್ಟ ಮೊದಲಿಗೆ ಕಾಣಿಸಿಕೊಂಡು ಆರಂಭವಾದ 'ಅಪ್ಪು'ವಿನ ಸಿನಿಮಾ ಪಯಣ ಅವರ ಕಡೆಯ ಚಿತ್ರ 'ಗಂಧದ ಗುಡಿ' ವರೆಗೂ ತಡೆಯಿಲ್ಲದೆ ನಿಲ್ಲದ ನದಿಯಾಗಿ ಹರಿದು ಬಂದು ಕನ್ನಡ ಚಿತ್ರ ಚರಿತ್ರೆಯಲ್ಲಿ ಒಂದು ಹೊಸ ಇತಿಹಾಸ ಬರೆದಿದೆ. ಬಾಲ ನಟನಾಗಿ ಪುನೀತ್ ಅಭಿನಯಿಸಿದ 14 ಚಿತ್ರಗಳು ಸೇರಿದಂತೆ ನಾಯಕನಟರಾಗಿ ಅವರು ಅಭಿನಯಿಸಿದ 32 ಚಿತ್ರಗಳು ಒಳಗೊಂಡಂತೆ ಒಟ್ಟು 46 ಚಿತ್ರಗಳಲ್ಲಿ ಅವರು ಅಭಿನಯಿಸಿದ್ದಾರೆ. ಈ ಎಲ್ಲಾ ಚಿತ್ರಗಳು ಕೇವಲ ಸಿನಿಮಾ ಆಗಿರದೆ ಒಂದೊಂದು ಚಿತ್ರವೂ ಅಭೂತ ಪೂರ್ವ ಅನನ್ಯ ಸದಭಿರುಚಿ ಚಿತ್ರಗಳು. ಇಲ್ಲಿ ಅಪ್ಪು ಅಭಿನಯಿಸಿರುವ ಒಂದೇ ಒಂದು ಚಿತ್ರವನ್ನೂ ಕಳಪೆ ಎಂದು ತೆಗೆದು ಹಾಕುವಂತಿಲ್ಲ. ಪ್ರತಿಯೊಂದು ಚಿತ್ರವೂ ಶ್ರೇಷ್ಠ ಮಟ್ಟದ್ದೇ ಆಗಿವೆ.

'ಅಪ್ಪು' ಎಂಬ ಎರಡಕ್ಷರ ಮಾತ್ರದಿಂದಲೇ ಕರ್ನಾಟಕವನ್ನು ಆಲಂಗಿಸಿಕೊಂಡಿದ್ದ ಪವರ್ ಸ್ಟಾರ್ ಪುನೀತ್ ರಾಜಕುಮಾರ್ ಅಭಿನಯದ ಚಲನಚಿತ್ರಗಳನ್ನು ನೋಡಿ ಮೆಚ್ಚದವರುಂಟೆ? ಅಪ್ಪುವಿನ ಅಭಿನಯವನ್ನು ಇಡೀ ಕನ್ನಡನಾಡು ಒಪ್ಪಿ– ಅಪ್ಪಿ, ಮೆಚ್ಚಿ, ಮನದುಂಬಿ ಆನಂದಿಸಿದೆ.ಕಿರಿಯ ವಯಸ್ಸಿನ ಹಿರಿಯ ವ್ಯಕ್ತಿತ್ವದ ಅಪ್ಪುವಿನಂಥ ಹೃದಯವಂತ ಕಲಾವಿದನನ್ನು ಕಳೆದುಕೊಂಡು ಕನ್ನಡನಾಡು ಕಣ್ಣೀರಿಟ್ಟಿದೆ.

ಅಪ್ಪು 'ನಟಸಾರ್ವಭೌಮ' ಎಂದು ಕರೆಸಿಕೊಂಡವರು. ಅಂತೆಯೇ ನಟನೆಯಿಂದಾಚೆಗೂ ಸಹಜ ಬದುಕಿನಲ್ಲಿ 'ಮಾನವತಾವಾದಿ' ಎಂದು ಕೂಗಿಸಿ ಕೊಂಡವರು. ಜೊತೆಗೆ ಅವರೊಬ್ಬ ವಿಸ್ಮಯ ದೋಪಾದಿಯ ಅದ್ಭುತ ವ್ಯಕ್ತಿಯಾಗಿ ಎಲ್ಲರನ್ನೂ, ಎಲ್ಲವನ್ನೂ ಒಳಗೊಂಡವರು. ಕನ್ನಡ ನಾಡು ಇನ್ನೆಂದೂ ಕಾಣದಂತಹ ಬಹು ಅಪರೂಪದ ವಜ್ರಸಿರಿಯ ಕಲಾ ವೈರಮುಡಿಯಿದು. ಅಪ್ಪುವಿನ ಬಗ್ಗೆ ಬರೆಯಹೊರಟರೆ ಅಕ್ಷರಗಳು ಅಳುತ್ತವೆ. ಪದಗಳು ಸೋಲುತ್ತವೆ. ಶಬ್ದಗಳು ನಿಶಬ್ದವಾಗುತ್ತವೆ. ಏನು ಬರೆಯಲಿ? ಏನು ಹೇಳಲಿ? ಕರ್ನಾಟಕ ಮಾತ್ರವಲ್ಲ ದೇಶದ ಉದ್ದಗಲಕ್ಕೂ ಈ ಕ್ಷಣಕ್ಕೂ ಅಪ್ಪು ಅಚ್ಚುಮೆಚ್ಚು. ಅಭಿನಯದ ವಿಚಾರಕ್ಕೆ ಬಂದರೆ ಅಕ್ಷರಶಃ ಅಪ್ಪು ನಟಸಾರ್ವಭೌಮನೇ! ಸಿನಿಮಾ ಜೀವನ ಒತ್ತಟ್ಟಿಗಿರಲಿ. ಅತ್ಯಂತ ಕಿರಿಯ ವಯಸ್ಸಿನಲ್ಲೇ ಅಪ್ಪುವಿನಷ್ಟು ಸದ್ದಿಲ್ಲದೆ ಬಹುದೊಡ್ಡ ಜನೋಪಯೋಗಿ ಕೆಲಸವನ್ನು ಮಾಡಿದ ನಟರು ಬಹಳ ವಿರಳ.

ಅರವತ್ತು ಎಪ್ಪತ್ತರ ದಶಕದಲ್ಲಿ ಚಲನಚಿತ್ರ ಚಟುವಟಿಕೆಗಳು ಹೆಚ್ಚಾಗಿ ಚೆನ್ನೈನಲ್ಲಿ (ಆಗಿನ ಮದ್ರಾಸ್) ಕೇಂದ್ರೀಕೃತಗೊಂಡಿತ್ತು.



ಇರೋದ್ ಒಂದ್ ಜೀವ್ನ
ಹಿಂದೇನಾಯ್ತೋ ನೆನ್ಪಿಲ್ಲ.
ಮುಂದೇನಾಗುತ್ತೋ ಗೊತ್ತಿಲ್ಲ.
ನಾನೇನ್ ತಿಂತೀನಿ, ಎಲ್ಲಿ ಮಲಗ್ತೀನಿ,
ನಾನೇನ್ ಮಾಡ್ತೀನಿ, ಯಾವಾಗ ಎಲ್ಲಿ ಸಾಯ್ತೀನಿ,
ಎಲ್ಲಾನೂ ಬರೆದು ಬಿಟ್ಟಿದ್ದಾನೆ ವಿಧಿ.
ಅವನ್ಮುಂದೆ ನಮ್ದೇನಿಲ್ಲ!"

–ಪುನೀತ್ ರಾಜಕುಮಾರ್

ಹಾಗಾಗಿ ಕಲೆಯನ್ನೇ ನಂಬಿ ಕೊಂಡಿದ್ದ ಡಾ. ರಾಜಕುಮಾರ್ ಕುಟುಂಬ ಆಗ ಚೆನ್ನೈನಲ್ಲಿ ನೆಲೆಸಿತ್ತು. ಆ ಸಂದರ್ಭದಲ್ಲಿ 1975 ಮಾರ್ಚ್ 17ರಂದು ಪುನೀತ್ ರಾಜ್‌ಕುಮಾರ್ ಅವರು ನಟ ಸಾರ್ವಭೌಮ ಡಾ.ರಾಜ್ ಕುಮಾರ್ ಮತ್ತು ಪಾರ್ವತಮ್ಮ ರಾಜ್ ಕುಮಾರ್ ದಂಪತಿಗೆ ಚೆನ್ನೈನ ಕಲ್ಯಾಣಿ ಆಸ್ಪತ್ರೆಯಲ್ಲಿ ಜನಿಸಿದರು. ಪುನೀತ್ ಅವರ ಮೊದಲ ಹೆಸರು ಲೋಹಿತ್. ಬಾಲ ನಟನಾಗಿ ಬಹಳಷ್ಟು ಚಿತ್ರಗಳಲ್ಲಿ ಅದೇ ಹೆಸರಿನಲ್ಲಿ ಅವರು ನಟಿಸಿದ್ದಾರೆ. ಅವರು ಡಾ.ರಾಜ್ ಕುಮಾರ್ ದಂಪತಿಯ ಐದನೇ ಮತ್ತು ಕಿರಿಯ ಪುತ್ರ. ಅವರಿಗೆ ಇಬ್ಬರು ಸಹೋದರರು ಹಿರಿಯಣ್ಣ ಡಾ.ಶಿವರಾಜ್ ಕುಮಾರ್ ಮತ್ತು ಕಿರಿಯಣ್ಣ ರಾಘವೇಂದ್ರ ರಾಜ್ ಕುಮಾರ್. ತಂದೆ ರಾಜ್ ಕುಮಾರ್ ಅವರು ಕಿರಿಯ ಮಗ ಪುನೀತ್‌ರನ್ನು ಮತ್ತು ಕಿರಿಯ ಮಗಳು ಪೂರ್ಣಿಮಾಳನ್ನು ತಾವು ಅಭಿನಯಿಸುತ್ತಿದ್ದ ಚಲನ ಚಿತ್ರಗಳ ಶೂಟಿಂಗ್ ಸ್ಥಳಕ್ಕೆ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಿದ್ದರು. ಹಾಗಾಗಿ ಎಳೆಯ ವಯಸ್ಸಿನಲ್ಲೇ ಪುನೀತ್ ಅವರಿಗೆ ಕಲೆ ಆಕರ್ಷಿಸಿತ್ತು. ಹಾಗಾಗಿ ಮುಂದಕ್ಕೆ ಅಭಿನಯ ವೆಂಬುದು ಅವರಿಗೆ ಸಲೀಸಾಯಿತು. ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆ ದಾಟಿ ಯೌವನಕ್ಕೆ ಹೆಜ್ಜೆಯಿರಿಸಿದ ಅವರು, 1999 ಡಿಸೆಂಬರ್ 1ರಂದು ಚಿಕ್ಕಮಗಳೂರಿನ ಸುಸಂಸ್ಕೃತ ಕುಟುಂಬದ ಹೆಣ್ಣು ಮಗಳು ಅಶ್ವಿನಿ ರೇವಂತ್ ಅವರನ್ನು ವಿವಾಹವಾದರು. ಇವರಿಗೆ ಧೃತಿ ಮತ್ತು ವಂದಿತ ಎಂಬ ಇಬ್ಬರು ಪುತ್ರಿಯರಿದ್ದು ಅವರದೊಂದು ಸುಖೀ ದಾಂಪತ್ಯದ ಸಂಸಾರವಾಗಿತ್ತು.


ಬಾಲ ನಟನಾಗಿ ಪುನೀತ್: ದಿಗ್ದರ್ಶಕ ವಿ.ಸೋಮಶೇಖರ್ ಅವರು ಪುನೀತ್ ಅವರನ್ನು ಆರು ತಿಂಗಳ ಮಗುವಾಗಿದ್ದಾಗ 'ಪ್ರೇಮದಕಾಣಿಕೆ' (1976)ಚಿತ್ರದಲ್ಲಿ ಡಾ.ರಾಜ್ ಮತ್ತು ಆರತಿ ಅವರೊಟ್ಟಿಗೆ ತೆರೆಯ ಮೇಲೆ ತೋರಿಸಿದ್ದರು. ಇದರ ನಂತರ ಪುನೀತ್ ಒಂದು ವರ್ಷದವನಾಗಿದ್ದಾಗ ಕೃಷ್ಣಮೂರ್ತಿ ಪುರಾಣಿಕ್ ಅವರ ಕಾದಂಬರಿ ಆಧಾರಿತ ಅದೇ ಹೆಸರಿನ ವಿಜಯ್ ನಿರ್ದೇಶನದ 'ಸನಾದಿ ಅಪ್ಪಣ್ಣ'(1977) ಚಿತ್ರದಲ್ಲಿ ಪ್ರಮುಖವಾಗಿ ನಟಿಸಿದ್ದರು. ಮತ್ತೆ ವಿ.ಸೋಮಶೇಖರ್ ನಿರ್ದೇಶಿತ 'ತಾಯಿಗೆ ತಕ್ಕ ಮಗ' (1978)ಚಿತ್ರದಲ್ಲಿ ನಟಿಸಿದರಲ್ಲದೆ, ಎರಡು ವರ್ಷಗಳ ನಂತರ ನಿರ್ದೇಶಕ ದೊರೆ–ಭಗವಾನ್ ಅವರು, ಪುನೀತ್ ಅವರನ್ನು 'ವಸಂತಗೀತ' (1980) ಚಿತ್ರದ ಮುಖ್ಯ ಪಾತ್ರದಲ್ಲಿ ಅಭಿನಯಿಸುವಂತೆ ಮಾಡಿದರು.ಇದರ ನಂತರ ನಿರ್ದೇಶಕ ಕೆ.ಎಸ್.ಎಲ್. ಸ್ವಾಮಿ ಅವರ ಪೌರಾಣಿಕ ಚಿತ್ರ 'ಭೂಮಿಗೆ ಬಂದ ಭಗವಂತ' (1981) ಚಿತ್ರದಲ್ಲಿ ಭಗವಾನ್ ಬಾಲಕೃಷ್ಣನಾಗಿ ಪುನೀತ್ ವಿಭಿನ್ನ ಪಾತ್ರದಲ್ಲಿ ಕಾಣಿಸಿಕೊಂಡರು. ಆನಂತರ ಬಿ.ಎಸ್. ರಂಗ ಅವರ 'ಭಾಗ್ಯವಂತ'(1982) ಚಿತ್ರದಲ್ಲಿ ನಟಿಸಿ ಸಂಗೀತ ನಿರ್ದೇಶಕ ಟಿ.ಜಿ. ಲಿಂಗಪ್ಪ ರಾಗ ಸಂಯೋಜಿಸಿದ ತಮ್ಮ ಮೊದಲ ಜನಪ್ರಿಯ ಗೀತೆಯಾದ "ಬಾನದಾರಿಯಲ್ಲಿ ಸೂರ್ಯ ಜಾರಿ ಹೋದ, ಚಂದ್ರ ಮೇಲೆ ಬಂದ......" ಹಾಡನ್ನು ಹಿನ್ನೆಲೆ ಗಾಯಕರಾಗಿ ಪುನೀತ್ ಹಾಡಿದರು.ಇಲ್ಲಿ ಯಶಸ್ವಿಯೂ ಆದರು. ಇವತ್ತಿಗೂ ಬಾನ ದಾರಿಯ ಈ ಹಾಡು ಕನ್ನಡಿಗರೆದೆಯಲ್ಲಿ ಮಧುರವಾಗಿ ಗುನುಗುತ್ತಿರುತ್ತದೆ. ಅದೇ ವರ್ಷ ಪುನೀತ್ ಅವರು ತಮ್ಮ ತಂದೆಯೊಡನೆ 'ಚಲಿಸುವ ಮೋಡಗಳು'ಮತ್ತು 'ಹೊಸಬೆಳಕು' ಎರಡೂ ಜನಪ್ರಿಯ ಚಿತ್ರಗಳಲ್ಲಿ ಅಭಿನಯಿಸಿ ತಾವು ಸಹ ಪ್ರಸಿದ್ಧಿಯ ಶಿಖರ ಏರಿದರು. 'ಚಲಿಸುವ ಮೋಡಗಳು' ಚಿತ್ರದ ಶ್ರೇಷ್ಠ ಅಭಿನಯಕ್ಕಾಗಿ(1982) ಕರ್ನಾಟಕ ರಾಜ್ಯ ಸರ್ಕಾರದಿಂದ ಪುನೀತ್ ಅವರು ಅತ್ಯುತ್ತಮ ಬಾಲ ಕಲಾವಿದ ರಾಜ್ಯ ಪ್ರಶಸ್ತಿಯನ್ನೂ ಹಾಗೂ ಭಾರತ ಸರ್ಕಾರದಿಂದ ಶ್ರೇಷ್ಠ ಬಾಲ ನಟ ರಾಷ್ಟ್ರ ಪ್ರಶಸ್ತಿಯನ್ನೂ ಪಡೆದರು. ಬಾಲ್ಯದಲ್ಲೇ 'ತಂದೆಗೆ ತಕ್ಕ ಮಗ' ನೆಂಬ ಕೀರ್ತಿಗೂ ಭಾಜನರಾದರು. ನಂತರ ಅವರು 'ಭಕ್ತ ಪ್ರಹ್ಲಾದ' ಚಿತ್ರದಲ್ಲಿ ತಂದೆ ರಾಜಕುಮಾರ್ ನಟಿಸಿದ್ದ ಹಿರಣ್ಯಕಶಿಪುವಿನ ಆರ್ಭಟದ ಪಾತ್ರದೆದುರು ಒಂದು ಚೂರೂ ಅಂಜದೆ ಪ್ರಹ್ಲಾದನಾಗಿ ನಟಿಸಿ ಇಡೀ ಪ್ರೇಕ್ಷಕರ ಹೃದಯ ಹೊಕ್ಕಿ ಮನಸೂರೆಗೊಂಡಿದ್ದರು ಮತ್ತು 'ಎರಡು ನಕ್ಷತ್ರಗಳು' (1983) ಚಿತ್ರದಲ್ಲಿ ದ್ವಿಪಾತ್ರದಲ್ಲಿ ಅಭಿನಯಿಸಿ ಅಭೂತಪೂರ್ವ ಯಶಸ್ವಿ ವಿಜಯದ ಏಣಿ ಏರಿದ್ದರು. ಅಷ್ಟೇ ಅಲ್ಲ,ಈ ಚಿತ್ರದ ಶ್ರೇಷ್ಠ ಅಭಿನಯಕ್ಕಾಗಿ ಕರ್ನಾಟಕ ರಾಜ್ಯ ಸರ್ಕಾರದಿಂದ ಎರಡನೇ ಅತ್ಯುತ್ತಮ ಬಾಲ ನಟ ಚಲನಚಿತ್ರ ರಾಜ್ಯ ಪ್ರಶಸ್ತಿಯನ್ನು ಗಳಿಸಿದ್ದರು.

1984 ರಲ್ಲಿ ಪುನೀತ್ ರಾಜ್ ಕುಮಾರ್ ಅವರು ಥ್ರಿಲ್ಲರ್ ಮಾದರಿಯ 'ಯಾರಿವನು?' ಚಿತ್ರದಲ್ಲಿ ನಟಿಸಿದರು. ಬಾಲನಟನಾಗಿ ಪುನೀತ್ ರಾಜಕುಮಾರ್ ಅವರಿಗೆ ದೊಡ್ಡ ಬ್ರೇಕ್ ಕೊಟ್ಟ ಚಿತ್ರವೆಂದರೆ ಅದು 'ಬೆಟ್ಟದಹೂವು' (1985). ಇದು ಎಂ.ಲಕ್ಷ್ಮೀ ನಾರಾಯಣ ನಿರ್ದೇಶಿಸಿದ ಶರ್ಲಿ ಎಲ್. ಅರೋರಾ ಅವರ 'ವಾಟ್ ತೆನ್ ರಾಮನ್, ರಾಮನ್?' ಕಾದಂಬರಿಯಾಧಾರಿತ ಚಿತ್ರ. ಬೆಟ್ಟದ ಹೂವಿನಲ್ಲಿ ಮುಗ್ಧ ರಾಮು ಆಗಿ ಅಭಿನಯಿಸಿ ಆ ಪಾತ್ರಕ್ಕಾಗಿ ಪುನೀತ್ ಅವರು 33ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ ಅತ್ಯುತ್ತಮ ಬಾಲ ನಟ ರಾಷ್ಟ್ರ ಪ್ರಶಸ್ತಿಯನ್ನು ಪಡೆದರು. ಹದಿಹರೆಯದತ್ತ ಹೆಜ್ಜೆ ಇಡುತ್ತಿದ್ದ ಕಾಲಘಟ್ಟದಲ್ಲಿ ಪುನೀತ್ ಅವರು 'ಶಿವ ಮೆಚ್ಚಿದ ಕಣ್ಣಪ್ಪ' (1988)ಚಿತ್ರದಲ್ಲಿ ತನ್ನ ಹಿರಿಯ ಸಹೋದರ ಶಿವರಾಜ ಕುಮಾರ್ ಜತೆ ಅಭಿನಯಿಸಿದರು. ಬಾಲನಟನಾಗಿ ಅವರು ನಟಿಸಿದ ಕೊನೆಯ ಚಿತ್ರ 'ಪರಶುರಾಮ್' (1989)ಆಗಿತ್ತು. ಅದೂ ಸಹ ಅವರ ತಂದೆ ವರನಟ ಡಾ.ರಾಜಕುಮಾರ್ ಜೊತೆಯಲ್ಲಿ!

ನಾಯಕ ನಟರಾಗಿ ಪುನೀತ್: ಏಪ್ರಿಲ್ 2002ರಲ್ಲಿ ಪುನೀತ್ ಅವರು ಪೂರಿ ಜಗನ್ನಾಥ್ ನಿರ್ದೇಶನದ, ಪಾರ್ವತಮ್ಮ ರಾಜ್ ಕುಮಾರ್ ನಿರ್ಮಾಣದ 'ಅಪ್ಪು' ಚಿತ್ರದ ಮೂಲಕ ನಾಯಕ ನಟರಾಗಿ ಕನ್ನಡದ ಬೆಳ್ಳಿತೆರೆಗೆ ಮೊದಲಿಗೆ ಪಾದಾರ್ಪಣೆ ಮಾಡಿದರು.ಇದು ನಟಿ ರಕ್ಷಿತಾ ಅವರ ಮೊದಲ ಚಲನಚಿತ್ರ ಕೂಡ ಆಗಿತ್ತು. ಇದರಲ್ಲಿ ಪುನೀತ್ ಅವರು ಕಾಲೇಜು ಹುಡುಗನ ಪಾತ್ರವನ್ನು ನಿರ್ವಹಿಸಿದ್ದರು. ಅಲ್ಲಿಂದೀಚೆಗೆ ಪುನೀತ್ ರಾಜ್ ಕುಮಾರ್ ಅವರು ಹಿಂತಿರುಗಿ ನೋಡಲೇ ಇಲ್ಲ. ಒಂದರ ಹಿಂದೆ ಒಂದರಂತೆ 'ಗಂಧದ ಗುಡಿ' (2022) ಚಿತ್ರದವರೆವಿಗೂ ಅಭಿನಯಿಸುತ್ತಾ ಹೋದರು. ದುರಂತವೆಂದರೆ ಅವರ ನಟನೆಯ ಕಟ್ಟಕಡೆಯ ಚಿತ್ರ 'ಗಂಧದ ಗುಡಿ' ಹಾಗೂ ಇದರ ಹಿಂದಿನ ಚಿತ್ರಗಳಾದ 'ಲಕ್ಕಿ ಮ್ಯಾನ್' ಹಾಗೂ 'ಜೇಮ್ಸ್' ಚಿತ್ರಗಳನ್ನು ಅವರು ನೋಡ ಲಾಗಲೇ ಇಲ್ಲ. ಅಷ್ಟರಲ್ಲಾಗಲೇ ಪುನೀತ್ ರಾಜಕುಮಾರ್ ಅವರು 2021 ಅಕ್ಟೋಬರ್ 29 ರಂದು ಇಹಲೋಕ ತ್ಯಜಿಸಿದರು.

ರಾಜ್ಯ ವಿಧಾನಸಭಾ ಚುನಾವಣೆಗೆ ದಿನಗಣನೆ...

ನಾವೇಕೆ ವೋಟು ಹಾಕಬೇಕು...?



ರವಿ ಜೋಷಿ
ಕ್ಯಾಬಿನೆಟ್ ಕಾರ್ಯಾಲಯದ ಮಾಜಿ ಅಧಿಕಾರಿ

ಏಕೆಂದರೆ, ಪ್ರಜಾಪ್ರಭುತ್ವವು ಜನ ಸಮ್ಮತಿಯಿಂದ ಅಸ್ತಿತ್ವಕ್ಕೆ ಬರುವ ಸರ್ಕಾರ. ಈ ಸಮ್ಮತಿಯ ಸೂಚಿಯಾಗಿರುವ ವೋಟು, ಆಳುವವರಿಗೆ ಪ್ರಜಾನುಮೋದನೆ ಮೂಲಕ ನ್ಯಾಯಯುಕ್ತತೆಯನ್ನು ಒದಗಿಸುತ್ತದೆ. ಆದುದರಿಂದ ವೋಟಿಗೆ ಇರುವ ಪ್ರಮುಖ ಶಕ್ತಿಯೆಂದರೆ:

1. ಇದು ಪ್ರಜೆಗಳ ಧೃಢ ವಿಶ್ವಾಸದ ಸಂಕೇತವೂ ಹೌದು. ಅಂದರೆ ಪ್ರಜೆಗಳೇ ಸಾರ್ವಭೌಮರಾಗಿದ್ದು, ಈ ಬಲದ ಒಂದಿಷ್ಟನ್ನು ನಮ್ಮನ್ನಾಳುವ ರಾಜಕೀಯ ಪಕ್ಷ, ಪ್ರತಿನಿಧಿಗಳಿಗೆ ವರ್ಗಾಯಿಸಿ, ಬದಲಿಗೆ ಕೆಲವೊಂದು ಕಸಿದುಕೊಳ್ಳಲಾಗದ ನಿರ್ದಿಷ್ಟ ಹಕ್ಕುಗಳನ್ನು ಪಡೆಯುತ್ತೇವೆ. ಇವುಗಳನ್ನು ಭಾರತದ ಸಂವಿಧಾನದ ಭಾಗ 3 ರಲ್ಲಿ ಮೂಲಭೂತ ಹಕ್ಕೆಂದು ಪಟ್ಟಿ ಮಾಡಲಾಗಿದೆ.

2. ನಮ್ಮ ವೋಟು ಕೇವಲ ಪ್ರತಿನಿಧಿಯ ಆಯ್ಕೆಗೆ ಮಾತ್ರ ಸೀಮಿತವಾಗಿರದೆ ಸಂವಿಧಾನದ ಆಶಯ ಮತ್ತು ಮೌಲ್ಯಗಳಲ್ಲಿನ ನಮ್ಮ ವಿಶ್ವಾಸವನ್ನೂ ಸೂಚಿಸುತ್ತದೆ. ನಾವು ವೋಟು ಹಾಕುವ ಪಕ್ಷವು ನಮ್ಮೆಲ್ಲರ ಬದುಕನ್ನು ಉತ್ತಮಗೊಳಿಸಬಲ್ಲದೆಂಬ ನಂಬಿಕೆಯ ಸೂಚಿಯೂ ಇದಾಗಿದೆ.

3. ವೋಟಿಗಿರುವ ಮತ್ತೊಂದು ಮಹತ್ವವೆಂದರೆ 'ಒಬ್ಬ ವ್ಯಕ್ತಿ ಒಂದು ವೋಟು' ಎನ್ನುವ ಸಮಾನತೆ ತತ್ವ. ಇದು ಸಮಾನತೆ ಮತ್ತು ರಾಜಕೀಯ ಪ್ರಜಾಪ್ರಭುತ್ವದ ಧೋರಣೆಯನ್ನು ಎತ್ತಿ ಹಿಡಿಯುತ್ತದೆ. ಈ ಸಂಗತಿಯನ್ನು ನಮ್ಮ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅಂದೇ ವ್ಯಕ್ತಪಡಿಸಿದ್ದ ಭಾವನೆಯಲ್ಲಿ ಗಮನಿಸಬಹುದು. **'ಅತೀ ಅಸಮಾನತೆ ಮತ್ತು ನ್ಯಾಯಹೀನವಾದ ಶ್ರೇಣೀಕೃತ ಸಾಮಾಜಿಕತೆಯಲ್ಲಿ ರಾಜಕೀಯ ಪ್ರಜಾಪ್ರಭುತ್ವ ಕೇವಲ ಸೋಗಲಾಡಿತನವಷ್ಟೇ'** ಎನ್ನುವ ಅವರ ಕಳವಳ ಇಂದು ಸತ್ಯವಾದಂತಿದೆ.



4. ಪ್ರಜಾಪ್ರಭುತ್ವದಲ್ಲಿ ಮತ ಚಲಾವಣೆಯು ಮೂಲಭೂತ ಹಕ್ಕು ಮಾತ್ರವಲ್ಲ ಕರ್ತವ್ಯವೂ ಕೂಡ. ಬೃಹತ್ ಸಂಖ್ಯೆಯ ಜನ ಮತದಾನದಲ್ಲಿ ಭಾಗವಹಿಸುವುದರಿಂದ ತಮ್ಮ ಮತದ ಮಹತ್ವ ಮತ್ತು ಅಭಿಪ್ರಾಯದ ಬಗ್ಗೆ ಗಮನ ಸೆಳೆದಂತಾಗುತ್ತದೆ. ಪ್ರಜೆಗಳಲ್ಲಿರುವ ರಾಜಕೀಯ ಪ್ರಜ್ಞೆ ಮತ್ತು ಅಸ್ತಿತ್ವಕ್ಕೆ ಸಾಕ್ಷಿಯಾಗಿದೆ. ಆಳುವವರ ಭವಿಷ್ಯವು ಜನತೆಯ ಕೈಯ್ಯಲಿದೆ ಎನ್ನುವು ದನ್ನೂ ಇದು ಬಿಂಬಿಸುತ್ತದೆ.

5. ಮತ ಚಲಾಯಿಸುವುದರ ಮೂಲಕ ಆಳುವ ಮತ್ತು ವಿರೋಧ ಪಕ್ಷವನ್ನೂ ಸಹ ಮತದಾರರೇ ನಿರ್ಧರಿಸಬಲ್ಲರು. ವಿರೋಧ ಪಕ್ಷ ಬಲವಾಗಿದ್ದಷ್ಟು ಜನತೆಯ ಕೂಗಿಗೆ ಹೆಚ್ಚು ಬೆಲೆ ಮತ್ತು ಬಲ. ಶಾಸನ ಸಭೆಗಳಲ್ಲಿ ವಿರೋಧ ಪಕ್ಷದ ಧ್ವನಿ ಏರಿದಷ್ಟು ಪ್ರಜಾಪ್ರಭುತ್ವದ ಆರೋಗ್ಯ ಉತ್ತಮವಾಗಿದೆ ಎಂದರ್ಥ. ಆಡಳಿತ ಪಕ್ಷದ ದರ್ಪಕ್ಕೆ ಕಡಿವಾಣ ಹಾಕಲು ವಿರೋಧ ಪಕ್ಷ ಬಲಾಢ್ಯವಾಗಿರಲೇಬೇಕು.

ಪ್ರಜಾಪ್ರಭುತ್ವ ಮತ್ತು ನಾಗರಿಕ ಪ್ರಜ್ಞೆ: ಪ್ರಜಾಪ್ರಭುತ್ವವೆಂಬ ರಾಜಕೀಯ ಪದ್ಧತಿಯಲ್ಲಿ ಹಲವು ಪ್ರಬಲ ನಿರೋಧಕ ಗುಣಗಳಿವೆ.

ಮೊದಲನೆಯದಾಗಿ; ರಾಜಕೀಯ ಪಕ್ಷಗಳ ದರ್ಪ, ಸರ್ವಾಧಿಕಾರಿ ಧೋರಣೆಗಳಿಗೆ ಸದಾ ಸವಾಲುಗಳನ್ನು ಎಸೆದು, ಹದ್ದುಬಸ್ತಿನಲ್ಲಿಡುವುದು. ಅಧಿಕಾರ ಹಸ್ತಾಂತರಗೊಳ್ಳುವ ಸಂದರ್ಭಗಳಲ್ಲಿ ಶಾಂತಿಯುತವಾಗಿ ಪ್ರಕ್ರಿಯೆಗೆ ಸಿದ್ಧವಿರುವ ವ್ಯವಸ್ಥೆ.

ಎರಡನೆಯದಾಗಿ; ರಾಜಕೀಯ ವಿರೋಧ, ಆಡಳಿತ, ವ್ಯಕ್ತಿತ್ವಕ್ಕೆ ಸಂಬಂಧಿಸಿದ ಕಟು ಟೀಕೆ, ಅಭಿಪ್ರಾಯಗಳನ್ನು ಗೌರವಿಸುವುದು. ತೀವ್ರ ಅಭಿಪ್ರಾಯಗಳನ್ನೂ ಸಹ ಸಂಯಮ ಮತ್ತು ಸೌಹಾರ್ದಯುತವಾಗಿ ಸ್ವೀಕರಿಸುವುದು. ವಿರೋಧಗಳನ್ನು ಹಿಂಸಾಚಾರವಿಲ್ಲದೆಯೇ ಇತ್ಯರ್ಥಗೊಳಿಸಿಕೊಳ್ಳುವಂತಹ ಸಜ್ಜನಿಕೆಯ ಲಕ್ಷಣ. ವಿಶೇಷವಾಗಿ ಭಾರತೀಯರ ಸಂಸ್ಕೃತಿ, ಸಂಪ್ರದಾಯಗಳಲ್ಲಿ ಗಾಢವಾಗಿರುವಂತಹ ಮನೋಭಿವ್ಯಕ್ತಿಯಾಗಿರುತ್ತವೆ. ಉದಾಹರಣೆಗೆ, ಇತ್ತೀಚೆಗೆ ಉತ್ತರ ಪ್ರದೇಶ, ಹರಿಯಾಣ ಮತ್ತು ಪಂಜಾಬ್ ರಾಜ್ಯಗಳ ಕೃಷಿಕರು ಕೇಂದ್ರದ ರೈತವಿರೋಧಿ ಕಾನೂನುಗಳನ್ನು ವಿರೋಧಿಸಿ ಯಶಸ್ವಿಯಾದ ವರ್ಷದುದ್ದದ ಪ್ರತಿಭಟನೆ.

ಮೂರನೆಯದಾಗಿ; ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಿತಿಗಳೂ ಇವೆ. ಆದರೂ ಜನತೆಯ ಆಶೋತ್ತರ, ಹಿತಾಸಕ್ತಿಗಳಿಗೆ ಅತ್ಯುತ್ತಮವಾಗಿ ಸ್ಪಂದಿಸುವ ಗುಣ ಈ ರಾಜಕೀಯ ವ್ಯವಸ್ಥೆಯಲ್ಲಿ ಇರುವಷ್ಟು ಶಕ್ತಿಯುತವಾಗಿ ಮತ್ಯಾವ ರಾಜಕೀಯ ವ್ಯವಸ್ಥೆಯಲ್ಲೂ ಇಲ್ಲ. ಆದುದರಿಂದಲೇ ಇದನ್ನು ಬೆಂಬಲಿಸುವ ಕರ್ತವ್ಯ ಪ್ರಜ್ಞೆ ಪ್ರತಿಯೊಬ್ಬ ನಾಗರಿಕನೂ ರೂಢಿಸಿಕೊಳ್ಳಲೇಬೇಕು. ಆದುದರಿಂದ ಮತಚಲಾಯಿಸುವುದು ಪ್ರತಿಯೊಬ್ಬ ಪ್ರಾಪ್ತ ಪ್ರಜೆಯ ಬಹು ಮುಖ್ಯವಾದ ಜೀವನ ಮೌಲ್ಯ. ಇದು ಬಲಿಷ್ಠವಾದಷ್ಟು ಪ್ರಜೆಗಳ ಬದುಕು ಮತ್ತು ಚಿಂತನೆ ಸಕಾರಾತ್ಮಕವಾಗಿರುತ್ತದೆ ಎನ್ನುವುದನ್ನು ಮರೆಯಬಾರದು.

ಭಾರತದ ಜನತೆ 1947ನೇ ಇಸವಿ ಆಗಸ್ಟ್ 15ರಂದು ಸರ್ವತಂತ್ರ ಸ್ವತಂತ್ರರಾಗಿ ಬ್ರಿಟಿಷ್ ಆಡಳಿತವನ್ನು ಕಿತ್ತೊಗೆಯುವಷ್ಟು ಬಲವಾಗಿದ್ದನ್ನು ನವ ಪೀಳಿಗೆ ಮರೆಯ ಬಾರದು. ಪ್ರತಿಯೊಬ್ಬ ಭಾರತೀಯನಿಗೆ ಸಂವಿ ಧಾನದ ರಕ್ಷಣೆ ಅನನ್ಯವಾಗಿ ದೊರಕುವಂತಹ ವ್ಯವಸ್ಥೆ 26ನೇ ಜನವರಿ 1950(ಗಣರಾಜ್ಯ) ರಲ್ಲಿ ಜಾರಿಗೆ ಬಂದಿದೆ. ಇದನ್ನು ಕಾಪಾ ಡಲು ಮತಚಲಾವಣೆಯೊಂದೇ ಸರಳ ಹಾಗೂ ಪರಿಣಾಮಕಾರಿ ಕ್ರಮ.

ಸದ್ಯದಲ್ಲಿ ಬರಲಿರುವ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ ಎಲ್ಲರೂ ತಪ್ಪದೇ ಮತ ಚಲಾಯಿಸಲೇಬೇಕು. ಏಕೆಂದರೆ ಜನಮನ, ಜನಭಾವಗಳನ್ನು ಸ್ವಾರ್ಥ, ಅಧಿಕಾರಕ್ಕಾಗಿ ಒಡೆಯುವಂತಹ ಪ್ರಯತ್ನಗಳು, ಜನತೆಯ ಸ್ವಾತಂತ್ರ್ಯ ಹಗರಣಕ್ಕೆ ಸದಾ ಹೊಂಚು ಹಾಕುವಂತಹ ಶಕ್ತಿಗಳು ಮುನ್ನುಗ್ಗಿ ಬರುತ್ತಿರುತ್ತವೆ. ಇದನ್ನು ತಡೆಗಟ್ಟುವುದಕ್ಕೆ ನಮ್ಮ ಸಂವಿಧಾನದ ಪೀಠಿಕೆಯ ಸಾಲುಗಳನ್ನು ಮಂತ್ರದಂತೆ ಪಠಿಸುತ್ತಾ ಮತ ಚಲಾಯಿಸಬೇಕು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ
ಶುಕ್ರವಾರ 17-03-2023
ಬೆಳ್ಳಿ ಬೆಳಕು



ನಾಲ್ಕು ಸಾವಿರ ಚಿತ್ರಮಂದಿರಗಳಲ್ಲಿ ಕಬ್ಜ ರಿಲೀಸ್

ಕನ್ನಡ ಚಿತ್ರರಂಗದಲ್ಲಿ ದೊಡ್ಡಮಟ್ಟದ ಹವಾ ಸೃಷ್ಟಿಸಿದ ಚಿತ್ರ ಕಬ್ಜ ಇಂದಿನಿಂದ ವಿಶ್ವದಾದ್ಯಂತ ನಾಲ್ಕು ಸಾವಿರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ, ಏಳು ಭಾಷೆಗಳಲ್ಲಿ ತೆರೆಕಾಣುತ್ತಿದೆ. ಈ ಚಿತ್ರದಲ್ಲಿ ಕನ್ನಡ ಚಿತ್ರರಂಗದ ಮೂವರು ಬಿಗ್‌ಸ್ಟಾರ್‌ಗಳು ಒಟ್ಟಿಗೇ ಕಾಣಿಸಿಕೊಂಡಿರುವುದು ಚಿತ್ರರಸಿಕರ ಕುತೂಹಲವನ್ನು ಇಮ್ಮಡಿಗೊಳಿಸಿದೆ. ಪ್ರತಿಭಾವಂತ ನಿರ್ದೇಶಕ ಆರ್.ಚಂದ್ರು ಇಂಥ ಚಿತ್ರದ ರೂವಾರಿ. ಇತ್ತೀಚೆಗೆ ಈ ಚಿತ್ರದ ಪ್ರೀ ರಿಲೀಸ್ ಕಾರ್ಯಕ್ರಮ ವರ್ಣರಂಜಿತವಾಗಿ ನಡೆಯಿತು, ಈ ಸಮಾರಂಭದಲ್ಲಿ ನೆನಪಿರಲಿ ಪ್ರೇಮ್, ಡಾಲಿ ಧನಂಜಯ, ಕಿಚ್ಚ ಸುದೀಪ್, ಉಪೇಂದ್ರ, ಶ್ರೇಯಾ ಶರಣ್, ತಾನ್ಯಾ ಹೋಪ್, ಕೆ.ಪಿ.ಶ್ರೀಕಾಂತ್, ಚಂದ್ರಚೂಡ್ ಸೇರಿದಂತೆ ಚಿತ್ರರಂಗದ ಹಲವಾರು ಗಣ್ಯರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ನಟ ಉಪೇಂದ್ರ, ಚಂದ್ರು ಅವರು ಈ ಚಿತ್ರವನ್ನು ಆರಂಭಿಸಿದ ಮೇಲೆ 2 ಲಾಕ್‌ಡೌನ್ ಎದುರಾದರೂ ಅದೆಲ್ಲವನ್ನೂ ದಾಟಿ ಮತ್ತೆ ವಾಮನನಂತೆ ಎದ್ದು ನಿಂತಿದ್ದಾರೆ. 'ಕಬ್ಜ' ನಟರ ಸಿನಿಮಾವಲ್ಲ, ಟೆಕ್ನೀಷಿಯನ್ಸ್ ಚಿತ್ರ. ಈ ಸಿನಿಮಾದಲ್ಲಿ ನಿರ್ದೇಶಕರು, ಸಂಗೀತ ನಿರ್ದೇಶಕ, ಕಲಾ ನಿರ್ದೇಶಕ, ಸಿನಿಮಾಟೋಗ್ರಾಫರ್ ಎಲ್ಲರೂ ಕಾಣಿಸುತ್ತಾರೆ. ನಟರು ಕೇವಲ ಹಿಂದಿನಶಕ್ತಿ ಅಷ್ಟೇ. ಇಂತಹ ಸಿನಿಮಾಗಳನ್ನು ಪ್ರೇಕ್ಷಕರು ಖಂಡಿತ ಗೆಲ್ಲಿಸುತ್ತಾರೆ. ಕಬ್ಜ-2ನಲ್ಲಿ ನಮ್ಮನ್ನು ಗೆಸ್ಟ್ ಆಗಿಟ್ಟುಕೊಂಡು ಶಿವಣ್ಣ, ಸುದೀಪ್‌ರನ್ನು ಲೀಡ್ ಆಗಿ ಮಾಡಿದ್ದಾರೆ. ಚಂದ್ರು ಕನಸಿಗೆ ಕಲಾಭಿಮಾನಿಗಳು ಖಂಡಿತ ಸಪೋರ್ಟ್ ಮಾಡುತ್ತಾರೆ ಎಂದು ಹೇಳಿದರು.

ನಿರ್ದೇಶಕ ಆರ್.ಚಂದ್ರು ಮಾತನಾಡಿ, ಚಿತ್ರರಂಗದ ಇಬ್ಬರು ಲೆಜೆಂಡರಿಗಳು ಇಲ್ಲಿದ್ದಾರೆ. ಮೂರು ಜನರಿಂದ 'ಕಬ್ಜ' ಆಗಿದೆ. ಪುನೀತ್ ಅವರು ಮೋಷನ್ ಪೋಸ್ಟರ್ ರಿಲೀಸಾದಾಗ ಕಾಲ್‌ಮಾಡಿ ಮೇಕಿಂಗ್ ಅದ್ಭುತವಾಗಿದೆ. ಚಿತ್ರದ ಪ್ರೊಮೋಷನ್‌ಗೆ ನಾನು ಖಂಡಿತ ಬರುತ್ತೇನೆ ಅಂದಿದ್ದರು. ಶಿವಣ್ಣ, ಸುದೀಪ್ ಅಂಥವರ ಜೊತೆ ಒಂದು ಫೋಟೋ ತೆಗೆಸಿಕೊಂಡರೆ ಸಾಕು ಎಂದುಕೊಂಡಿದ್ದ ನಾನು ಇಂದು ಅವರ ಜೊತೆ ಸಿನಿಮಾ ಮಾಡಿದ್ದೇನೆ. ನನ್ನ ಸ್ವಂತ ಅಣ್ಣನ ಥರ ಶ್ರೀಕಾಂತ್ ಜೊತೆಗಿದ್ದು ಸಪೋರ್ಟ್ ಮಾಡುತ್ತಿದ್ದಾರೆ ಎಂದು ಹೇಳಿದರು.

ನಿರ್ದೇಶಕ ಆರ್.ಚಂದ್ರು ಅವರನ್ನು ಹೊಗಳಿದ ಕಿಚ್ಚ ಸುದೀಪ್, ಇಂಥದ್ದೊಂದು ಸಿನಿಮಾದಲ್ಲಿ ನಾನು ಭಾಗಿಯಾಗಿದ್ದೇನೆ ಎನ್ನುವುದೇ ಖುಷಿ ತಂದಿದೆ. ನಿರ್ದೇಶಕರು ಸಿನಿಮಾವನ್ನು ತುಂಬಾ ಚೆನ್ನಾಗಿ ಮಾಡಿದ್ದಾರೆ. ಪ್ರೇಕ್ಷಕರು ಕೂಡ ಅಷ್ಟೇ ಪ್ರೀತಿಯಿಂದ ಚಿತ್ರವನ್ನು ಒಪ್ಪಿಕೊಳ್ಳುತ್ತಾರೆ. ಒಳ್ಳೊಳ್ಳೆ ಸಿನಿಮಾಗಳು ಹಾಗೂ ಹೃದಯಕ್ಕೆ ಹತ್ತಿರ ಇದ್ದವರು ಸಿನಿಮಾ ಮಾಡಿದಾಗ, ಅವರಿಗೆ ಸಪೋರ್ಟ್ ಮಾಡುವುದು ನನ್ನ ಕರ್ತವ್ಯ ನಾನು ಮಾಡಿದ್ದೇನೆ ಎಂದು ಹೇಳಿದರು. ನೆನಪಿರಲಿ ಪ್ರೇಮ್ ಮಾತನಾಡಿ ಚಂದ್ರು ಜೊತೆ ನಾನು 2 ಸಿನಿಮಾ ಮಾಡಿದ್ದೇನೆ. ಅವರು ಇಂದು ಇಂಟರ್‌ನ್ಯಾಷನಲ್ ಕ್ವಾಲಿಟಿ ಇರುವಂಥ ಚಿತ್ರವನ್ನು ಮಾಡಿದ್ದಾರೆ ಎಂದರು.

ಪ್ರಭುತ್ವ ಟ್ರೈಲರ್ ಬಿಡುಗಡೆ

ಚೇತನ್‌ಚಂದ್ರ ನಾಯಕರಾಗಿ ನಟಿಸಿರುವ, ಮತದಾನ, ಪ್ರಜಾಪ್ರಭುತ್ವದ ಬಗ್ಗೆ ಜಾಗೃತಿ ಮೂಡಿಸುವ ಕಥಾಹಂದರ ಹೊಂದಿದ "ಪ್ರಭುತ್ವ" ಚಿತ್ರದ ಟ್ರೇಲರ್‌ನ್ನು ರಾಜಕೀಯ ಮುಖಂಡ ರವೀಂದ್ರ ಅನಾವರಣ ಮಾಡಿದರು. ಜಂಕಾರ್ ಮ್ಯೂಸಿಕ್ ಮೂಲಕ ಈ ಟ್ರೈಲರ್ ಬಿಡುಗಡೆಯಾಗಿದೆ.

ಕಥೆಗಾರ ಮೇಘಡಹಳ್ಳಿ ಡಾ||ಶಿವಕುಮಾರ್ ಮಾತನಾಡಿ. ಪ್ರತಿಯೊಬ್ಬ ಪ್ರಜೆಯೂ ಈ ಚಿತ್ರವನ್ನು ನೋಡಬೇಕು. ಮತದಾನ ಅಮೂಲ್ಯವಾದದ್ದು. ಹಾಗಾಗಿ ಮತದಾನವನ್ನು ಹಣಕ್ಕೆ ಮಾರಾಟ ಮಾಡಿಕೊಳ್ಳಬಾರದು. ಮತದಾನದ ಮಹತ್ವ ಸಾರುವ ಈ ಸಿನಿಮಾಗೆ ನಾನೇ ಕಥೆ ಬರೆದಿದ್ದೇನೆ. ನನ್ನ ಮಗ ರವಿರಾಜ್ ಎಸ್. ಕುಮಾರ್ ನಿರ್ಮಾಣ ಮಾಡಿದ್ದಾರೆ ಎಂದರು.

ಈಗ ಟ್ರೇಲರ್ ಬಿಡುಗಡೆಯಾಗಿದೆ. ಸದ್ಯದಲ್ಲೇ ಚಿತ್ರ ಕೂಡ ತೆರೆಗೆ ಬರಲಿದೆ. ಚುನಾವಣೆಗೂ ಮುಂಚೆಯೇ ಚಿತ್ರವನ್ನು ಬಿಡುಗಡೆ ಮಾಡುವ ಪ್ರಯತ್ನ ನಡೆಯುತ್ತಿದೆ ಎಂದು ನಿರ್ಮಾಪಕ ರವಿರಾಜ್ ಎಸ್.ಕುಮಾರ್ ತಿಳಿಸಿದರು. ಚಿತ್ರದ ಕಥಾಹಂದರದ ಬಗ್ಗೆ ಪರಿಚಯ ನೀಡಿದ ನಿರ್ದೇಶಕ ಆರ್.ರಂಗನಾಥ್ ಚಿತ್ರ ಉತ್ತಮವಾಗಿ ಮೂಡಿ ಬರಲು ಸಹಕಾರ ನೀಡಿದ ತಮ್ಮ ತಂಡಕ್ಕೆ ಧನ್ಯವಾದ ಹೇಳಿದರು.

ಇದು ನನ್ನ ಹನ್ನೆರಡನೇ ಸಿನಿಮಾ. ಮೇಘಡಹಳ್ಳಿ ಡಾ||ಶಿವಕುಮಾರ್ ಅವರು ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಒಳ್ಳೆಯ ಕಥೆ ಬರೆದಿದ್ದಾರೆ. ರಂಗನಾಥ್ ಅಷ್ಟೇ ಚೆನ್ನಾಗಿ ನಿರ್ದೇಶನ ಮಾಡಿದ್ದಾರೆ. ತಂತ್ರಜ್ಞರ ಕಾರ್ಯವೈಖರಿ ಹಾಗೂ ಎಲ್ಲಾ ಕಲಾವಿದರ ಅಭಿನಯ ಅದ್ಭುತವಾಗಿದೆ ಎಂದರು ನಾಯಕ ಚೇತನ್ ಚಂದ್ರ.

ಅನು ಎಂಬ ಪಾತ್ರದಲ್ಲಿ ನಟಿಸಿರುವುದಾಗಿ ನಾಯಕಿ ಪಾವನಗೌಡ ತಿಳಿಸಿದರು. ಚಿತ್ರದಲ್ಲಿ ಅಭಿನಯಿಸಿರುವ ಅರವಿಂದರಾವ್, ಹರೀಶ್‌ರಾಯ್, ಆದಿಲೋಕೇಶ್, ವಿಜಯ್ ಚೆಂಡೂರ್, ವೀಣಾ ಸುಂದರ್, ಅನಿತಾಭಟ್ ಮುಂತಾದ ಕಲಾವಿದರು ಹಾಗೂ ಸಂಭಾಷಣೆ ಬರೆದಿರುವ ವಿನಯ್ "ಪ್ರಭುತ್ವ" ಚಿತ್ರದ ಕುರಿತು ಮಾತನಾಡಿದರು. ಎಮಿಲ್ ಅವರ ಸಂಗೀತ ನಿರ್ದೇಶನ, ಕೆ.ಎಸ್. ಚಂದ್ರಶೇಖರ್ ಅವರ ಛಾಯಾಗ್ರಹಣ ಹಾಗೂ ಕೆ.ಎಂ.ಪ್ರಕಾಶ್ ಅವರ ಸಂಕಲನವಿರುವ ಈ ಚಿತ್ರದ ತಾರಾಬಳಗದಲ್ಲಿ ನಾಸರ್, ಶರತ್ ಲೋಹಿತಾಶ್ವ, ರಾಜೇಶ್ ನಟರಂಗ ನಟಿಸಿದ್ದಾರೆ.





ಎಂ.ಜೆ.ಪ್ರೊಡಕ್ಷನ್ಸ್‌ನಿಂದ ಬಿಗ್‌ಬಜೆಟ್ ಚಿತ್ರಗಳು

ಈಗಾಗಲೇ ಮಲಯಾಳಂನಲ್ಲಿ ಹಲವಾರು ಚಲನಚಿತ್ರಗಳನ್ನು ನಿರ್ಮಿಸಿರುವ ಅನಿಲ್‌ಕುಮಾರ್ ಅವರೀಗ ಕನ್ನಡದಲ್ಲೂ ಬಿಗ್‌ಬಜೆಟ್ ಚಿತ್ರಗಳನ್ನು ನಿರ್ಮಿಸಲು ಮುಂದಾಗಿದ್ದಾರೆ. ಇತ್ತೀಚೆಗೆ ಅವರು ಸಿನಿಮಾ ಚಿತ್ರೀಕರಣ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲಕರವಾದ ಅವ್ಯಾನಾ ರೆಸಾರ್ಟ್ ಹಾಗೂ ಎಂ.ಜೆ. ಪ್ರೊಡಕ್ಷನ್ಸ್ ಎಂಬ ನಿರ್ಮಾಣ ಸಂಸ್ಥೆಯನ್ನು ಪ್ರಾರಂಭಿಸಿದ್ದಾರೆ. ಕಾಂತಾರ ಖ್ಯಾತಿಯ ನಟಿ ಸಪ್ತಮಿಗೌಡ ಹಾಗೂ ನಟ ಶರಣ್ ಇದಕ್ಕೆ ಚಾಲನೆ ನೀಡಿದರು. ಫಿಲಂಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ನಿರ್ದೇಶಕ ಹರಿಸಂತು, ಮುಖೇಶ್‌ಕುಮಾರ್, ಸತೀಶ್‌ಕುಮಾರ್ ಸೇರಿದಂತೆ ಅನೇಕರು ಇಲ್ಲಿ ಹಾಜರಿದ್ದರು.

ಈ ಸಂದರ್ಭದಲ್ಲಿ ನಿರ್ಮಾಪಕ ಅನಿಲ್ ಕುಮಾರ್ ಮಾತನಾಡುತ್ತ ನಾನು ಕೇರಳದವನಾದರೂ ಕನ್ನಡ ಭಾಷೆಯ ಮೇಲೆ ಅಪಾರ ಪ್ರೀತಿ, ಗೌರವವಿದೆ. ಈಗಾಗಲೇ ಮಲೆಯಾಳಂನಲ್ಲಿ ಕೆಲವು ಚಿತ್ರಗಳನ್ನು ನಿರ್ಮಿಸಿದ್ದೇನೆ. ಈಗ ಎಂ.ಜೆ. ಪ್ರೊಡಕ್ಷನ್ ಹೌಸ್ ಆರಂಭಿಸಿದ್ದು, ಈ ಮೂಲಕ ಕನ್ನಡದಲ್ಲಿ ಸದಭಿರುಚಿಯ ಚಿತ್ರಗಳನ್ನು ನಿರ್ಮಿಸುವ ಉದ್ದೇಶವಿದೆ. ಈ ರೆಸಾರ್ಟ್‌ನಲ್ಲಿ ಏಷ್ಯಾದಲ್ಲೇ ಅತೀ ಉದ್ದವಾದ ವಾಟರ್‌ಫಾಲ್ಸ್ ನಿರ್ಮಿಸಲಾಗಿದೆ. ವಿಶೇಷವಾಗಿ ಇಲ್ಲಿ ಸಿನಿಮಾ ಚಿತ್ರೀಕರಣಕ್ಕೆ ಬೇಕಾದ ಎಲ್ಲಾ ರೀತಿಯ ಅನುಕೂಲತೆಗಳಿದ್ದು, ಚಿತ್ರರಂಗದವರು ಇದನ್ನು ಬಳಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು. ನಟ ಶರಣ್ ಮಾತನಾಡುತ್ತಾ, ಅನಿಲ್‌ಕುಮಾರ್ ಅವರು ತುಂಬಾ ಕಷ್ಟಪಟ್ಟು ಈ ಹಂತಕ್ಕೆ ಬಂದಿದ್ದಾರೆಂದು ತಿಳಿದು ನನಗೂ ಸಂತೋಷವಾಯಿತು. ನಾನೂ ಸಹ ಆರಂಭದ ದಿನಗಳಲ್ಲಿ ಬಹಳ ಕಷ್ಟಪಟ್ಟಿದ್ದೇನೆ. ಅವ್ಯಾನಾ ರೆಸಾರ್ಟ್ ನಿಜಕ್ಕೂ ತುಂಬಾ ಚೆನ್ನಾಗಿದೆ. ಎಂ.ಜೆ ಪ್ರೊಡಕ್ಷನ್ಸ್ ಮೂಲಕ ಕನ್ನಡದಲ್ಲಿ ಚಲನಚಿತ್ರಗಳನ್ನು ನಿರ್ಮಿಸಲು ಮುಂದಾಗಿದ್ದಾರೆ, ಈ ಸಂಸ್ಥೆಯಿಂದ ಮುಂದೆ ದೊಡ್ಡ ಬಜೆಟ್ ಚಿತ್ರಗಳು ಹೊರಬರಲಿ ಎಂದು ಹಾರೈಸಿದರು. ನಟಿ ಸಪ್ತಮಿಗೌಡ ಮಾತನಾಡಿ ಈ ರೆಸಾರ್ಟ್‌ನಲ್ಲಿ ಎಲ್ಲಾ ಥರದ ಸೌಕರ್ಯಗಳಿವೆ. ನಾನೂ ಈಜುಗಾರ್ತಿಯಾಗಿರುವುದರಿಂದ, ಇಲ್ಲಿರುವ ಅತೀ ಉದ್ದದ ವಾಟರ್‌ಫಾಲ್ಸ್ ಕಂಡು ಖುಷಿಯಾಯಿತು. ಸಿನಿಮಾ ಚಿತ್ರೀಕರಣಕ್ಕೆ ಇದೊಂದು ಸೂಕ್ತ ಜಾಗವಾಗಿದೆ ಎಂದರು. ಅನಿಲ್‌ಕುಮಾರ್ ಅವರ ಎಲ್ಲಾ ಉತ್ತಮ ಕೆಲಸಗಳಿಗೂ ನಮ್ಮ ಬೆಂಬಲವಿದೆ ಎಂದು ಫಿಲಂ ಚೇಂಬರ್ ಅಧ್ಯಕ್ಷ ಭಾ.ಮಾ. ಹರೀಶ್ ತಿಳಿಸಿದರು. ಪತ್ರಕರ್ತ ಬಿ.ಎನ್.ಸುಬ್ರಹ್ಮಣ್ಯ, ನಿರ್ದೇಶಕ ಹರಿಸಂತೋಷ್ ಮುಂತಾದವರು ಅವ್ಯಾನಾ ಹಾಗೂ ಎಂ.ಜೆ.ಪ್ರೊಡಕ್ಷನ್‌ಗೆ ಶುಭ ಕೋರಿದರು.



ನಾಡಗೀತೆಗೆ ನಿರ್ಮಾಪಕ ಮಹೇಂದ್ರ ಮುನ್ನೋತ್ ಹೊಸರೂಪ

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ನಾಡಗೀತೆಯನ್ನು ಕಡಿತಗೊಳಿಸಲು ಹಲವರು ಪ್ರಯತ್ನಿಸಿದರೂ ಅದರಲ್ಲಿ ಯಶಸ್ಸನ್ನು ಕಂಡಿರಲಿಲ್ಲ. ಆದರೆ ಅದನ್ನು ಅರ್ಥಪೂರ್ಣವಾಗಿ 2.30 ನಿಮಿಷಗಳಿಗೆ ಸಂಕ್ಷಿಪ್ತಗೊಳಿಸಿ, ಯಾವುದೇ ರೀತಿಯಲ್ಲಿ ಮೂಲಸಾಹಿತ್ಯವನ್ನು ಕಡಿತಗೊಳಿಸದೇ ಹೊಸದಾಗಿ ರಾಗಸಂಯೋಜನೆ ಮಾಡಿ ಭಕ್ತಿಪೂರ್ವಕವಾಗಿ ನಟಿಸಿ, ನಿರ್ಮಿಸುವ ಮೂಲಕ ತಮಗಿರುವ ಕನ್ನಡದ ಮೇಲಿನ ಪ್ರೀತಿಯನ್ನು ನಟ, ನಿರ್ಮಾಪಕ ಹಾಗೂ ಉದ್ಯಮಿ ಮಹೇಂದ್ರ ಮುನ್ನೋತ್ ಮೆರೆದಿದ್ದಾರೆ. ಇತ್ತೀಚೆಗೆ ಈ ಗೀತೆಯನ್ನು ಆದಿಚುಂಚನಗಿರಿ ಮಠದ ಶ್ರೀಗಳಾದ ನಿರ್ಮಲಾನಂದನಾಥ ಸ್ವಾಮಿಜಿಯವರು ಬಿಡುಗಡೆಗೊಳಿಸಿ ಮಹೇಂದ್ರ ಮುನ್ನೋತ್ ತಂಡಕ್ಕೆ ಶುಭ ಹಾರೈಸಿದ್ದಾರೆ. ಹರಿಹರನ್ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಗೀತೆಯನ್ನು ಅಜಯ್ ವಾರಿಯರ್ ಹಾಡಿದ್ದು, ಎಟಿ. ರವೀಶ್ ಸಂಗೀತ ಸಂಯೋಜಿಸಿದ್ದಾರೆ. ಬೇಲೂರು, ಹಳೇಬೀಡು, ಮೈಸೂರು ಮತ್ತು ಚಿಕ್ಕಮಗಳೂರಿನ ಸುತ್ತಮುತ್ತ ಇದರ ಚಿತ್ರೀಕರಣ ನಡೆಸಲಾಗಿದೆ.


ಕಿರುಚಿತ್ರ ನಿರ್ದೇಶಕರಿಗೆ ಸತ್ಯ ಹೆಗಡೆ ಸ್ಟುಡಿಯೋ ಆಸರೆ

ಇತ್ತೀಚಿನ ದಿನಗಳಲ್ಲಿ ಕಿರುಚಿತ್ರಗಳು ಚಿತ್ರರಂಗಕ್ಕೆ ಬರುವವರಿಗೆ ಒಂದು ವೇದಿಕೆ ಕಲ್ಪಿಸಿಕೊಡಲಿವೆ. ಅಂಥವರಿಗೆ ಸತ್ಯಹೆಗಡೆ ಸ್ಟುಡಿಯೋಸ್ ಆಸರೆಯಾಗಿ ನಿಂತಿದೆ. ಹೌದು, ಛಾಯಾಗ್ರಾಹಕ ಸತ್ಯ ಹೆಗಡೆ ಅವರು ಪ್ರೊಡಕ್ಷನ್ ಹೌಸ್ ಹುಟ್ಟು ಹಾಕಿ ಆಮೂಲಕ ಹೊಸ ಪ್ರತಿಭೆಗಳಿಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಇವರ ಮೂಲಕ ಶಾರ್ಟ್‌ಫಿಲಂಗಳನ್ನು ನಿರ್ಮಿಸುವ ಜೊತೆಗೆ ಸತ್ಯಹೆಗಡೆ ಸ್ಟುಡಿಯೋಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಅವುಗಳನ್ನು ರಿಲೀಸ್ ಮಾಡುತ್ತಿದ್ದಾರೆ. ಈ ಮೂಲಕ ಈಗಾಗಲೇ 11 ಕಿರುಚಿತ್ರಗಳು ಹೊರಬಂದಿವೆ. ಇದೀಗ ಮತ್ತೆ ಮೂರು ಕಿರುಚಿತ್ರಗಳು ಬಿಡುಗಡೆಗೆ ಸಿದ್ಧವಾಗಿದ್ದು, ಅದರಲ್ಲಿ ಕಳೆದ ವಾರ ಗ್ರಾಚಾರ ರಿಲೀಸಾಗಿದೆ. ಮುಂದಿನ ದಿನಗಳಲ್ಲಿ ಕಥೆಗಾರನ ಕತೆ ಹಾಗೂ ಅಹಂಪರಂ ಕೂಡ ಬಿಡುಗಡೆಯಾಗಲಿವೆ.

ಸತ್ಯಹೆಗಡೆ ಅವರು ಈ ಮೂರೂ ಕಿರುಚಿತ್ರಗಳ ಪ್ರದರ್ಶನ ಏರ್ಪಡಿಸಿದ್ದರು. ಒಂಬತ್ತು ನಿಮಿಷ ಅವಧಿಯ ಕತೆಗಾರನ ಕಥೆಗೆ ಕೌಶಿಕ ಕೂಡುರಸ್ತೆ ನಿರ್ದೇಶಿಸಿದ್ದಾರೆ. ಕೆಲ ಸಿನಿಮಾಗಳಿಗೆ ಸಹಾಯಕ ನಿರ್ದೇಶಕನಾಗಿರುವ ಕೌಶಿಕ್‌ಗೆ ಇದು ಮೊದಲಪ್ರಯತ್ನ. ಇನ್ನು ಗ್ರಾಚಾರ ಚಿತ್ರವನ್ನು ಅಜಯ್ ಪಂಡಿತ್ ನಿರ್ದೇಶಿಸಿದ್ದು, ಇವರು ಕೂಡ ಇಂಜಿನಿಯರಿಂಗ್ ಓದಿಕೊಂಡಿದ್ದಾರೆ.

ಸಿನಿಪದಬಂಧ-465

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ______
ವಿಳಾಸ ______
ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಯುಗ ಉರುಳಿದರೂ ಮರಳಿ ಬರುವ ಹಬ್ಬ 3
2.'ಜಗ್ಗೇಶ್‌ನೊಂದಿಗೆ ಸಿಹಿ-ಕಹಿ ತಿನ್ನೋಣ! 4
5.ಇಲ್ಲೇ ಎಡದಿಂದ ಬಲಕ್ಕೆ '2'ರಲ್ಲಿರುವ ಚಿತ್ರದ ನಾಯಕಿ ಅರಸಿಯ ಮಧ್ಯೆ ಇದ್ದಾಳೆ 3
6.ಶಿವರಾಜ್‌ಕುಮಾರ್ ವಿಷ್ಣುವಿನಂತೆ ಶ್ರೇಷ್ಠನಾದವನು 5
8.ನಾವಾಡುವ ನುಡಿ 3
10.ಸಂಚು ಚಿತ್ರದ ನಾಯಕಿ 4
11.ನಕ್ಷತ್ರಗಳೊಳಗೆ ಕ್ಯಾಬರೆ ತಾರೆ ಇದ್ದಾಳೆ! 4
14.ವನದಲ್ಲಿ ಕುಳಿತು ಬರೆದ ಪದ್ಯ 3
15.ನರಕಾಧಿಪತಿಯ ಜೊತೆ ಆತನ ಸೇವಕನೂ ಇದ್ದಾನೆ 5
16.ಪ್ರೇಮ ಸಂಚಿಯಲ್ಲಿ ಎಂದಿಗೂ ಮರೆಯಲಾಗದ ತಾಣ 3
17.ವಾಯುವಿನಲ್ಲಿ ತೇಲಿಬಂದ ನುಡಿ 3
18.ಮಿಂಚಂತೆ ಬಳಿ ಬಂದ ಕರ್ಪೂರದ ಗೊಂಬೆ 3

ವಿಜೇತರು: ಪ್ರೇಮ, ತನುಶ್ರೀ ಜೆರಾಕ್ಸ್ ಸೆಂಟರ್, ಹೆಚ್.ಎಂ. ಸರ್ಕಲ್, ಹಾಡ್ಲಿ, ಮಳವಳ್ಳಿ ತಾ||, ಮಂಡ್ಯ ಜಿಲ್ಲೆ-571475

ಸಿನಿ ಪದಬಂಧ 464ರ ಸರಿ ಉತ್ತರ

ಇಂ	ಚ	ರ		ಗಿ	ಳಿ	ಬೇ	ಟೆ			ಅ
ದ್ರ						ಕಾ		ಕ	ಲ್ಪ	ನಾ
ಧ	ನ	ಪಿ	ಶಾ	ಚಿ		ತು		ನ		ಮಿ
ನು				ರಂ	ಗ	ಪ್ಪ		ಸಿ		ಕಾ
ಷ್		ಕ		ಜೀ				ನ		
	ಪ್ರೇ	ಮ	ಕ	ವಿ		ರಾ	ಮ	ರಾ	ಜ್ಯ	
		ಲ್				ಜ		ಣಿ		ಕ
ಕ		ಹಾ		ಕ	ತ	ಹಂ				ವ
ಲಾ		ಸ		ನ್ಯಾ		ಸ	ರ್ಪ	ಕಾ	ವ	ಲು
ವಿ	ಲ	ನ್		ದಾ						ದಾ
ದ			ಮ	ನ	ಶಾಂ	ತಿ		ಶಿ	ಕಾ	ರಿ

ಮೇಲಿನಿಂದ ಕೆಳಕ್ಕೆ

1.ರವಿಚಂದ್ರನ್ ಪ್ರಮುಖ ವ್ಯಕ್ತಿ 5
3.ತ್ರಿವೇಣಿ ಕಾದಂಬರಿಗೆ ಪುಟ್ಟಣ್ಣ ಕಣಗಾಲ್ ನಿರ್ದೇಶನವಿದೆ 4
4.ಹಾವು_ _ _ _ 4
5.ಮಾಲಾಶ್ರೀ ದ್ವಿಪಾತ್ರಕ್ಕೆ ಅಂಬಿ, ಶಶಿ ಅಭಿನಯವಿದೆ 6
7. ಶ್ರೀಕೃಷ್ಣನ ಸೇವಕರಲ್ಲಿ ಒಬ್ಬರು 4
9. ಆಕಾಶದಿಂದ ಧರೆಗಿಳಿದ ರಂಭೆ ಇವಳೇ ಇವಳೇ... 6
11.ಅನುಭವದ ನಟಿ 4
12.ಶಾಶ್ವತವಾಗಿ ಉರಿದ ಹಣತೆ 5
13.'ಆಡೂ_ _ _ _ ನೀ ಆಡು ಆಡು ಆಡಿ ನೋಡು_ _ _ _,' 4
14.ವಿಶುಕುಮಾರ್‌ನ ಕಡಲತೀರ 4

ಮೈಸೂರು ಮಿತ್ರ ಶುಕ್ರವಾರ 17 ಮಾರ್ಚ್ 2023

ನಾಳೆಯಿಂದ ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ ಆರಂಭ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಚಾಲನೆ

● ಆಕರ್ಷಕ ಮೆರವಣಿಗೆ ● ದಾಖಲೆಯ 336 ತಂಡಗಳು ಭಾಗಿ
● ಪ್ರತಿನಿತ್ಯ 3 ಮೈದಾನಗಳಲ್ಲಿ ಪಂದ್ಯ ● ಹಾಕಿ ವೆಬ್‌ಸೈಟ್ ಆರಂಭ





ಮಡಿಕೇರಿ, ಮಾ.16– ಕೊಡವ ಸಮುದಾಯದ ಕುಟುಂಬಗಳ ನಡುವಣ 23ನೇ 'ಅಪ್ಪಚೆಟ್ಟೋಳಂಡ ಕಪ್ ಹಾಕಿ ಉತ್ಸವ–2023'ಕ್ಕೆ ಮಾ.18ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನಾಪೋಕ್ಲು ಬೇತು ಗ್ರಾಮದ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಚಾಲನೆ ನೀಡಲಿದ್ದು, ಯಶಸ್ವಿ ಪಂದ್ಯಾವಳಿಗಾಗಿ ಅಗತ್ಯ ಸಿದ್ಧತೆಗಳನ್ನು ನಡೆಸಲಾಗಿದೆ ಎಂದು ಹಾಕಿ ಉತ್ಸವ ಸಮಿತಿ ಸಂಚಾಲಕ ಅಪ್ಪಚೆಟ್ಟೋಳಂಡ ಮನು ಮುತ್ತಪ್ಪ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದ ಅವರು, ಹಾಕಿ ಉತ್ಸವದ ಉದ್ಘಾಟನಾ ಸಮಾರಂಭ ಮಧ್ಯಾಹ್ನ 2.20ಕ್ಕೆ ನಡೆಯಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಕ್ರೀಡಾ ಸಚಿವ ಡಾ.ಕೆ.ಸಿ. ನಾರಾಯಣ ಗೌಡ, ಸಂಸದ ಪ್ರತಾಪ ಸಿಂಹ, ಜಿಲ್ಲೆಯ ಶಾಸಕರುಗಳಾದ ಕೆ.ಜಿ. ಬೋಪಯ್ಯ, ಎಂ.ಪಿ.ಅಪ್ಪಚ್ಚು ರಂಜನ್ ಸೇರಿದಂತೆ ಹಲ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಅಧ್ಯಕ್ಷತೆಯನ್ನು ಅಪ್ಪಚೆಟ್ಟೋಳಂಡ ಕುಟುಂಬದ ಪಟ್ಟೆದಾರರಾದ ಅಪ್ಪಚೆಟ್ಟೋಳಂಡ ಈರಪ್ಪ ವಹಿಸಲಿದ್ದಾರೆ ಎಂದು ತಿಳಿಸಿದರು.

ವರ್ಣರಂಜಿತ ಕಾರ್ಯಕ್ರಮ: ಉದ್ಘಾಟನೆಯ ದಿನದಂದು ಬೆಳಗ್ಗೆ ನಾಪೋಕ್ಲುವಿನಲ್ಲಿ ಆಕರ್ಷಕ ಬೃಹತ್ ಮೆರವಣಿಗೆ ನಡೆಯಲಿದೆ. ಹಾಕಿ ಉತ್ಸವವನ್ನು ಮೊಟ್ಟ ಮೊದಲು ಆಯೋಜಿಸಿದ ಪಾಂಡಂಡ ಕುಟುಂಬ ಸೇರಿದಂತೆ ಇಲ್ಲಿಯವರೆಗೆ ಪಂದ್ಯಾವಳಿ ಆಯೋಜಿಸಿದ ಕೊಡವ ಕುಟುಂಬಗಳ 23 ಮಂದಿ ಪ್ರತಿನಿಧಿಗಳು ಆಕಾಶಕ್ಕೆ ಗುಂಡು ಹಾರಿಸುವ ಮೂಲಕ ಪಂದ್ಯಾವಳಿಗೆ ಸಾಂಪ್ರದಾಯಿಕ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು.

ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಕಾರದೊಂದಿಗೆ ಕರ್ನಾಟಕದ ವಿವಿಧ ಕಲಾ ತಂಡಗಳು ಪಾಲ್ಗೊಂಡು ಸಾಂಸ್ಕೃತಿಕ ವೈವಿಧ್ಯತೆಯನ್ನು ಅನಾವರಣಗೊಳಿಸಲಿವೆ. ಇದೇ ಸಂದರ್ಭ ಬೆಳಗ್ಗೆ 11.15 ಗಂಟೆಗೆ ಕೊಡವ ಹಾಕಿ ಅಕಾಡೆಮಿ ಮತ್ತು ಅಪ್ಪ ಚೆಟ್ಟೋಳಂಡ ಹಾಕಿ ಉತ್ಸವದ ಧ್ವಜಾರೋಹಣ ನೆರವೇರಲಿದೆ ಎಂದು ತಿಳಿಸಿದರು.

ಪ್ರದರ್ಶನ ಪಂದ್ಯ: ಬೆಳಗ್ಗೆ 11.30 ಗಂಟೆಗೆ '37ನೇ ಕೂರ್ಗ್ ಫೀಲ್ಡ್ ರೆಜಿಮೆಂಟ್' ತಂಡ ಮತ್ತು 'ಕೊಡವ ಅಕಾಡೆಮಿ ಇಲೆವೆನ್' ತಂಡಗಳ ನಡುವೆ ಪ್ರದರ್ಶನ ಪಂದ್ಯ ನಡೆಯಲಿದೆ. ಮಧ್ಯಾಹ್ನ 2.30ಕ್ಕೆ ಮುಖ್ಯಮಂತ್ರಿಗಳಿಂದ ಪಂದ್ಯಾವಳಿ ಉದ್ಘಾಟನೆಯಾದ ಬಳಿಕ 'ಇಂಡಿಯಾ ಜೂನಿಯರ್ ಇಲೆವೆನ್' ಮತ್ತು 'ಕರ್ನಾಟಕ ಇಲೆವೆನ್' ತಂಡಗಳ ನಡುವೆ ಮತ್ತೊಂದು ಪ್ರದರ್ಶನ ಪಂದ್ಯವನ್ನು ಆಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ದಾಖಲೆಯ 336 ತಂಡಗಳು: ಈ ಬಾರಿಯ ಪಂದ್ಯಾವಳಿಯಲ್ಲಿ ದಾಖಲೆಯ 336 ತಂಡಗಳು ಪಾಲ್ಗೊಳ್ಳಲಿವೆ. ಇದೊಂದು ದಾಖಲೆಯೇ ಆಗಿದೆಯೆಂದು ತಿಳಿಸಿದ ಅವರು, ಒಟ್ಟು ತಂಡಗಳನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಲಾಗಿದೆ. ಪ್ರತಿನಿತ್ಯ ಮೂರು ಮೈದಾನಗಳಲ್ಲಿ 21 ಪಂದ್ಯಗಳು ನಡೆಯಲಿವೆ. ಪ್ರೀ ಕ್ವಾರ್ಟರ್ ಪಂದ್ಯಗಳ ಬಳಿಕ ಪ್ರಮುಖ ಮೈದಾನ ಒಂದರಲ್ಲೆ ಪಂದ್ಯಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಪಂದ್ಯಾವಳಿ ವೀಕ್ಷಣೆಗೆ 25 ಸಾವಿರ ಆಸನ ವ್ಯವಸ್ಥೆಯುಳ್ಳ ಗ್ಯಾಲರಿ ನಿರ್ಮಿಸಲಾಗಿದೆ. ಇದರಲ್ಲಿ 1300 ವಿಐಪಿ ಆಸನಗಳನ್ನು ಸಜ್ಜುಗೊಳಿಸಲಾಗಿದ್ದು, 23 ದಿನಗಳ ಕಾಲ ಪಂದ್ಯಾವಳಿ ಹಾಕಿ ಪ್ರೇಮಿಗಳನ್ನು ತನ್ನೆಡೆಗೆ ಸೆಳೆಯಲಿದೆ ಎಂದು ಅವರು ತಿಳಿಸಿದರು.

ಹಾಕಿ ವೆಬ್‌ಸೈಟ್: ಹಾಕಿ ಪಂದ್ಯಗಳ ಮಾಹಿತಿ, ಹಾಕಿ ಉತ್ಸವದ ವಿವರಗಳನ್ನು ಜನರಿಗೆ ತಲುಪಿಸಲು www.appachettolanda.com ವೆಬ್‌ಸೈಟ್ ಆರಂಭಿಸಲಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಅಪ್ಪಚೆಟ್ಟೋಳಂಡ ಹಾಕಿ ಉತ್ಸವ ಸಮಿತಿಯ ಸದಸ್ಯರಾದ ಎ.ಕೆ. ತಿಮ್ಮಯ್ಯ, ಪ್ರತಿಮಾ ಪೊನ್ನಪ್ಪ, ರೀನಾ ಪೂವಯ್ಯ, ಡೇನ್ ಪೂವಯ್ಯ, ಮೋನಿಷ ಮುತ್ತಪ್ಪ ಉಪಸ್ಥಿತರಿದ್ದರು.

ಆಶ್ವಾಸನೆ ನೀಡದೆ ಕೆಲಸ ಮಾಡುತ್ತಿರುವ ಪ್ರಧಾನಿ

ಬಿಜೆಪಿ ಮಹಿಳಾ ಮೋರ್ಚಾ ಸಮಾವೇಶದಲ್ಲಿ ವಿಧಾನಪರಿಷತ್ ಸದಸ್ಯೆ ತೇಜಸ್ವಿನಿ ಬಣ್ಣನೆ



ವಿರಾಜಪೇಟೆ, ಮಾ.16– ಪ್ರಧಾನಿ ನರೇಂದ್ರ ಮೋದಿ ಅವರು ಆಶ್ವಾಸನೆ ನೀಡದೆ ಕೆಲಸ ಮಾಡಿತೋರಿಸುತ್ತಿದ್ದು, ಇದನ್ನು ಮನಗಂಡು ಕೊಡಗು ಜಿಲ್ಲೆಯಲ್ಲಿ ಹಾಲಿ ಶಾಸಕರಾಗಿರುವ ಕೆ.ಜಿ. ಬೋಪಯ್ಯ ಮತ್ತು ಅಪ್ಪಚ್ಚು ಅವರನ್ನು ಮತ್ತೆ ಗೆಲ್ಲಿಸುವಂತೆ ವಿಧಾನಪರಿಷತ್ ಸದಸ್ಯೆ ತೇಜಸ್ವಿನಿ ರಮೇಶ್ ಗೌಡ ಮನವಿ ಮಾಡಿದ್ದಾರೆ.

ವಿರಾಜಪೇಟೆ ಮಹಿಳಾ ಸಮಾಜದ ಸಭಾಂಗಣದಲ್ಲಿ ಆಯೋಜಿಸಿದ್ದ ಬಿಜೆಪಿ ಮಹಿಳಾ ಮೋರ್ಚಾದ ಸಮಾವೇಶವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ಅವರು, ಕೊಡಗಿನಲ್ಲಿ ಪಾಕಿಸ್ತಾನದ ಧ್ವಜ ಹಾರಿಸಿದವರ ಪರವಾಗಿ ವಾದಿಸಿದವರು, ತಲಕಾವೇರಿಯಲ್ಲಿ ತೀರ್ಥ ಸುಳ್ಳು ಎನ್ನುತ್ತಿದ್ದವರು ಇಂದು ವಿರಾಜಪೇಟೆ ಕ್ಷೇತ್ರದಲ್ಲಿ ಜನರ ಮುಂದೆ ಬರುತ್ತಿದ್ದಾರೆ. ಇವರ ಬಗ್ಗೆ ಜಾಗ್ರತೆ ವಹಿಸಿ ಎಂದು ಮಾರ್ಮಿಕವಾಗಿ ಕರೆ ನೀಡಿದರು.

ಪಕ್ಷಕ್ಕಾಗಿ ಪ್ರತಿಯೊಬ್ಬರು ಕೆಲಸ ಮಾಡುವ ಮೂಲಕ ಈ ಬಾರಿಯೂ ಕೊಡಗಿನ ಎರಡು ಹಾಲಿ ಶಾಸಕರನ್ನು ಗೆಲ್ಲುವಂತೆ ನೋಡಿಕೊಳ್ಳಿ ಎಂದರಲ್ಲದೆ ಬೆಂಗಳೂರು–ಮೈಸೂರು ದಶಪಥ ರಸ್ತೆ ಬಗ್ಗೆ ಅನೇಕರು ಉರಿದುಕೊಳ್ಳುತ್ತಿದ್ದಾರೆ. ಏಕೆಂದರೆ ಕಾಂಗ್ರೆಸ್‌ನವರು 70 ವರ್ಷ ಆಡಳಿತ ನಡೆಸಿದರೂ ಈ ರೀತಿಯ ಅಭಿವೃದ್ಧಿ ಕೆಲಸ ಮಾಡಲು ಸಾಧ್ಯವಾಗಿಲ್ಲ ಎಂಬುದನ್ನು ಅರಿತುಕೊಳ್ಳಬೇಕು. ಪ್ರಧಾನಿ ಮೋದಿಯವರು ಅಶ್ವಾಸನೆ ನೀಡದೆ ಕೆಲಸ ಮಾಡಿ ತೋರಿಸುತ್ತಿದ್ದಾರೆ ಎಂದರು.

ಕೆಲವರು ಪಡಿತರ ಅಕ್ಕಿಯನ್ನು ಉಚಿತವಾಗಿ ಕೊಡುತ್ತೇವೆ ಎನ್ನುತ್ತಿದ್ದಾರೆ. ಆದರೆ ಇಂದು ದೇಶದಲ್ಲಿ ಬಡವರಿಗೆ ಅಕ್ಕಿ ನೀಡುತ್ತಿರುವುದು ಪ್ರಧಾನಿ ಮೋದಿ. ಇದನ್ನು ಪ್ರತಿಯೊಬ್ಬರು ಮನಗಾಣಬೇಕಾಗಿದೆ. ದೇಶವನ್ನು ಸ್ವಾವಲಂಬಿಯಾಗಿ ಮಾಡುವುದು ನಮ್ಮ ಗುರಿ ಎಂದ ಅವರು, ಕೋವಿಡ್ ಸಂದರ್ಭದಲ್ಲಿ ಲಸಿಕೆ ಕಂಡು ಹಿಡಿದು ದೇಶದ ಜನರನ್ನು ಉಳಿಸಿದ್ದು ಬಿಜೆಪಿ. ಕೊಡಗಿನಲ್ಲಿ ಟಿಪ್ಪು ಜಯಂತಿ ಆಚರಿಸಿ ಕುಟ್ಟಪ್ಪನಂತವರ ಸಾವಿಗೆ ಕಾರಣವಾಗಿದ್ದ ಸಿದ್ದರಾಮಯ್ಯ ಮತ್ತೆ ಟಿಪ್ಪು ಜಯಂತಿ ಮಾಡುವುದಾಗಿ ಹೇಳುತ್ತಿದ್ದು, ಮತಯಾಚನೆಗೆ ಬಂದಾಗ ಇದನ್ನು ಪ್ರಶ್ನೆ ಮಾಡಿ. ಪಕ್ಷ ಎಂಬುದು ತಾಯಿಯಂತೆ ಎಲ್ಲಾ ಸ್ಥಾನ–ಮಾನವನ್ನು ಪಕ್ಷ ನೀಡಿದೆ ಎಂದರು.

ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಮಾತನಾಡಿ, ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಯೋಜನೆಗಳನ್ನು ರೂಪಿಸಿ ಜನರಿಗೆ ತಲುಪಿಸುತ್ತಿದೆ. ದೇಶದ ಅಚಾರ–ವಿಚಾರ, ಸಂಸ್ಕೃತಿ ಉಳಿದರೆ ಹಿಂದುತ್ವ ಉಳಿಯುತ್ತದೆ. ದೇಶದಲ್ಲಿ ಅನೇಕ ಉತ್ತಮ ಯೋಜನೆ ರೂಪಿಸಿ ಎಲ್ಲರಿಗೂ ಸವಲತ್ತು ನೀಡಲಾಗಿದೆ. ಆದರೂ ಕೆಲವರು ಮೋದಿ ಏನು ಮಾಡಿದ್ದಾರೆ ಎಂದು ಅಪಪ್ರಚಾರ ನಡೆಸುತ್ತಿದ್ದಾರೆ. ಅಭಿವೃದ್ಧಿ ನಮ್ಮ ಮುಖ್ಯ ಗುರಿ, ಭರವಸೆ ಮಾತ್ರವಲ್ಲ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ರಾಬೀನ್ ದೇವಯ್ಯ ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ವಿರಾಜಪೇಟೆ ಮಂಡಲದ ಮಹಿಳಾ ಮೋರ್ಚಾದ ಅಧ್ಯಕ್ಷೆ ಕವಿತಾ ಬೋಜಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಹಿಳಾ ಮೋರ್ಚಾದ ಜಿಲ್ಲಾಧ್ಯಕ್ಷೆ ಶರೀನ್ ಸುಬ್ಬಯ್ಯ, ಮೋರ್ಚಾಗಳ ಸಂಚಾಲಕ ಅರುಣ್ ಭೀಮಯ್ಯ, ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ವಿರಾಜಪೇಟೆ ಮಂಡಳ ಅಧ್ಯಕ್ಷ ನೆಲ್ಲಿರ ಚಲನ್ ಕುಮಾರ್, ಕಾರ್ಯದರ್ಶಿ ವಾಟೇರಿರ ಬೋಪಣ್ಣ, ಬಿಜೆಪಿ ಶಿಸ್ತು ಸಮಿತಿ ಸದಸ್ಯೆ ರೀನಾ ಪ್ರಕಾಶ್, ಮಡಿಕೇರಿ ನಗರ ಸಭೆಯ ಅಧ್ಯಕ್ಷೆ ಅನಿತಾ ಪೂವಯ್ಯ, ಪ್ರಮುಖರಾದ ಶಾಂತೆಯಂಡ ರವಿ ಕುಶಾಲಪ್ಪ, ಮಾಪಂಗಡ ಯಮುನ ಚಂಗಪ್ಪ, ಕಾಂತಿ ಸತೀಶ್ ಮತ್ತಿತರರು ಉಪಸ್ಥಿತರಿದ್ದರು.

ಯುವತಿ ನಾಪತ್ತೆ



ಗೋಣಿಕೊಪ್ಪ, ಮಾ.16– ಕೈಕೇರಿ ಗ್ರಾಮದ ವೈ. ಮೋಹನ ಅವರ ಪುತ್ರಿ ವೈ. ಎಂ. ಸಂಗೀತ (20) ಕಳೆದ ಶನಿವಾರದಿಂದ ಕಾಣೆಯಾಗಿದ್ದಾರೆ. ಮೈಸೂರಿಗೆ ತೆರಳಿದ್ದ ಯುವತಿ ಮನೆಗೆ ಹಿಂತಿರುಗಿಲ್ಲ. ತಂದೆ ಮೋಹನ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಸುಳಿವು ಸಿಕ್ಕವರು ದೂ.08274–247333 ಸಂಖ್ಯೆಗೆ ಮಾಹಿತಿ ನೀಡುವಂತೆ ಗೋಣಿಕೊಪ್ಪ ಪೊಲೀಸ್ ಠಾಣೆ ಪ್ರಕಟಣೆ ಕೋರಿದೆ.

ಮೊರಾರ್ಜಿ ವಸತಿ ಶಾಲೆ ಉದ್ಘಾಟನೆ ವೇಳೆ

ಕಾಂಗ್ರೆಸ್– ಜೆಡಿಎಸ್ ಕಾರ್ಯಕರ್ತರ ಮಾತಿನ ಚಕಮಕಿ

● ಭಾರೀ ವಿರೋಧದ ನಡುವೆಯೂ ಹಾಸ್ಟೆಲ್ ಉದ್ಘಾಟಿಸಿದ ಶಾಸಕ ಡಾ.ಅನ್ನದಾನಿ ● ಮಾಜಿ ಶಾಸಕ ನರೇಂದ್ರಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್ ಧರಣಿ





ಹಲಗೂರು, ಮಾ.16– ಇನ್ನೂ ಸಂಪೂರ್ಣ ಕಾಮಗಾರಿ ಮುಗಿಯದ ಮೊರಾರ್ಜಿ ವಸತಿ ಶಾಲೆಯನ್ನು ಚುನಾವಣಾ ನೀತಿ ಸಂಹಿತೆ ಜಾರಿಯಾಗುತ್ತದೆ ಎಂಬ ಕಾರಣಕ್ಕೆ ಶಾಸಕ ಡಾ.ಕೆ.ಅನ್ನದಾನಿ ತರಾತುರಿಯಲ್ಲಿ ಉದ್ಘಾಟಿಸುತ್ತಿದ್ದು, ಶಿಷ್ಟಾಚಾರ ಪಾಲಿಸುತ್ತಿಲ್ಲ ಎಂದು ಕಾಂಗ್ರೆಸ್ ಕಾರ್ಯಕರ್ತರು ಹಾಸ್ಟೆಲ್ ಮುಂದೆ ಆಕ್ರೋಶಕ್ಕೆ ಮುಂದಾದರೆ, ಇತ್ತ ಜೆಡಿಎಸ್ ಕಾರ್ಯಕರ್ತರು, ಸಣ್ಣಪುಟ್ಟ ಲೋಪ ದೋಷಗಳನ್ನೇ ದೊಡ್ಡದು ಮಾಡುತ್ತಾ ಅಭಿವೃದ್ಧಿ ಕಾರ್ಯಕ್ಕೆ ವಿರೋಧಿಸುತ್ತಿದ್ದಾರೆ ಎಂದು ಆರೋಪ ಮಾಡುತ್ತಾ ಮುಗಿಬಿದ್ದ ಪರಿಣಾಮ, ಹಲಗೂರು ಸಮೀಪದ ಅಂತರಹಳ್ಳಿ ಮೊರಾರ್ಜಿ ವಸತಿ ಶಾಲೆ ಆವರಣ ರಣಾಂಗಣವಾಗಿತ್ತು. ಇದರ ನಡುವೆಯೂ ಶಾಸಕ ಡಾ.ಕೆ.ಅನ್ನದಾನಿ ಹಾಸ್ಟೆಲ್ ಉದ್ಘಾಟಿಸಿದರು.

ಅಂತರಹಳ್ಳಿ ಗ್ರಾಮದ ಶ್ರೀಸಿದ್ದೇಶ್ವರ ಬೆಟ್ಟದ ತಪ್ಪಲಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಸಂಯುಕ್ತಾಶ್ರಯದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಮೊರಾರ್ಜಿ ವಸತಿ ಶಾಲೆ ನೂತನ ಕಟ್ಟಡವನ್ನು ಕಾಂಗ್ರೆಸ್ ಪ್ರತಿರೋಧದ ನಡುವೆಯೂ ಶಾಸಕ ಡಾ.ಕೆ.ಅನ್ನದಾನಿ ಉದ್ಘಾಟಿಸಲು ಮುಂದಾದಾಗ ಜೆಡಿಎಸ್ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ನಡುವೆ ಘೋಷಣೆ, ಮಾತಿನ ಚಕಮಕಿ ನಡೆಯಿತು. ಈ ಸಂದರ್ಭ ಕೆಲ ಕಾಂಗ್ರೆಸ್ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ಬಳಿಕ ಮಾತನಾಡಿದ ಶಾಸಕ ಅನ್ನದಾನಿ, ನಾನು ಕದ್ದು ವಸತಿ ಶಾಲೆ ಉದ್ಘಾಟಿಸುತ್ತಿಲ್ಲ. ನಾನು ಶಿಷ್ಟಾಚಾರ ಉಲ್ಲಂಘಿಸಿಲ್ಲ. ಶಾಸಕನ ಶಿಷ್ಟಾಚಾರದ ಹಕ್ಕನ್ನು ಕಸಿದುಕೊಳ್ಳಲು ಕಾಂಗ್ರೆಸ್‌ನವರಿಂದ ಸಾಧ್ಯವಿಲ್ಲ. ಈ ವಸತಿ ಶಾಲೆ ಕಟ್ಟಡ ನಿರ್ಮಾಣ ಮಾಡಲು ಬಹಳ ಹೋರಾಟ ಮಾಡಿದ್ದೇನೆ. ಅರಣ್ಯ ಭೂಮಿಯಲ್ಲಿ ವಸತಿ ಶಾಲೆಗೆ ನಿವೇಶನ ಅಥವಾ ಜಾಗ ನೀಡುತ್ತಿರಲಿಲ್ಲ. ನನ್ನ ನಿರಂತರ ಹೋರಾಟದ ಪ್ರತಿಫಲವಾಗಿ ಇಂದು ಸುಸಜ್ಜಿತವಾದ ಹತ್ತು ಕೋಟಿ ಅಂದಾಜು ವೆಚ್ಚದಲ್ಲಿ ವಸತಿ ಶಾಲೆ ನಿರ್ಮಾಣಗೊಂಡು ಉದ್ಘಾಟನೆಗೊಂಡಿದೆ. ಕೆಲವು ದಿನಗಳಲ್ಲಿ ಸಂಪೂರ್ಣವಾಗಿ ಬಳಕೆ ಸಿಗಲಿದೆ ಎಂದರು.

ನೀವು ಶಾಸಕರಾಗಿದ್ದಾಗ ದ್ವೇಷ ರಾಜಕಾರಣದ ಮೇಲೆ ಜೆಡಿಎಸ್‌ನ 7 ನಾಯಕರ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಿರಿ. ಆದರೆ ನಾನು ನನ್ನ ಆಡಳಿತಾವಧಿಯಲ್ಲಿ ಸರ್ವ ಜಾತಿಗಳನ್ನೂ ಸಮಾನವಾಗಿ ಕಂಡಿದ್ದೇನೆ. ನಿಮ್ಮ ಆಡಳಿತಾವಧಿಯಲ್ಲಿ ನಿರ್ಮಾಣವಾದ ಅಂಬೇಡ್ಕರ್ ಭವನದ ಶೇ.30ರಷ್ಟು ಕೆಲಸ ಬಾಕಿ ಇದ್ದರೂ, ಚುನಾವಣೆ ಸಮೀಪ ಉದ್ಘಾಟಿಸಲಿಲ್ಲವೇ ಎಂದು ಪ್ರಶ್ನಿಸಿದರು.

ನನ್ನ ಆಡಳಿತದಲ್ಲಿ ಯಾರಿಗೂ ಸಹ ಸಣ್ಣ ತೊಂದರೆ ನೀಡಿಲ್ಲ. ನಿಮ್ಮ ದ್ವೇಷ ರಾಜಕಾರಣದಿಂದ ಬೇಸತ್ತ ಕ್ಷೇತ್ರದ ಜನರು ಕಳೆದ ಬಾರಿ ನಿಮ್ಮನ್ನು ಸೋಲಿಸಿದ್ದು, ಮುಂದಿನ ಚುನಾವಣೆಯಲ್ಲಿಯೂ ಸಹ ತಾವು ಮನೆಯಲ್ಲಿ ಕುಳಿತುಕೊಳ್ಳಲು ಸಿದ್ಧವಾಗಿರಿ. ಕೆಇಬಿ ಡಿವಿಷನ್ ಆಫೀಸ್‌ಗೆ ಅಡಿಗಲ್ಲು ಹಾಕಿದ್ದೀರಿ. ಆದರೆ ನೀವು ಅಡಿಗಲ್ಲು ಹಾಕಿ ಉದ್ಘಾಟನೆ ಮಾಡಿರುವ ಕೆಇಬಿ ಡಿವಿಷನ್ ಆಫೀಸ್ ಎಲ್ಲಿದೆ. ನೀವೊಬ್ಬ ವಿದ್ಯಾವಂತ ಪದವೀಧರ, ಶಾಸಕನಾಗಿ, ಮಾಜಿ ಸಚಿವರಾಗಿ ಶಿಷ್ಟಾಚಾರದ ನಿಮಗೆ ಗೊತ್ತಿಲ್ಲವೇ. ಇದೇನಾ ನಿಮ್ಮ ಸಂಸ್ಕೃತಿ ನಮಗಿರುವ ಶಿಷ್ಟಾಚಾರ ಕಿತ್ತುಕೊಳ್ಳುವ ಅಧಿಕಾರ ನಿಮಗಿಲ್ಲ. ಶಕ್ತಿ ಇದ್ದರೇ ಚುನಾವಣೆಯಲ್ಲಿ ಹೋರಾಟ ಮಾಡಿ. ನಿಮ್ಮ ಘನತೆಗೆ ಗೌರವ ತಕ್ಕಂತೆ ನಡೆದುಕೊಳ್ಳಬೇಕು ಎಂದರು.

ಉದ್ಘಾಟನೆಗೂ ಮುನ್ನ ಹಾಸ್ಟೆಲ್ ಕಾಮಗಾರಿ ಅಪೂರ್ಣಗೊಂಡಿದ್ದರೂ ಉದ್ಘಾಟನೆ ಮಾಡುತ್ತಿದ್ದಾರೆಂದು ಆರೋಪಿಸಿದ ಮಾಜಿ ಸಚಿವ ಪಿ.ಎಂ.ನರೇಂದ್ರಸ್ವಾಮಿ, ಇನ್ನು 10 ದಿನಗಳಲ್ಲಿ ವಿಧಾನಸಭಾ ಚುನಾವಣಾ ನೀತಿ ಸಂಹಿತೆ ಜಾರಿಯಾಗುತ್ತಿದ್ದು, ಪೂರ್ಣಗೊಳ್ಳದ ಕಟ್ಟಡ ಕಾಮಗಾರಿಯನ್ನು ಶಾಸಕರು ಉದ್ಘಾಟನೆ ಮಾಡುತ್ತಿದ್ದಾರೆ. ವಸತಿ ನಿಲಯದಲ್ಲಿ ಇನ್ನೂ ನೀರು, ಶೌಚಾಲಯ ಮತ್ತು ವಿದ್ಯುತ್ ಸೇರಿದಂತೆ ಹಲವು ಕೆಲಸಗಳು ಬಾಕಿ ಉಳಿದಿವೆ. ಶಾಲೆ ಬೆಟ್ಟದ ತಪ್ಪಲಿನಲ್ಲಿದ್ದು, ವಿದ್ಯಾರ್ಥಿಗಳ ಸುರಕ್ಷತೆಗೆ ಕಾಂಪೌಂಡ್ ಸಹ ನಿರ್ಮಾಣ ಮಾಡಲಾಗಿಲ್ಲ ಎಂದು ಆರೋಪಿಸಿದರು.

ನನ್ನ ಆಡಳಿತಾವಧಿಯಲ್ಲಿ 6 ವರ್ಷಗಳ ಹಿಂದೆ ಮಂಜೂರಾತಿ ಸಿಕ್ಕ ಶಾಲಾ ಕಟ್ಟಡ ಕಾಮಗಾರಿಯನ್ನು ಪೂರ್ಣಗೊಳಿಸಲು ಇದುವರೆಗೂ ಸಾಧ್ಯವಾಗಿಲ್ಲ. ಇಂದು ರಾಜಕೀಯ ಪ್ರೇರಿತವಾಗಿ ಕಟ್ಟಡ ಉದ್ಘಾಟನೆ ಮಾಡಲು ಬರಲು ನಾಚಿಕೆಯಾಗುವುದಿಲ್ಲವೇ, ಶಾಲೆ ಉದ್ಘಾಟನೆ ಮಾಡಲು ಜಿಲ್ಲಾಧಿಕಾರಿ ಅನುಮತಿ ನೀಡಲಾಗಿದೆಯೇ ಎಂದು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳನ್ನು ಪ್ರಶ್ನಿಸಿದರು.

ಏಕಪಕ್ಷೀಯವಾಗಿ ಶಾಸಕರ ಒತ್ತಡದಿಂದ ಯೋಗ್ಯವಲ್ಲದ ಕಟ್ಟಡ ಉದ್ಘಾಟನೆ ಮಾಡಲಾಗುತ್ತಿದೆ. ಇಂತಹ ಕಟ್ಟಡದಲ್ಲಿ ಮಕ್ಕಳ ಜವಾಬ್ದಾರಿ ಹೊಣೆಗಾರಿಕೆ ಯಾರದು. ನಾವು ಶಾಸಕರ ಹಕ್ಕುಗಳಿಗೆ ಚ್ಯುತಿ ಮಾಡುವುದಿಲ್ಲ. ನಮ್ಮ ಹಕ್ಕುಗಳನ್ನು ಕೇಳಲು ಬಂದಿದ್ದು, ಮುಖಂಡರನ್ನು ಬಂಧಿಸಲಾಗಿದೆ. ಕೂಡಲೇ ಬಿಡುಗಡೆಗೊಳಿಸಬೇಕು. ಆಡಳಿತ ಬ್ಲಾಕ್ ಮಾತ್ರ ಉದ್ಘಾಟನೆ ಮಾಡಬೇಕು. ಉದ್ಘಾಟನಾ ಫಲಕದ ಜೊತೆಗೆ ಶಂಕುಸ್ಥಾಪನೆ ಫಲಕವನ್ನು ಇಂದೇ ಅಳವಡಿಸಬೇಕು. ನಾವು ಈ ಸಂಬಂಧ ನ್ಯಾಯಾಲಯದ ಮೊರೆ ಹೋಗಲಾಗುವುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸಮಾಜ ಕಲ್ಯಾಣ ಇಲಾಖೆ ಉಪ ನಿರ್ದೇಶಕರು ಸಿದ್ದಲಿಂಗೇಶ್ ಬೇವಿನಮಟ್ಟಿ, ಸಮಾಜ ಕಲ್ಯಾಣ ಸಹಾಯಕ ನಿರ್ದೇಶಕ ಜನಾರ್ಧನ್, ಯತ್ತಂಬಾಡಿ ಗ್ರಾಪಂ ಅಧ್ಯಕ್ಷೆ ಶಿವಮ್ಮ, ಹುಸ್ಕೂರು ಗ್ರಾಪಂ ಅಧ್ಯಕ್ಷೆ ಸುಮ ಇತರರಿದ್ದರು.

ಕೆ.ಆರ್.ಪೇಟೆಗೆ ಕೃಷ್ಣ ಕೊಡುಗೆ ಅಪಾರ: ಅಶ್ವಥ್ ನಾರಾಯಣ್



ಕೆ.ಆರ್.ಪೇಟೆ, ಮಾ.16– ಕೆ.ಆರ್.ಪೇಟೆ ಕೃಷ್ಣ ಅವರು ಸ್ಪೀಕರ್ ಆಗಿ, ಸಂಸದರಾಗಿ ಹಾಗೂ 3 ಬಾರಿ ಶಾಸಕರಾಗಿ ತಾಲೂಕಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಆದರ್ಶಗಳನ್ನು ಎಲ್ಲಾ ರಾಜಕಾರಣಿಗಳು ರೂಢಿಸಿಕೊಳ್ಳಬೇಕು ಎಂದು ಸಚಿವ ಡಾ.ಸಿ.ಎನ್.ಅಶ್ವಥ್ ನಾರಾಯಣ್ ತಿಳಿಸಿದರು.

ಪಟ್ಟಣದ ನಾಲ್ವಡಿ ಕೃಷ್ಣರಾಜ ಒಡೆಯರ್ ತಾಲೂಕು ಕ್ರೀಡಾಂಗಣದಲ್ಲಿ ಶ್ರೀಬಾಲಗಂಗಾಧರನಾಥ ಸ್ವಾಮೀಜಿ ಒಳಾಂಗಣ ಕ್ರೀಡಾಂಗಣ ಹಾಗೂ ಪಟ್ಟಣದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿಗೆ ಕೆ.ಆರ್.ಪೇಟೆ ಕೃಷ್ಣ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು ನಾಮಕರಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ವೈದ್ಯಕೀಯ ಶಿಕ್ಷಣ ಹೊರತುಪಡಿಸಿ ತಾಲೂಕಿನಲ್ಲಿ ಎಲ್ಲಾ ಶಿಕ್ಷಣ ದೊರೆಯುವಲ್ಲಿ ಕೃಷ್ಣ ಅವರ ಪಾತ್ರ ಮಹತ್ವದ್ದು. ಕೃಷ್ಣ ಅವರ ಹಾದಿಯಲ್ಲೇ ನಾರಾಯಣಗೌಡರು ಸಾಗುತ್ತಿದ್ದು, ಕ್ಷೇತ್ರದ ಅಭಿವೃದ್ಧಿಗೆ 1800 ಕೋಟಿ ಅನುದಾನ ತಂದಿದ್ದಾರೆ. ಜಿಲ್ಲಾ ಕೇಂದ್ರದಲ್ಲಿ ಇಲ್ಲದ ಒಳಾಂಗಣ ಕ್ರೀಡಾಂಗಣವನ್ನು ತಾಲೂಕು ಕೇಂದ್ರಕ್ಕೆ ತಂದಿದ್ದಾರೆ ಎಂದ ಅವರು ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿ ಎಂದರು.

ಸಚಿವ ಕೆ.ಸಿ.ನಾರಾಯಣಗೌಡ ಮಾತನಾಡಿದರು. ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಮಾಜಿ ಸ್ಪೀಕರ್ ಕೃಷ್ಣ ಅವರ ಜೀವನ ಚರಿತ್ರೆ ಬಿಡುಗಡೆ ಮಾಡಿದರು. ಇದೇ ವೇಳೆ ಫಲಾನುಭವಿಗಳಿಗೆ ಸವಲತ್ತು ವಿತರಿಸಲಾಯಿತು. ಈ ಸಂದರ್ಭ ಕೃಷ್ಣ ಅವರ ಪತ್ನಿ ಪ್ರೊ.ಇಂದಿರಾಕೃಷ್ಣ, ಕೃಷ್ಣ ಪ್ರತಿಷ್ಠಾನದ ಅಧ್ಯಕ್ಷ ಜವರಾಯಿಗೌಡ, ಅಂಚಿ ಸಣ್ಣಸ್ವಾಮೀಗೌಡ, ಪರಮೇಶ್, ವಾಸು, ಜಿಲ್ಲಾಧಿಕಾರಿ ಗೋಪಾಲಕೃಷ್ಣ, ರಾಜ್ಯ ಯುವ ಸಬಲೀಕರಣ ಇಲಾಖೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಜಿಪಂ ಸಿಇಓ ಶಾಂತ ಹುಲ್ಮನಿ, ಎಸ್ಪಿ ಯತೀಶ್, ತಹಸೀಲ್ದಾರ್ ನಿಸರ್ಗ ಪ್ರಿಯ, ಮೂಡಾ ಅಧ್ಯಕ್ಷ ಕೆ.ಶ್ರೀನಿವಾಸ್, ಕೊಮ್ಮೇರಹಳ್ಳಿ ಶಾಖಾ ಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ, ಪುರಸಭಾಧ್ಯಕ್ಷೆ ಮಹಾದೇವಿ, ಉಪಾಧ್ಯಕ್ಷೆ ಗಾಯತ್ರಿ, ಜಿ.ಪಂ ಮಾಜಿ ಉಪಾಧ್ಯಕ್ಷ ಅಂಬರೀಷ್, ಕೆ.ಎಸ್.ಪ್ರಭಾಕರ್, ಕೆ.ಜಿ.ತಮ್ಮಣ್ಣ, ಡಿ.ಪಿ.ಪರಮೇಶ್, ಪುರಸಭಾ ಸದಸ್ಯರಾದ ಹೆಚ್.ಎನ್.ಪ್ರವೀಣ್, ಲೋಕೇಶ್, ಗಿರೀಶ್, ಕೆ.ಆರ್.ನೀಲಕಂಠ, ರಾಜೇಶ್, ಪ್ರಮೋದ್, ಪ್ರವೀಣ್, ರಾಜಸ್ವ ನಿರೀಕ್ಷಕಿ ಚಂದ್ರಕಲಾ, ತಾಲೂಕು ಬಿಜೆಪಿ ಅಧ್ಯಕ್ಷ ಪರಮೇಶ್, ಅರವಿಂದ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ರಾಜು ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ರಾಜ್ಯದ 224 ಕ್ಷೇತ್ರದಲ್ಲೂ ಬಿಎಸ್‌ಪಿ ಸ್ಪರ್ಧೆ



ಚಾಮರಾಜನಗರ, ಮಾ.16– ರಾಜ್ಯದಲ್ಲಿ ಈ ಬಾರಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವು ಎಲ್ಲ 224 ಕ್ಷೇತ್ರಗಳಲ್ಲೂ ಸ್ಪರ್ಧಿಸಲಿದೆ. 20ಕ್ಕೂ ಹೆಚ್ಚು ಶಾಸಕರು ಗೆಲುವು ಸಾಧಿಸಲಿದ್ದಾರೆ. ಜಿಲ್ಲೆಯಲ್ಲೂ ಪಕ್ಷದ ಅಭ್ಯರ್ಥಿಗಳು ಗೆಲ್ಲಬೇಕು ಎಂದು ಬಿಎಸ್‌ಪಿ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ಹೇಳಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಬಿಎಸ್‌ಪಿ ಸಂಸ್ಥಾಪಕ ಕಾನ್ಶಿರಾಂ ಅವರ 89ನೇ ಹುಟ್ಟುಹಬ್ಬದ ಅಂಗವಾಗಿ ಹಮ್ಮಿಕೊಂಡಿದ್ದ ಬಹುಜನರ ನಡಿಗೆ ಅಧಿಕಾರದ ಕಡೆಗೆ ಮೈಸೂರು ವಿಭಾಗ ಮಟ್ಟದ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದರು.

ಕಾಂಗ್ರೆಸ್‌ಗೆ ಮತ ಕೊಟ್ಟರೆ ಗಾಂಧಿ ಕುಟುಂಬಕ್ಕೆ ಅಧಿಕಾರಕ್ಕೆ ಸಿಗುತ್ತದೆ. ಬಿಜೆಪಿಗೆ ಓಟು ಹಾಕಿದರೆ ಮನುವಾದಿಗಳಿಗೆ ಲಾಭವಾಗುತ್ತದೆ. ಜೆಡಿಎಸ್ ಬೆಂಬಲಿಸಿದರೆ ಅವರ ಕುಟುಂಬ ಅಧಿಕಾರಕ್ಕೆ ಬರುತ್ತದೆ. ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನದ ಆಶಯದಂತೆ ಕಾರ್ಯನಿರ್ವಹಿಸುವ ಕಾನ್ಶಿರಾಂ ಹುಟ್ಟುಹಾಕಿರುವ ಬಿಎಸ್‌ಪಿ ಚುನಾವಣೆಯಲ್ಲಿ ಗೆದ್ದರೆ ಜನರಿಗೆ ಅನುಕೂಲವಾಗಲಿದೆ ಎಂದರು.


ನಂತರ ಬಿಎಸ್‌ಪಿಯ ಕರ್ನಾಟಕ ಉಸ್ತುವಾರಿ ಅಶೋಕ್ ಸಿದ್ಧಾರ್ಥ್ ಮಾತನಾಡಿ, ಡಾ.ಬಿ.ಆರ್. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಒಬ್ಬರಿಗೆ ಒಂದು ಮತ, ಒಂದು ಮತಕ್ಕೆ ಒಂದು ಮೌಲ್ಯವನ್ನು ಕೊಟ್ಟಿದ್ದಾರೆ. ಹಾಗಾಗಿ ಪ್ರತಿಯೊಂದು ಮತವೂ ಮುಖ್ಯವಾಗುತ್ತದೆ. ಅಂತಹ ಮತವನ್ನು ಮಾರಾಟಕ್ಕೆ ಇಡಬಾರದು. ಪಕ್ಷದ ಕಾರ್ಯಕರ್ತರೆಲ್ಲರೂ ಅಂಬೇಡ್ಕರ್, ಕಾನ್ಶಿರಾಂ ತೋರಿಸಿದ್ದ ಭೀಮ ಮಾರ್ಗದಲ್ಲಿ ಸಾಗಬೇಕು. ಈ ಬಾರಿ ಕರ್ನಾಟಕದಲ್ಲಿ ಬಿಎಸ್‌ಪಿಯಿಂದ 10 ಮಂದಿ ಶಾಸಕರು ಗೆದ್ದರೂ ಸಾಕು. ಪಕ್ಷವು ರಾಜ್ಯದಲ್ಲಿ ಮುಂಚೂಣಿಗೆ ಬರಲಿದೆ. ಪಕ್ಷಕ್ಕೆ ವಿಶ್ವಾಸಘಾತ ಮಾಡಿದವರಿಗೆ ತಕ್ಕ ಪಾಠ ಕಲಿಸಬೇಕು ಎಂದರು.

ಬಳಿಕ ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗಂಗಾಧರ್ ಮಹಾಜನ್ ಮಾತನಾಡಿ, ಪಕ್ಷಗಳು, ಮುಖಂಡರು ಅಕ್ರಮವಾಗಿ ಸಂಪಾದಿಸಿದ ದುಡ್ಡಿನಿಂದ ಕುಕ್ಕರ್, ಸೀರೆ, ಹಣ ಹಂಚುತ್ತಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಹಾಳು ಮಾಡುತ್ತಿರುವುದನ್ನು ಜನರು ಅರ್ಥಮಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಹ.ರಾ. ಮಹೇಶ್, ಕಾರ್ಯದರ್ಶಿಗಳಾದ ಜಾಕಿರ್ ಅಲಿ ಖಾನ್, ಶಿವಮ್ಮ, ಕೆ.ಬಿ. ಸುಧಾ, ಶಿವಕುಮಾರ್ ಜಿಲ್ಲಾ ಅಧ್ಯಕ್ಷ ಎನ್. ನಾಗಯ್ಯ, ಉಪಾಧ್ಯಕ್ಷ ಬ್ಯಾಡಮೂಡ್ಲು ಬಸವಣ್ಣ, ಕಮಲ್ ನಾಗರಾಜ್, ವಿವಿಧ ಜಿಲ್ಲೆಗಳ ಪದಾಧಿಕಾರಿಗಳು ಮುಖಂಡರು ಇದ್ದರು.

ಧ್ರುವ ನಿಧನದಿಂದ ಚಾ.ನಗರ ಜಿಲ್ಲೆಗೆ ಭಾರೀ ನಷ್ಟ

ಕಾಂಗ್ರೆಸ್ ಪಕ್ಷದಿಂದ ಶ್ರದ್ಧಾಂಜಲಿ, ಧ್ರುವ ಪುತ್ರ ಬೆಂಬಲಿಸಲು ನಿರ್ಣಯ



ಕೊಳ್ಳೇಗಾಲ, ಮಾ.16– ರಾಜಕೀಯವಾಗಿ ನಾವು ಪರಸ್ಪರ ಎದುರಾಗಿದ್ದೇವೆ. ನನ್ನ ವಿರುದ್ಧ ಒಂದು ಮತದ ಗೆಲುವನ್ನು ಸಾಧಿಸಿದ್ದರೂ ಸಹ ನಾವಿಬ್ಬರು ವೈಯಕ್ತಿಕವಾಗಿ ಒಳ್ಳೆಯ ಸಂಬಂಧ ಇಟ್ಟುಕೊಂಡಿದ್ದೆವು, ನನ್ನನ್ನು ಕಾಂಗ್ರೆಸ್ ಪಕ್ಷಕ್ಕೆ ಆತ್ಮೀಯವಾಗಿ ಬರಮಾಡಿಕೊಂಡಿದ್ದ ಅವರು ನಮ್ಮೊಡನೆ ಇಲ್ಲ ಎಂಬುದನ್ನು ಇನ್ನು ನಂಬಲು ಸಾಧ್ಯವಾಗುತ್ತಿಲ್ಲ. ಇಂತಹ ಮೇರು ವ್ಯಕ್ತಿತ್ವ, ಸರಳ ಸಜ್ಜನ ರಾಜಕಾರಣಿ ಅಗಲಿರುವುದು ಜಿಲ್ಲೆಗೆ ತುಂಬಲಾರದ ನಷ್ಟವಾಗಿದೆ ಅಪಾರ ಎಂದು ಮಾಜಿ ಶಾಸಕ ಎ.ಆರ್. ಕೃಷ್ಣಮೂರ್ತಿ ಕಂಬನಿ ಮಿಡಿದಿದ್ದಾರೆ.

ಶೀಘ್ರದಲ್ಲೆ ಎಐಸಿಸಿ ಮಾಜಿ ಅಧ್ಯಕ್ಷ ರಾಹುಲ್ ಗಾಂಧಿ ಅವರು ಧ್ರುವನಾರಾಯಣ್ ಕುಟುಂಬಕ್ಕೆ ಸಾಂತ್ವನ ಹೇಳಲು ಆಗಮಿಸುತ್ತಿದ್ದು, ಅಂದೆ ಅವರ ಪುತ್ರ ದರ್ಶನ್ ಅವರಿಗೆ ಟಿಕೆಟ್ ಘೋಷಿಸಲಿದ್ದಾರೆ ಎಂಬ ಮಾಹಿತಿ ಇದೆ. ದಿ.ಧ್ರುವನಾರಾಯಣ್ ಮತ್ತು ನನ್ನ ಸಂಬಂಧ ರಾಜಕೀಯ ಮೀರಿದ್ದಾಗಿತ್ತು ಎಂದು ಭ್ರಮರಾಂಭ ಕಲ್ಯಾಣ ಮಂಟಪದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಆಯೋಜಿಸಿದ್ದ ಶ್ರದ್ಧಾಂಜಲಿ ಸಭೆಯಲ್ಲಿ ಅವರು ತಿಳಿಸಿದರು.

90ರ ದಶಕದಿಂದಲೂ ಚಾಮರಾಜನಗರ ಜಿಲ್ಲೆಯನ್ನು ಪ್ರತಿನಿಧಿಸಿ ರಾಜಕಾರಣದಲ್ಲಿ ತಮ್ಮದೆ ಧಾಟಿಯಲ್ಲಿ ಅವರು ಗಮನ ಸೆಳೆದವರು. ಮಾತ್ರವಲ್ಲ ರಾಜಕೀಯ ಧ್ರುವತಾರೆ ಎಂದೇ ಖ್ಯಾತರಾಗಿದ್ದರು, ನಮ್ಮ ತಂದೆ ಬಿ.ರಾಚಯ್ಯ ಧ್ರುವ ಅವರ ಕುಟುಂಬದ ಜೊತೆ ಆತ್ಮೀಯ ಬಾಂಧವ್ಯ ಹೊಂದಿದ್ದರು. ಅಂತೆಯೇ ವಿದ್ಯಾಭ್ಯಾಸದ ದೆಸೆಯಿಂದಲೂ ನನಗೆ ಧ್ರುವ ಅವರ ಒಡನಾಟ ಇತ್ತು ಎಂದರು.

ಧ್ರುವ ಪುತ್ರಗೆ ಟಿಕೆಟ್ ಗಿಟ್ಟಿಸಿ ಗೆಲುವಿಗೆ ಶ್ರಮಿಸುವ ಒಮ್ಮತದ ಸಂಕಲ್ಪ: ಮಾಜಿ ಸಂಸದ, ಕೆಪಿಸಿಸಿ ಕಾರ್ಯಾಧ್ಯಕ್ಷರಾದ ದಿವಂಗತ ಆರ್.ಧ್ರುವನಾರಾಯಣ್ ಅವರ ಪುತ್ರ ದರ್ಶನ್ ಧ್ರುವನಾರಾಯಣ್ ಅವರಿಗೆ ನಂಜನಗೂಡು ಮೀಸಲು ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಕೊಡಿಸುವಂತೆ ಹೈಕಮಾಂಡ್ ಮೇಲೆ ಒತ್ತಡ ತಂದು ಅಭಿಮಾನಿಗಳೆಲ್ಲರೂ ಒಗ್ಗೂಡಿ ಅವರನ್ನು ಬಹುಮತದಿಂದ ಗೆಲ್ಲಿಸಿಕೊಳ್ಳುವ ನಿಟ್ಟಿನಲ್ಲಿ ಇಂದಿನ ಶ್ರದ್ಧಾಂಜಲಿ ಸಭೆಯಲ್ಲಿ ಸಂಕಲ್ಪ ನಿರ್ಣಯ ಕೈಗೊಳ್ಳಲಾಯಿತು. ಕಾಂಗ್ರೆಸ್ ಪಕ್ಷದ ನಾಯಕರು, ಕಾರ್ಯಕರ್ತರು, ಅಭಿಮಾನಿಗಳು ಈ ಮಹತ್ವದ ನಿರ್ಣಯಕ್ಕೈಗೊಂಡರು. ಈ ನಿರ್ಣಯಕ್ಕೆ ಹಾಜರಿದ್ದ ಅಭಿಮಾನಿಗಳೆಲ್ಲರೂ ಕೈಯನ್ನು ಮೇಲೆ ಎತ್ತುವ ಮೂಲಕ ಬೆಂಬಲಿಸಿ ಸಂಕಲ್ಪ ನಿರ್ಣಯಕ್ಕೆ ಸೈ ಎನ್ನುವ ಮೂಲಕ ಸಭೆಗೆ ನಾಲ್ಕು ಮಂದಿ ಮಾಜಿ ಶಾಸಕರು, ಅಸಂಖ್ಯಾತ ಕಾರ್ಯಕರ್ತರು ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್.ಜಯಣ್ಣ, ಎಸ್. ಬಾಲರಾಜು, ಜಿ.ಎನ್.ನಂಜುಂಡಸ್ವಾಮಿ, ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷೆ ಸುಶೀಲಾ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ತೋಟೇಶ್, ಕಾರ್ಯದರ್ಶಿ ರವಿ ಬಸ್ತೀಪುರ ರಾಜ್ಯ ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಮುಖಂಡ ವಡ್ಡಗೆರೆ ದಾಸ್, ಕೊಪ್ಪಳಿ ಮಹದೇವನಾಯಕ, ನಗರಸಭೆ ಮಾಜಿ ಅಧ್ಯಕ್ಷ ಶಾಂತರಾಜು, ನಗಸರಭೆ ಮಾಜಿ ಉಪಾಧ್ಯಕ್ಷ ಅಕ್ಮಲ್ ಪಾಶಾ, ಸಿ.ಎಂ. ಪರಮೇಶ್ವರಯ್ಯ, ರಮೇಶ್, ಸದಸ್ಯ ರಾಘವೇಂದ್ರ ಸೇರಿದಂತೆ ಅಪಾರ ಅಭಿಮಾನಿಗಳು ಪಾಲ್ಗೊಂಡಿದ್ದರು.

ಜಯಶಂಕರ್ ನಿಧನ



ಚಾಮರಾಜನಗರ, ಮಾ.16– ಚಾಮರಾಜ ನಗರದ ವಾರ್ತಾ ಇಲಾಖೆಯ ವಾಹನ ಚಾಲಕರಾದ ಜಯಶಂಕರ್ (53) ಅವರು ಬುಧವಾರ ತಡರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ, ಪುತ್ರಿ, ಪುತ್ರ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಕಾಡಾ ಅಧ್ಯಕ್ಷ ಜಿ. ನಿಜಗುಣರಾಜು, ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ವಾರ್ತಾಧಿಕಾರಿ ರಮೇಶ್, ಸಹಾಯಕ ಅಧಿಕಾರಿ ಸುರೇಶ್ ಇತರರು ಅಂತಿಮ ದರ್ಶನ ಪಡೆದರು. ಅಂತ್ಯಕ್ರಿಯೆ ಮೃತರ ಸ್ವಗ್ರಾಮ ಚಾಮರಾಜನಗರ ತಾಲೂಕಿನ ಕುದೇರು ಗ್ರಾಮದಲ್ಲಿ ಗುರುವಾರ ಮಧ್ಯಾಹ್ನ ನೆರವೇರಿತು.

ನಾಳೆ ನಗರಕ್ಕೆ ಮುಖ್ಯಮಂತ್ರಿ

ಚಾಮರಾಜನಗರ, ಮಾ.16– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾ.18 ರಂದು ಮಲೈ ಮಹದೇಶ್ವರ ಬೆಟ್ಟಕ್ಕೆ ಭೇಟಿ ನೀಡಲಿದ್ದಾರೆ.

ಅಂದು ಬೆಳಿಗ್ಗೆ 10.05 ಗಂಟೆಗೆ ಹನೂರು ತಾಲೂಕಿನ ಮಹದೇಶ್ವರ ಬೆಟ್ಟದ ಹೆಲಿಪ್ಯಾಡ್‌ಗೆ ಆಗಮಿಸುವರು. ಬಳಿಕ ಮಲೈ ಮಹದೇಶ್ವರಸ್ವಾಮಿ ದೇವಸ್ಥಾನಕ್ಕೆ ಭೇಟಿ ನೀಡುವರು ಮತ್ತು ಶ್ರೀ ಮಲೈ ಮಹದೇಶ್ವರ ಸ್ವಾಮಿಯವರ 108 ಅಡಿ ಎತ್ತರದ ಪ್ರತಿಮೆ, ಬೆಳ್ಳಿರಥ ಮತ್ತು ವಿವಿಧ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು. ಬೆಳಿಗ್ಗೆ 11 ಗಂಟೆಗೆ ತೆರಳುವರು.

ನಾಳೆ ಪುಟ್ಟಸ್ವಾಮಿ ಅಭಿಮಾನಿ ಬಳಗದ ಸಭೆ

ಚಾಮರಾಜನಗರ, ಮಾ.16– ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರಾದ ದಿ.ಎಸ್. ಪುಟ್ಟಸ್ವಾಮಿ ಅವರ ಅಭಿಮಾನಿಗಳಿಂದ ಮಾ.18ರಂದು ಸಭೆ ಕರೆಯಲಾಗಿದೆ ಎಂದು ಕಾಡ್ಡಳ್ಳಿ ಮಾಜಿ ಚೇರ್ಮನ್ ಮಹದೇವಪ್ಪ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಚಾಮರಾಜನಗರದ ಸರಳ, ಸಜ್ಜನಿಕೆಗೆ ಹೆಸರಾದ ಮಾಜಿ ಶಾಸಕ ಪುಟ್ಟಸ್ವಾಮಿ ಅವರ ಪ್ರೇರಣೆಯಿಂದ ಆಗಿನ ಕಾಲದಲ್ಲಿ ಕ್ಷೇತ್ರದ ಸುಮಾರು ಜನ ಕಾಂಗ್ರೆಸ್ ಪಕ್ಷ ಸೇರಿದರು. ಆದರೆ ಅವರ ಕುಟುಂಬದವರು ರಾಜಕೀಯದಿಂದ ದೂರ ಇರುವುದನ್ನು ಮನಗಂಡ ಪುಟ್ಟಸ್ವಾಮಿ ಅವರ ಅಭಿಮಾನಿಗಳೆಲ್ಲರೂ ಸೇರಿ ನಗರದಲ್ಲಿ ಮಾ. 18ರ ಶನಿವಾರ ಬೆಳಗ್ಗೆ 10.35ಕ್ಕೆ ಚಾಮರಾಜನಗರದ ಸತ್ತಿ ರಸ್ತೆಯಲ್ಲಿ ಶಿವಕುಮಾರಸ್ವಾಮಿ ಭವನದಲ್ಲಿ ಅಭಿಮಾನಿಗಳ ಬಳಗದಿಂದ ಸಭೆಯನ್ನು ಕರೆಯಲಾಗಿದೆ ಎಂದರು.

ಸಭೆಯಲ್ಲಿ ಪಕ್ಷಾತೀತವಾಗಿ ಪುಟ್ಟಸ್ವಾಮಿ ಅವರ ಅಭಿಮಾನಿಗಳು, ಹಿತೈಷಿಗಳು, ರಾಜಕೀಯ ಪಕ್ಷಗಳ ಮುಖಂಡರು, ಕಾರ್ಯಕರ್ತರ ಅಭಿಪ್ರಾಯ ಸಂಗ್ರಹಿಸಿ, ಚರ್ಚಿಸಿ ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಪುಟ್ಟಸ್ವಾಮಿ ಅವರ ಕುಟುಂಬದವರು ಏನೂ ನಿರ್ಣಯ ತೆಗೆದುಕೊಳ್ಳಬೇಕು ಎಂಬುವುದನ್ನು ತೀರ್ಮಾನಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿ ನಗರಸಭೆ ಮಾಜಿ ಸದಸ್ಯ ರಾಜಶೇಖರ್, ಮುಖಂಡರಾದ ರಾಜೇಂದ್ರ ಪ್ರಸಾದ್, ವೀರೇಶ್, ಶ್ರೀನಿವಾಸ್‌ಪ್ರಸಾದ್, ಅಂಕಶೆಟ್ಟಿ ಇದ್ದರು.

5, 8ನೇ ತರಗತಿ ಬೋರ್ಡ್ ಪರೀಕ್ಷೆ ವೇಳಾಪಟ್ಟಿ ಪ್ರಕಟ

ಬೆಂಗಳೂರು, ಮಾ.16– ರಾಜ್ಯ ಪಠ್ಯಕ್ರಮ ಹೊಂದಿದ 5 ಮತ್ತು 8ನೇ ತರಗತಿಯ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ ಬೋರ್ಡ್ ಪರೀಕ್ಷೆ ನಡೆಸಲು ಹೈಕೋರ್ಟ್ ಗ್ರೀನ್ ಸಿಗ್ನಲ್ ಕೊಟ್ಟ ಬೆನ್ನಲ್ಲೇ, ಪರೀಕ್ಷೆ ವೇಳಾಪಟ್ಟಿಯನ್ನು ಶಿಕ್ಷಣ ಇಲಾಖೆ ಪ್ರಕಟಿಸಿದೆ.

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್‌ನಿಂದ ವೇಳಾಪಟ್ಟಿ ಪ್ರಕಟವಾಗಿದೆ. ಹೈಕೋರ್ಟ್ ಆದೇಶದ ಮೇರೆಗೆ ಹೊಸ ವೇಳಾಪಟ್ಟಿಯನ್ನು ಪ್ರಕಟಿಸಲಾಗಿದೆ. 5ನೇ ತರಗತಿಗೆ ಮಾರ್ಚ್ 27 ರಿಂದ ಮಾರ್ಚ್ 30ರ ವರೆಗೆ ಹಾಗೂ 8ನೇ ತರಗತಿಗೆ ಮಾರ್ಚ್ 27 ರಿಂದ ಏಪ್ರಿಲ್ 1ರ ವರೆಗೆ ಪರೀಕ್ಷೆ ನಡೆಯಲಿದೆ. ಆಯಾ ಶಾಲೆಗಳಲ್ಲಿ ಪರೀಕ್ಷೆ ನಡೆಯಲಿದೆ. ಫಲಿತಾಂಶವನ್ನು ವಿದ್ಯಾರ್ಥಿಗೆ ಮಾತ್ರ ತಿಳಿಸಬೇಕು. ಸಂಪೂರ್ಣ ಗೌಪ್ಯತೆ ಕಾಪಾಡಲು ಶಿಕ್ಷಣ ಇಲಾಖೆ ಸೂಚಿಸಿದೆ.

5ನೇ ತರಗತಿ ವೇಳಾಪಟ್ಟಿ
- ಮಾ.27 – ಪ್ರಥಮ ಭಾಷೆ
- ಮಾ.28 – ದ್ವಿತೀಯ ಭಾಷೆ
- ಮಾ.29 – ಪರಿಸರ ಅಧ್ಯಯನ
- ಮಾ.30 – ಗಣಿತ

8ನೇ ತರಗತಿ ವೇಳಾಪಟ್ಟಿ
- ಮಾ.27 – ಪ್ರಥಮ ಭಾಷೆ
- ಮಾ.28 – ದ್ವಿತೀಯ ಭಾಷೆ
- ಮಾ.29 – ತೃತೀಯ ಭಾಷೆ
- ಮಾ.30 – ಗಣಿತ
- ಮಾ.31 – ವಿಜ್ಞಾನ
- ಏ.1 – ಸಮಾಜ ವಿಜ್ಞಾನ

ಮುಂದುವರೆದ ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಅಭಿಯಾನ



ಮೈಸೂರು,ಮಾ.16(ಪಿಎಂ)– ಅರಣ್ಯ ಇಲಾಖೆ ವತಿಯಿಂದ ಮಾ.3ರಿಂದ 21ರವರೆಗೆ ಪ್ಲಾಸ್ಟಿಕ್ ಮುಕ್ತ ಚಾಮುಂಡಿಬೆಟ್ಟ ಅಭಿಯಾನ ಹಮ್ಮಿಕೊಂಡಿದ್ದು, ಆಸಕ್ತ ಸಂಘ ಸಂಸ್ಥೆಯ ಪದಾಧಿಕಾರಿಗಳು, ಕಾರ್ಯಕರ್ತರು ಪಾಲ್ಗೊಂಡು ಬೆಟ್ಟದಲ್ಲಿ ಸ್ವಚ್ಛತಾ ಶ್ರಮದಾನ ನಡೆಸುತ್ತಿದ್ದಾರೆ.

ಅಂತೆಯೇ ಬುಧವಾರ ನಾಲ್ಕನೇ ಬಾರಿಗೆ ಪರಿಸರ ಬಳಗ ಮತ್ತು ಚಾಮುಂಡಿ ಬೆಟ್ಟ ಉಳಿಸಿ ಸಮಿತಿಯ 14 ಸದಸ್ಯರು ಭಾಗವಹಿಸಿ, ಸ್ವಚ್ಛತಾ ಕಾರ್ಯ ನಡೆಸಿದರು. ಹಲವು ಮೂಟೆ ಪ್ಲಾಸ್ಟಿಕ್ ತ್ಯಾಜ್ಯ ಮತ್ತು ಮದ್ಯದ ಖಾಲಿ ಬಾಟಲಿಗಳನ್ನು ಸಂಗ್ರಹಿಸಿ, ಸೂಕ್ತ ವಿಲೇವಾರಿಗಾಗಿ ಅರಣ್ಯ ಇಲಾಖೆ ಸಿಬ್ಬಂದಿಗೆ ನೀಡಿದರು.

ಇದೇ ಸಂದರ್ಭದಲ್ಲಿ ಪರಿಸರ ಬಳಗದ ಲೀಲಾ ವೆಂಕಟೇಶ್, ಸ್ವಚ್ಛತೆಗೆ ಆದ್ಯತೆ ನೀಡುವ ಮೂಲಕ ಚಾಮುಂಡಿಬೆಟ್ಟದ ಧಾರ್ಮಿಕ ಪಾವಿತ್ರ್ಯ ಕಾಪಾಡುವಂತೆ ಸ್ಥಳದಲ್ಲಿದ್ದ ಭಕ್ತರು ಮತ್ತು ಪ್ರವಾಸಿಗರಲ್ಲಿ ಮನವಿ ಮಾಡುವ ಮೂಲಕ ಅರಿವು ಮೂಡಿಸಿದರು. ಸಂಘಟನೆಯ ಪೂರ್ಣಿಮಾ, ಆನಂದಮೂರ್ತಿ, ಶೈಲಜೇಶ್, ಸುಶೀಲಾ, ಮಾಯಾ, ಗಂಟಯ್ಯ, ನೀಲಮ್ಮ, ಕುಂತಿ, ರಮಾ, ಅರುಣ್, ರಾಹುಲ್, ಪರಶುರಾಮೇಗೌಡ ಸ್ವಚ್ಛತಾ ಶ್ರಮದಾನದಲ್ಲಿ ಭಾಗವಹಿಸಿದ್ದರು.

ಮಡಿವಾಳ ಸಮುದಾಯದ ಗೋಪಿಕೃಷ್ಣರಿಗೆ ತರೀಕೆರೆಯಿಂದ ಕಾಂಗ್ರೆಸ್ ಟಿಕೆಟ್‌ಗೆ ಆಗ್ರಹ



ಮೈಸೂರು, ಮಾ.16(ಜಿಎ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ತರೀಕೆರೆ ವಿಧಾನಸಭಾ ಕ್ಷೇತ್ರದಿಂದ ಮಡಿವಾಳ ಸಮುದಾಯದ ಗೋಪಿಕೃಷ್ಣ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕೆಂದು ಕರ್ನಾಟಕ ರಾಜ್ಯ ಮಡಿವಾಳರ ಸಂಘ ಮನವಿ ಮಾಡಿದೆ.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಎ.ಎಸ್. ರವಿಕುಮಾರ್ ಮಾತನಾಡಿ, ರಾಜ್ಯದಲ್ಲಿ ಸುಮಾರು ಹದಿನೆಂಟು ಲಕ್ಷ ಜನಸಂಖ್ಯೆ ಹೊಂದಿರುವ ನಮ್ಮ ಮಡಿವಾಳ ಸಮುದಾಯವು ರಾಜಕೀಯ ಸ್ಥಾನಮಾನದಿಂದ ವಂಚಿತವಾಗಿದೆ. ಕಳೆದ ಬಾರಿ ಬಿಜೆಪಿ, ಜೆಡಿಎಸ್ ಪಕ್ಷದಿಂದ ಗೋಪಿಕೃಷ್ಣ ಟಿಕೆಟ್ ವಂಚಿತರಾಗಿದ್ದಾರೆ.

ಈ ಬಾರಿ ಕಾಂಗ್ರೆಸ್ ಸೇರ್ಪಡೆಯಾಗಿ ಕಾಂಗ್ರೆಸ್ ಸದಸ್ಯ ನೋಂದಣಿ ಅಭಿಯಾನದಲ್ಲಿ ಅಧಿಕ ಸದಸ್ಯರ ದಾಖಲಿಸುವ ಮೂಲಕ ಕರ್ನಾಟಕದಲ್ಲಿಯೇ ಮೊದಲ ಸ್ಥಾನ ಪಡೆದಿದ್ದು, ಜೊತೆಗೆ ಪಕ್ಷ ಅವರ ಸಾಮಾಜಿಕ ಕಾರ್ಯವನ್ನು ಗುರುತಿಸಿ ಈ ಬಾರಿ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಬೇಕು. ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಸಮಾಜದ ಪರವಾಗಿ ತರೀಕೆರೆ ಕ್ಷೇತ್ರದಿಂದ ಸ್ಪರ್ಧಿಸಲು ಗೋಪಿಕೃಷ್ಣರಿಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸತ್ಯನಾರಾಯಣ್, ವೆಂಕಟೇಶ್, ಶ್ರೀರಾಮ್ ಮತ್ತು ನಾಗೇಶ್ ಉಪಸ್ಥಿತರಿದ್ದರು.

ಇಂದಿನಿಂದ ಲಾರಿ ಮಾಲೀಕರ ಮುಷ್ಕರ: ಅಗತ್ಯ ವಸ್ತುಗಳು, ಸರಕು ಸಾಗಣೆಯಲ್ಲಿ ವ್ಯತ್ಯಯ

ಬೆಂಗಳೂರು, ಮಾ.16–ಕರ್ನಾಟಕದ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟ ಮಾರ್ಚ್ 17ರಿಂದ ಮುಷ್ಕರ ನಡೆಸಲಿವೆ. ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್‌ನಿಂದ ಮುಷ್ಕರಕ್ಕೆ ಕರೆ ನೀಡಲಾಗಿದೆ.

ವಾಣಿಜ್ಯ ವಾಹನಗಳ ಎಫ್.ಸಿ ನವೀಕರಣಕ್ಕೆ ಕ್ಯೂಆರ್ ಕೋಡ್ ಇರುವ ರೆಟ್ರೋ ರಿಫ್ಲೆಕ್ಟರ್ ಟೇಪ್ ಅಳವಡಿಸಿಕೊಂಡು ಬರುವಂತೆ ಸರ್ಕಾರ ಆದೇಶ ಹೊರಡಿಸಿದ್ದು ಇದಕ್ಕೆ ಕರ್ನಾಟಕ ಲಾರಿ ಮಾಲೀಕರು ಮತ್ತು ಏಜೆಂಟರ ಸಂಘಗಳ ಒಕ್ಕೂಟ ವಿರೋಧ ವ್ಯಕ್ತಪಡಿಸಿದೆ. ಬೆಂಗಳೂರು ನಗರದಲ್ಲಿ ಸರಕು ಸಾಗಣೆ ವಾಹನಗಳ ಪ್ರವೇಶ ರದ್ದು ಪಡಿಸಿರುವುದನ್ನು, ಅಗತ್ಯ ವಸ್ತುಗಳ ಪೂರೈಕೆಯನ್ನು ಸ್ಥಗಿತಗೊಳಿಸಿ ಪ್ರತಿಭಟನೆ ಮಾಡಲು ನಿರ್ಧರಿಸಲಾಗಿದೆ.

ಅಗತ್ಯ ಸೇವೆಗಳಿಗೆ ವ್ಯತ್ಯಯ: ಮುಷ್ಕರ ಹಿನ್ನೆಲೆ ಇಂದಿನಿಂದ ಅಗತ್ಯ ವಸ್ತುಗಳ ಸರಕು ಸಾಗಣೆಯಲ್ಲಿ ವ್ಯತ್ಯಯವಾಗುವ ಸಾಧ್ಯತೆ ಇದೆ. ಹೂವು, ಹಣ್ಣು, ಹಾಲು ತರಕಾರಿಗಳು ಮತ್ತು ಇತರ ಅಗತ್ಯ ಸೇವೆಗಳನ್ನು ಪೂರೈಕೆ ಮಾಡುವ ಸರಕು ಸಾಗಣೆ ವಾಹನಗಳು ಅನಿರ್ದಿಷ್ಟಾವಧಿ ಮುಷ್ಕರ ನಡೆಯಲಿದೆ

ಸಂಘದ ಬೇಡಿಕೆಗಳು: ಕ್ಯೂಆರ್ ಕೋಡ್ ಆಧಾರಿತ ರಿಫ್ಲೆಕ್ಟರ್ ಟೇಪುಗಳನ್ನು ಅಳವಡಿಸಿಕೊಳ್ಳಬೇಕೆನ್ನುವ ನಿಯಮ ರದ್ದುಪಡಿಸಬೇಕು. ಬೆಂಗಳೂರು– ಮೈಸೂರು ರಸ್ತೆಯಲ್ಲಿ ದ್ವಿಚಕ್ರ ಮತ್ತು ಮಂದಗತಿಯಲ್ಲಿ ಚಲಿಸುವ ಟ್ರಾಕ್ಟರ್ ಆಟೋರಿಕ್ಷಾಗಳ ಓಡಾಟ ನಿಷೇಧಿಸಬೇಕು ನೈಸ್ ರಸ್ತೆಯಲ್ಲಿ ಕಳೆದ 10 ವರ್ಷಗಳಿಂದಲೂ ತೆಗೆದುಕೊಳ್ಳುತ್ತಿರುವ ಟೋಲ್ ಶುಲ್ಕವನ್ನು ತೆಗೆದುಹಾಕಬೇಕು ನಗರದ ಒಳಗೆ ಅವೈಜ್ಞಾನಿಕ ಕ್ರಮದಲ್ಲಿ ವಾಹನಗಳ ಸಂಚಾರವನ್ನು ನಿಷೇಧಿಸಿರುವ ನಿಯಮವನ್ನ ವಾಪಸ್ಸು ಪಡೆಯಬೇಕು.

ವಿಶ್ವಸಂಸ್ಥೆಯಲ್ಲಿ ಕನ್ನಡ ಮಾತನಾಡಿದ 'ಕಾಂತಾರ' ಹೀರೋ ರಿಷಬ್ ಶೆಟ್ಟಿ

ವಿಶ್ವಸಂಸ್ಥೆ, ಮಾ.16– ವಿಶ್ವಸಂಸ್ಥೆಯ ವಾರ್ಷಿಕ ಸಭೆಯಲ್ಲಿ ಭಾಗವಹಿಸಿರುವ 'ಕಾಂತಾರ' ಹೀರೋ ರಿಷಬ್ ಶೆಟ್ಟಿ, ಪರಸರ ಸಂರಕ್ಷಣೆ ಕುರಿತು ಕನ್ನಡದಲ್ಲಿಯೇ ಭಾಷಣ ಮಾಡಿ ಅಭಿಮಾನಿಗಳ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.



ಮಾನವ ಹಕ್ಕು ಸಂರಕ್ಷಣೆ ಷರತ್ತಿನ 28ನೇ ಸಭೆಯಲ್ಲಿ ಭಾಗವಹಿಸಿದ ರಿಷಬ್, ಪರಿಸರ ಸಂರಕ್ಷಣೆಗಾಗಿ ಕಳೆದ ಒಂದು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ತಳಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾರತದ ಇಕೋಫಾರ್ಮ್ ಪ್ರತಿನಿಧಿಯಾಗಿ ನಾನು ಇಲ್ಲಿಗೆ ಬಂದಿದ್ದೇನೆ. ಪರಿಸರ ಸ್ವಚ್ಛತೆ ಕಾಪಾಡುವುದು ಸದ್ಯದ ಅಗತ್ಯ. ಒಬ್ಬ ನಟ, ನಿರ್ದೇಶಕನಾಗಿ ತಳಮಟ್ಟದಲ್ಲಿ ಪರಿಣಾಮ ಬೀರಬೇಕು ಎಂಬುದು ನನ್ನ ಉದ್ದೇಶ ಎಂದಿದ್ದಾರೆ. ಅಂತಾರಾಷ್ಟ್ರೀಯ ವೇದಿಕೆಯಲ್ಲಿ ರಿಷಬ್ ಕನ್ನಡ ಮಾತನಾಡಿರುವುದು ಅದರಲ್ಲೂ ಪರಿಸರ ಸಂರಕ್ಷಣೆ ಬಗ್ಗೆ ನೀಡಿರುವ ಹೇಳಿಕೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಸ್ವಿಡ್ಜರ್‌ಲ್ಯಾಂಡ್‌ನಲ್ಲಿ 'ಕಾಂತಾರ' ಸಿನಿಮಾ ಪ್ರದರ್ಶನ..!: ರಿಷಭ್ ಶೆಟ್ಟಿ ನಟಿಸಿ, ನಿರ್ದೇಶನ ಮಾಡಿರುವ 'ಕಾಂತಾರ' ಚಿತ್ರ ಈಗಾಗಲೇ ವಿಶ್ವಾದ್ಯಂತ ಜನಮನ್ನಣೆ ಪಡೆದಿದ್ದು, ಮಾ.17ರಂದು (ಜಿನಿವಾ ಕಾಲಮಾನ) ಸಂಜೆ 6.30ಕ್ಕೆ ಸ್ವಿಡ್ಜರ್‌ಲ್ಯಾಂಡ್‌ನ ಜಿನಿವಾ ನಗರದಲ್ಲಿ ಹಾಲ್ ನಂ.13ರ ಪಾಥೆ ಬಾಲೆಕ್ಸೆಟ್‌ನಲ್ಲಿ 'ಕಾಂತಾರ' ಚಿತ್ರ ಪ್ರದರ್ಶನವಾಗಲಿದೆ. ಮಾ.17 ಪುನೀತ್ ರಾಜಕುಮಾರ್ ಅವರ ಹುಟ್ಟುಹಬ್ಬ. ಅದೇ ದಿನ ಚಿತ್ರದ ಪ್ರದರ್ಶನ ಆಯೋಜನೆಯಾಗಿರುವುದು ವಿಶೇಷ. ಅವರ ಹುಟ್ಟುಹಬ್ಬದ ದಿನ ನಡೆಯುವ 'ಕಾಂತಾರ' ಚಿತ್ರದ ಪ್ರದರ್ಶನವನ್ನು ಪುನೀತ್ ರಾಜಕುಮಾರ್ ಅವರಿಗೆ ಅರ್ಪಿಸುವುದಾಗಿ ರಿಷಭ್ ಶೆಟ್ಟಿ ತಿಳಿಸಿದ್ದಾರೆ.

ತಂತ್ರಜ್ಞಾನ ಬಳಕೆಯಿಂದ ತನಿಖಾ ಕಾರ್ಯ ಸುಲಭ ಸಾಧ್ಯವಾಗಿದೆ

● ಪೊಲೀಸ್ ಮಹಾನಿರ್ದೇಶಕ ಡಾ. ಪಿ.ರವೀಂದ್ರನಾಥ್ ವಿವರಣೆ ● ಮೈಸೂರಲ್ಲಿ ಮಹಿಳಾ ಪೊಲೀಸ್ ಕಾನ್‌ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ಆಕರ್ಷಕ ನಿರ್ಗಮನ ಪಥ ಸಂಚಲನ ● ಪ್ರಶಿಕ್ಷಣಾರ್ಥಿಗಳಲ್ಲಿ ದಂತ ವೈದ್ಯರು, ಇಂಜಿನಿಯರ್ಸ್, ಸ್ನಾತಕೋತ್ತರ ಪದವೀಧರರೂ ಇದ್ದಾರೆ



ಮೈಸೂರಿನ ಜ್ಯೋತಿ ನಗರದ ಡಿಎಆರ್ ಕವಾಯತು ಮೈದಾನದಲ್ಲಿ ಗುರುವಾರ ನಡೆದ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ಡಿಜಿಪಿ (ತರಬೇತಿ) ಡಾ. ಪಿ.ರವೀಂದ್ರನಾಥ್ ಅವರು ಸರ್ವೋತ್ತಮ ಬಹುಮಾನ ಪಡೆದ ಕೆ.ಆರ್.ವೈದಿಕ್ ಮತ್ತು ಹೆಚ್.ಎಸ್.ಗಂಗೆ ಅವರಿಗೆ ಟ್ರೋಫಿ ಪ್ರದಾನ ಮಾಡಿದರು. (ಎಡದಿಂದ) ಡಿಸಿಪಿ ಎ.ಮಾರುತಿ, ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲರಾದ ಎಂ.ಎಸ್.ಗೀತಾ, ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಹಾಗೂ ಎಸ್ಪಿ ಸೀಮಾ ಲಾಟ್ಕರ್‌ರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಮಾ.16(ಆರ್‌ಕೆ)–ಅಪರಾಧ ಪ್ರಕರಣಗಳ ತನಿಖೆಗೆ ಪೊಲೀಸ್ ಇಲಾಖೆಯು ತಂತ್ರಜ್ಞಾನವನ್ನು ಸಂಪೂರ್ಣವಾಗಿ ಬಳಸಿಕೊಳ್ಳುತ್ತಿದೆ ಎಂದು ಪೊಲೀಸ್ ಮಹಾ ನಿರ್ದೇಶಕ (ತರಬೇತಿ) ಡಾ. ಪಿ.ರವೀಂದ್ರನಾಥ್ ಅವರು ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ಜ್ಯೋತಿ ನಗರದ ಡಿಎಆರ್ ಮೈದಾನದಲ್ಲಿ ನಡೆದ ಪೊಲೀಸ್ ತರಬೇತಿ ಶಾಲೆಯ 8ನೇ ತಂಡ ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 4ನೇ ತಂಡದ ಮಹಿಳಾ ಸಿವಿಲ್, ರೈಲ್ವೇ ಹಾಗೂ ಕೆಎಸ್‌ಐಎಸ್‌ಎಫ್ ಪೊಲೀಸ್ ಕಾನ್ ಸ್ಟೇಬಲ್ ಪ್ರಶಿಕ್ಷಣಾರ್ಥಿಗಳ ನಿರ್ಗಮನ ಪಥ ಸಂಚಲನ ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತಿದ್ದರು.

ದಿ ಕಂಬೈನ್ಡ್ ಸಾಫ್ಟ್‌ವೇರ್ ಆಫ್ ಪ್ರಾಸಿಕ್ಯೂಷನ್, ಫೊರೆನ್ಸಿಕ್ ಸೈನ್ಸಸ್ ಅಂಡ್ ಪ್ರಿಸನ್ಸ್ (CSPFSP) ತಂತ್ರಾಂಶ ಆಧರಿತ ಸಮಗ್ರ ಡೇಟಾದೊಂದಿಗೆ ತಂತ್ರಜ್ಞಾನ ಬಳಸಿ ತನಿಖೆ ಕೈಗೊಳ್ಳುತ್ತಿದ್ದು, ಇದರಿಂದ ಇಲಾಖೆಯು ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗುತ್ತಿದೆ ಎಂದ ಅವರು, ಪೊಲೀಸ್ ಇಲಾಖೆಗೆ ಸೇರಿರುವ ಸಿಬ್ಬಂದಿ ಸಹ ಬಹುತೇಕ ಮಂದಿ ಬಿಇ, ಎಂಬಿಎಯಂತಹ ಉನ್ನತ ಶಿಕ್ಷಣ ಹೊಂದಿರುವವರಾಗಿರುವುದರಿಂದ ತಂತ್ರಜ್ಞಾನವನ್ನು ಬಳಸಿಕೊಂಡು ಉತ್ತಮ ಕೆಲಸ ಮಾಡಬೇಕು ಎಂದು ಅವರು ತಿಳಿಸಿದರು.

ಅಪರಾಧ ತಡೆ, ಅಪರಾಧ ಪತ್ತೆ, ಕಾನೂನು ಮತ್ತು ಸುವ್ಯವಸ್ಥೆ ಮತ್ತು ಸುಗಮ ಸಂಚಾರ ವ್ಯವಸ್ಥೆ ಪೊಲೀಸ್ ಇಲಾಖೆಯ ಪ್ರಮುಖ ಕೆಲಸ. ಅದರಲ್ಲೂ ತನಿಖೆ ಅತೀ ಮುಖ್ಯವಾದುದು. ತಂತ್ರಾಂಶ ಬಳಸುತ್ತಿರುವುದರಿಂದ ಈಗ ಪ್ರಕರಣಗಳ ತನಿಖೆ ಕಾರ್ಯ ಸುಲಭವಾಗುತ್ತಿದೆ. ಅದರ ಜೊತೆಗೆ ಅಭಿಯೋಜನೆ, ಎಫ್‌ಎಸ್‌ಎಲ್ ಫಿಂಗರ್ ಪ್ರಿಂಟ್ಸ್, ಜೈಲು ವಿಷಯಗಳನ್ನೊಳಗೊಂಡ ತಂತ್ರಜ್ಞಾನಾಧಾರಿತ ಡೇಟಾಗಳಿಂದ ಅಪರಾಧ ಪ್ರಕರಣಗಳನ್ನು ಪತ್ತೆ ಮಾಡಬಹುದಾಗಿದೆ ಎಂದು ಅವರು ನುಡಿದರು.


ಮಕ್ಕಳು, ಮಹಿಳೆಯರು ಹಾಗೂ ದಲಿತರ ಕಾಯ್ದೆ, ಸಿಆರ್‌ಇ ಸೆಲ್, ಫಾರೆಸ್ಟ್ ಸೆಲ್, ಜುವೆನೈಲ್ ಜಸ್ಟೀಸ್ ಕಾಯ್ದೆಗಳನ್ನು ತಿಳಿದುಕೊಂಡು ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿ ಎಂದ ಡಾ. ರವೀಂದ್ರನಾಥ ಅವರು, ಪೊಲೀಸ್ ಕಾನ್‌ಸ್ಟೇಬಲ್ ಮತ್ತು ಹೆಡ್ ಕಾನ್‌ಸ್ಟೇಬಲ್‌ಗಳನ್ನೂ ಸಹ ಪೊಲೀಸ್ ಅಧಿಕಾರಿ ಎಂದೇ ಕರೆಯಲಾಗುತ್ತದೆ. ಪೊಲೀಸ್ ಠಾಣೆ ಅಧಿಕಾರಿಯಾಗಿಯೂ ಹೆಡ್ ಕಾನ್‌ಸ್ಟೇಬಲ್ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ ಎಂದರು.

8ನೇ ತಂಡದ ಹೆಚ್.ಎಸ್. ಗಂಗೆ ಹಾಗೂ 4ನೇ ತಂಡದ ಕೆ.ಆರ್.ವೈದಿಕ್ ಅವರು ಸರ್ವೋತ್ತಮ ಪ್ರಶಸ್ತಿಗೆ ಭಾಜನರಾದರೆ, ಒಳಾಂಗಣದಲ್ಲಿ ಹೆಚ್.ಎಸ್.ಗಂಗೆ ಎಸ್.ಎಂ.ಸೌಂದರ್ಯ ಹಾಗೂ ಕೆ.ಶಿಲ್ಪ ಕ್ರಮವಾಗಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ಪಡೆದುಕೊಂಡರು.

ಹೊರಾಂಗಣದಲ್ಲಿ ವಿಜಯ ಕುಮಾರಿ(ಪ್ರ), ಪವಿತ್ರ(ದ್ವಿ), ಹೆಚ್.ಆರ್.ಚಾಂದಿನಿ(ತೃ), ಫೈರಿಂಗ್‌ನಲ್ಲಿ ಎಸ್.ಎಂ.ಪೂಜಾ(ಪ್ರ), ಬಿ.ಎಂ.ಶಿಲ್ಪ(ದ್ವಿ), ಹಾಗೂ ಶ್ವೇತ(ತೃ) ಬಹುಮಾನ ಪಡೆದಿದ್ದಾರೆ. ಅದೇ ರೀತಿ 4ನೇ ತಂಡದ ಕೆ.ಆರ್.ವೈದಿಕ್, ಶ್ವೇತಾ ಅಲಗೌಡ, ಟಿ.ರಂಜಿನಿ ಅವರು ಒಳಾಂಗಣದಲ್ಲಿ, ಎನ್.ಆರ್.ಸುಗುಣ, ಅಂಜುಂ ತೇರಟಾಳ, ಹೆಚ್.ಪವಿತ್ರ ಹೊರಾಂಗಣದಲ್ಲಿ, ಹೆಚ್.ವಿ.ದಿವ್ಯಾ, ಎ.ಸಿಮೈನ್, ಸಾವಿತ್ರಿ ಕೆಂಚರೆಡ್ಡಿ ಅವರು ರೈಫಲ್ ಶೂಟಿಂಗ್‌ನಲ್ಲಿ ಬಹುಮಾನಗಳನ್ನು ಪಡೆದರು.

ಪೊಲೀಸ್ ತರಬೇತಿ ಶಾಲೆಯ 240 ಮಂದಿ ಹಾಗೂ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ 95 ಮಹಿಳಾ ಕಾನ್‌ಸ್ಟೇಬಲ್‌ಗಳ ಪೈಕಿ ಒಬ್ಬರು ದಂತ ವೈದ್ಯೆ 36 ಮಂದಿ ಇಂಜಿನಿಯರ್‌ಗಳು, 76 ಮಂದಿ ಸ್ನಾತಕೋತ್ತರ, 200 ಮಂದಿ ಪದವೀಧರರು ಹಾಗೂ 21 ಪಿಯುಸಿ ಪಾಸಾದವರಾಗಿದ್ದಾರೆ.

ನಗರ ಪೊಲೀಸ್ ಆಯುಕ್ತ ಬಿ.ರಮೇಶ್, ಎಸ್ಪಿ ಸೀಮಾ ಲಾಟ್ಕರ್, ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲರಾದ ಎಂ.ಎಸ್. ಗೀತಾ, ಸಿಎಆರ್ ಡಿಸಿಪಿ ಎ.ಮಾರುತಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಪ್ರಶಿಕ್ಷಣಾರ್ಥಿಗಳ ಆಕರ್ಷಕ ಪಥ ಸಂಚಲನ ನೆರೆದಿದ್ದವರ ಮನಸೆಳೆಯಿತು. ಆಕಾಶವಾಣಿಯ ಮಂಜುನಾಥ ಹಾಗೂ ಕೆಪಿಎ ಸಿಬ್ಬಂದಿ ನಂದಿನಿ ಅವರು ಕಾರ್ಯಕ್ರಮ ನಿರೂಪಿಸಿದರು.



ಮತ ಎಣಿಕೆ ಕೇಂದ್ರ, ಇವಿಎಂ ಉಗ್ರಾಣ ಪರಿಶೀಲನೆ

ಸರ್ವ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ತಾಕೀತು



ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ, ಪೊಲೀಸ್ ಆಯುಕ್ತ ಬಿ. ರಮೇಶ್ ಬಾನೋತ್ ಅವರು ಗುರುವಾರ ಮೈಸೂರಿನ ಮಹಾರಾಣಿ ವಾಣಿಜ್ಯ ಕಾಲೇಜಿನ ಮತ ಎಣಿಕೆ ಕೇಂದ್ರದ ಸಿದ್ಧತಾ ಕಾರ್ಯವನ್ನು ಪರಿಶೀಲಿಸಿದರು.

ಮೈಸೂರು, ಮಾ. 16 (ಆರ್‌ಕೆ)– ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಧಿ ಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಇಂದು ಮೈಸೂರಿನ ವಾಲ್ಮೀಕಿ ರಸ್ತೆಯಲ್ಲಿರುವ ಮಹಾರಾಣಿ ಸರ್ಕಾರಿ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಮತ ಎಣಿಕೆ ಕೇಂದ್ರ ಹಾಗೂ ಸಿದ್ಧಾರ್ಥ ಬಡಾವಣೆಯ ಜಿಲ್ಲಾ ಕಚೇರಿಗಳ ಸಂಕೀರ್ಣ ಕಟ್ಟಡದ ಬಳಿಯ ಇವಿಎಂ ಮತ್ತು ವಿವಿ ಪ್ಯಾಟ್ ದಾಸ್ತಾನು ಕಟ್ಟಡವನ್ನು ಪರಿಶೀಲಿಸಿದರು.

ಸುಗಮ ಹಾಗೂ ಶಾಂತಿಯುತ ಚುನಾವಣೆಗಾಗಿ ಕಾರ್ಯ ಚುರುಕುಗೊಳಿಸಿರುವ ಜಿಲ್ಲಾಧಿಕಾರಿಗಳು, ನಿನ್ನೆಯಷ್ಟೇ ಸೆನೆಟ್ ಭವನದಲ್ಲಿ ಚುನಾವಣಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಮಾರ್ಗ ಸಂಬಂಧ ದರ್ಶನ ನೀಡಿದ ಬೆನ್ನಲ್ಲೇ ಇಂದು ಮತ ಎಣಿಕಾ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸಿದ್ಧತೆ ಸಂಬಂಧ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲೆಯ ಎಲ್ಲಾ 11 ವಿಧಾನಸಭಾ ಕ್ಷೇತ್ರಗಳ ಮತಯಂತ್ರಗಳನ್ನು ಸುರಕ್ಷಿತವಾಗಿರಿಸಲು ಸ್ಟ್ರಾಂಗ್ ರೂಂಗಳಿಗೆ ಬೇಕಾದ ಸೌಲಭ್ಯಗಳ ಬಗ್ಗೆ ನಗರ ಪೊಲೀಸ್ ಕಮೀಷನರ್ ಬಿ. ರಮೇಶ್, ಡಿಸಿಪಿ ಎಂ. ಮುತ್ತುರಾಜ್, ಎನ್.ಆರ್. ಡಿಸಿಪಿ ಸಿ.ಕೆ. ಅಶ್ವತ್ಥನಾರಾಯಣ ಅವರೊಂದಿಗೆ ಚರ್ಚಿಸಿದ ಅವರು, ಸಿಸಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿರಿಸುವುದು, ಹೆಚ್ಚುವರಿ ವಿದ್ಯುತ್ ದೀಪಗಳನ್ನು ಅಳವಡಿಸಿ, ಭದ್ರತಾ ವ್ಯವಸ್ಥೆ ಪರಿಣಾಮ ಕಾರಿಯಾಗಿರುವಂತೆ ಸೂಚನೆ ನೀಡಿದರು.

ಮತ ಎಣಿಕೆ ಕೇಂದ್ರದಲ್ಲಿ ಇಂಟರ್ ನೆಟ್ ವ್ಯವಸ್ಥೆ, ಕಂಪ್ಯೂಟರ್ ಕೊಠಡಿ, ಪೊಲೀಸ್ ಕಂಟ್ರೋಲ್ ರೂಂ, ಮಾಧ್ಯಮ ಕೊಠಡಿಗೆ ಪೂರ್ಣ ಪ್ರಮಾಣದಲ್ಲಿ ಸೌಲಭ್ಯ ಕಲ್ಪಿಸುವುದು, ವಾಹನ ನಿಲುಗಡೆ, ಶೌಚಾಲಯ, ಕುಡಿಯುವ ನೀರು, ವಿದ್ಯುತ್ ಸಂಪರ್ಕ ಕಲ್ಪಿಸಿ ಮತದಾನ ಮುಗಿದ ಬಳಿಕ ಎಲ್ಲಾ ಮತಗಟ್ಟೆಗಳಿಂದ ತರುವ ಮತ ಯಂತ್ರ ಗಳನ್ನು ಕ್ರಮ ಸಂಖ್ಯೆಗನುಗುಣವಾಗಿ ಸ್ಟ್ರಾಂಗ್ ರೂಂನಲ್ಲಿರಿಸಿ, ಸೀಲ್ ಮಾಡಲು ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕೆಂದು ಡಾ. ರಾಜೇಂದ್ರ ಅವರು ಅಧಿಕಾರಿಗಳಿಗೆ ಇದೇ ವೇಳೆ ನಿರ್ದೇಶನ ನೀಡಿದರು.

ಪ್ಯಾರಾ ಮಿಲಿಟರಿ ಪಡೆಯೊಂದಿಗೆ ಸಿವಿಲ್ ಪೊಲೀಸರು ದಿನದ 24 ಗಂಟೆಯೂ ಭದ್ರತಾ ಕರ್ತವ್ಯ ನಿರ್ವಹಿಸುವಂತೆ ಯೋಜನೆ ರೂಪಿಸಿ, ಸಿಬ್ಬಂದಿಗಳಿಗೆ ಊಟ, ತಿಂಡಿ, ನೀರು, ಶೌಚಾಲಯ ವ್ಯವಸ್ಥೆ ಮಾಡಬೇಕು. ಇವಿಎಂ ಮತ್ತು ವಿವಿ ಪ್ಯಾಟ್‌ಗಳು ಸುಸ್ಥಿತಿಯಲ್ಲಿರುವಂತೆ ಆಗಿಂದಾಗ್ಗೆ ಪರೀಕ್ಷಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಇವಿಎಂ ಮತ್ತು ವಿವಿ ಪ್ಯಾಟ್ ನೋಡಲ್ ಅಧಿಕಾರಿ ಜವಾಬ್ದಾರಿ ಹೊಂದಿರುವ ಮುಡಾ ಆಯುಕ್ತ ಜಿ.ಟಿ. ದಿನೇಶ್ ಕುಮಾರ್, ಚುನಾವಣಾ ತಹಸೀಲ್ದಾರ್ ರಾಮ ಪ್ರಸಾದ್, ಡಿಸಿಪಿ ಎಸ್. ಜಾಹ್ನವಿ ಸೇರಿದಂತೆ ಇತರೆ ಅಧಿಕಾರಿಗಳು ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ನಾಳೆ ಡಾ.ಪಿ.ಬಿ.ಶ್ರೀನಿವಾಸ್ ಸ್ಮರಣಾರ್ಥ ಚಿತ್ರಗೀತೆ ಕಾರ್ಯಕ್ರಮ



ಮೈಸೂರು, ಮಾ.16(ಜಿಎ)– ಮೈಸೂರಿನ ಗಾನ ಚಂದನ ಕಲಾಬಳಗದ ವತಿಯಿಂದ ಶನಿವಾರ(ಮಾ.18) ದಂದು ಡಾ.ಪಿ.ಬಿ.ಶ್ರೀನಿವಾಸ್ ಒಂದು ನೆನಪು , 70ರ ದಶಕದ ಕನ್ನಡ ಚಲನಚಿತ್ರ ಗೀತೆ ಕಾರ್ಯಕ್ರಮ ಹಾಗೂ ಯೋಧ ನಮನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಬಳಗದ ಸಂಸ್ಥಾಪಕ ಆರ್.ಸುಧೀಂದ್ರ ತಿಳಿಸಿದರು.

ನಗರದ ಪತ್ರಕರ್ತರ ಭವನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾ ಕಾರ್ಯಕ್ರಮ ನಡೆಯಲಿದ್ದು, ಅಧ್ಯಕ್ಷತೆಯನ್ನು ಕಾಂಗ್ರೆಸ್ ಮುಖಂಡ ನವೀನ್ ಕುಮಾರ್ ವಹಿಸಲಿದ್ದಾರೆ. ಉದ್ಘಾಟನೆಯನ್ನು ಸುಪ್ರಭ ನಾಗೇಶ್‌ರಾವ್, ರಾಜನ್, ಎಸ್.ರಾಮಮೂರ್ತಿ ಮತ್ತು ರಮಾಮಣಿ ನೆರವೇರಿಸಲಿದ್ದಾರೆ. ಶ್ರೀ ದೇವಿ ಡೆವೆಲಪರ್ಸ್‌ನ ಹೆಚ್.ಕೆ. ಸೋಮಶೇಖರ್, ಜೆಡಿಎಸ್ ಮುಖಂಡ ಶೇಖರ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದಾರೆ ಎಂದರು. ಈ ವೇಳೆ ಆಯೋಜಕ ನಟರಾಜ್, ಗಾಯಕರಾದ ವೆಂಕಟರಾಮು ಮತ್ತು ಹೆಚ್.ಎಸ್.ಗೋಪಾಲಕೃಷ್ಣ ಉಪಸ್ಥಿತರಿದ್ದರು.



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಚಾಮುಂಡೇಶ್ವರಿ ಕಾಂಗ್ರೆಸ್ ಪಕ್ಷದ ಪ್ರಚಾರ ಸಮಿತಿ ಅಧ್ಯಕ್ಷರಾದ ತ್ಯಾಗರಾಜು (ಬೋಗಾದಿ) ಅವರನ್ನು ಅಭಿಮಾನಿಗಳು ಅಭಿನಂದಿಸಿದರು. ಮುಖಂಡರುಗಳಾದ ಮಂಜು, ರವಿಕುಮಾರ್, ಸೋಮುಗೌಡ, ತಿಲಕ್, ಪ್ರೇಮ್, ನಾಗರಾಜು, ಚಿದು, ಹೇಮಂತ್, ವಸಂತ, ರಾಜೇಶ್, ರಾಮು ಮುಂತಾದವರನ್ನು ಚಿತ್ರದಲ್ಲಿ ಕಾಣಬಹುದು.

'ಕೃಷ್ಣಾಶ್ವತ್ಥ ಆಯುರ್ವೇದ ಸಸ್ಯಕಾಶಿ' ಉದ್ಯಾನವನ ಉದ್ಘಾಟನೆ

ಆಯುರ್ವೇದ ನಮ್ಮ ನೆಲದ ಔಷಧ ಪರಂಪರೆ ; ಶಾಸಕ ಎಲ್.ನಾಗೇಂದ್ರ



ಮೈಸೂರು, ಮಾ.16(ಪಿಎಂ)– ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯ ಸುಬ್ಬರಾಯನಕೆರೆಯ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಶೀಘ್ರದಲ್ಲಿ ಆಯುರ್ವೇದ ಸಸ್ಯಗಳು ತಲೆ ಎತ್ತಲಿವೆ.

ಕೆಮ್ಮು ಚಿಕ್ಕಳಿಕೆ ಮತ್ತು ಅಲರ್ಜಿಗೆ ಬಳಸುವ ದೊಡ್ಡಪತ್ರೆ, ಮಧುಮೇಹ ನಿಯಂತ್ರಿಸುವ ಅಮೃತಬಳ್ಳಿ, ಇನ್ಸುಲಿನ್ ಉತ್ಪಾದನೆಗೆ ಬಳಸುವ ಇನ್ಸುಲಿನ್, ಮಲಬದ್ಧತೆ ನಿಯಂತ್ರಿಸುವ ಬಸಳೆ, ಕೆಮ್ಮು–ನೆಗಡಿ ಗುಣಪಡಿಸುವ ಕೃಷ್ಣ ತುಳಸಿ, ಆಹಾರ ಮತ್ತು ಪಾನೀಯಗಳಲ್ಲಿ ಸುವಾಸನೆಗಾಗಿ ಬಳಸುವ ಲೆಮನ್ ಗ್ರಾಸ್ ಸೇರಿದಂತೆ ಹತ್ತು ಹಲವು ಆಯುರ್ವೇದ ಗಿಡಗಳನ್ನು ಇಲ್ಲಿ ನಾಟಿ ಮಾಡಲಾಗಿದೆ ಅಲ್ಲದೆ, 'ಕೃಷ್ಣಾಶ್ವತ್ಥ ಆಯುರ್ವೇದ ಸಸ್ಯಕಾಶಿ' ಶೀರ್ಷಿಕೆಯಡಿ ಉದ್ಯಾನವನದ ಸ್ವರೂಪ ನೀಡಿ, ಉದ್ಘಾಟನೆಯನ್ನೂ ನೆರವೇರಿಸಲಾಗಿದೆ.

ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿರುವ ಮೈಸೂರು ಜಿಲ್ಲೆ ಮತ್ತು ನಗರ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಪಕ್ಕದಲ್ಲಿ ಈ 'ಕೃಷ್ಣಾಶ್ವತ್ಥ ಆಯುರ್ವೇದ ಸಸ್ಯಕಾಶಿ' ಉದ್ಯಾನವನ ನಿರ್ಮಿಸಲಾಗಿದೆ. ಇದರ ಉದ್ಘಾಟನೆಯನ್ನು ಶಾಸಕ ಎಲ್. ನಾಗೇಂದ್ರ ಗುರುವಾರ ನೆರವೇರಿಸಿದರು. ಶಾಸಕ ಎಲ್.ನಾಗೇಂದ್ರ ಅವರ ಎಸ್‌ಎಫ್‌ಸಿ ಅನುದಾನದಲ್ಲಿ ಈ ಆಯುರ್ವೇದ ಉದ್ಯಾನವನ ನಿರ್ಮಿಸಿದ್ದು, ಸ್ವಾತಂತ್ರ್ಯ ಹೋರಾಟಗಾರರ ಸಂಘದ ವತಿಯಿಂದ ಸದರಿ ಉದ್ಯಾನವನದಲ್ಲಿ ಆಯುರ್ವೇದ ಗಿಡಗಳನ್ನು ನೆಡಲಾಗಿದೆ

ಸ್ವಾತಂತ್ರ್ಯ ಹೋರಾಟಗಾರರಾದ ಡಾ.ಎಂ.ಜಿ.ಕೃಷ್ಣಮೂರ್ತಿ ಮತ್ತು ಪ್ರೊ. (ಮೇಜರ್) ಹೆಚ್.ಎನ್.ಅಶ್ವತ್ಥನಾರಾಯಣ ಅವರ ಸ್ಮರಣಾರ್ಥ ಸದರಿ ಆಯುರ್ವೇದ ಉದ್ಯಾನವನ ನಿರ್ಮಿಸಲಾಗಿದೆ. ಅಲ್ಲದೆ, ಈ ಇಬ್ಬರೂ ಮಹನೀಯರ ಹೆಸರುಗಳನ್ನು ಸೇರ್ಪಡೆಗೊಳಿಸಿ 'ಕೃಷ್ಣಾಶ್ವತ್ಥ' ಎಂದು ಈ ಉದ್ಯಾನವನಕ್ಕೆ ನಾಮಕರಣ ಮಾಡಲಾಗಿದೆ

ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮೈಸೂರು ಮಹಾನಗರ ಪಾಲಿಕೆ 14ನೇ ಹಣಕಾಸು ಯೋಜನೆಯ ಅನುದಾನ 18 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಯೋಗ ಮಂಟಪವನ್ನೂ ಶಾಸಕರು ಇದೇ ವೇಳೆ ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಸ್ವಾತಂತ್ರ್ಯ ಹೋರಾಟಗಾರ ಪ್ರೊ (ಮೇಜರ್) ಹೆಚ್.ಎನ್.ಅಶ್ವತ್ಥನಾರಾ ಯಣ ಅವರಿಗೆ ಪುಣ್ಯಲೋಕ ಪ್ರಾಪ್ತಿಯಾಗಿ ಇಂದಿಗೆ ವರ್ಷ ತುಂಬಿದ್ದು, ಅವರ ಸ್ಮರಣಾರ್ಥ 'ಕೃಷ್ಣಾಶ್ವತ್ಥ ಆಯುರ್ವೇದ ಸಸ್ಯಕಾಶಿ' ಉದ್ಯಾನವನ ನಿರ್ಮಿಸಿರುವುದು ಕ್ಷೇತ್ರದ ಹೆಮ್ಮೆಯಾಗಿದೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರು ಆಯುರ್ವೇದದ ಮಹತ್ವ ಅನಾವರಣಗೊಳಿಸಿದ್ದು, ಇದಕ್ಕೆ ಹೆಚ್ಚಿನ ಉತ್ತೇಜನ ನೀಡುತ್ತಿದ್ದಾರೆ. ಆಯುರ್ವೇದ ನಮ್ಮ ನೆಲದ ಔಷಧ ಪರಂಪರೆಯಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಆಯುರ್ವೇದದ ಉಪ ಉದ್ಯಾನ ನಿರ್ಮಾಣಗೊಳ್ಳುವಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಮತ್ತು ಕಾರ್ಯಾಧ್ಯಕ್ಷ ಎ.ಯೋಗಾನಂದ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷ ವೈ.ಸಿ.ರೇವಣ್ಣ ಆಯುರ್ವೇದ ಉದ್ಯಾನವನದ ಶಿಲಾನ್ಯಾಸ ಫಲಕ ಉದ್ಘಾಟಿಸಿದರು. ಇದಕ್ಕೂ ಮುನ್ನ ಮೇಯರ್ ಶಿವಕುಮಾರ್ ಆಯುರ್ವೇದ ಉದ್ಯಾನವನಕ್ಕೆ ಭೇಟಿ ನೀಡಿ ಆಯುರ್ವೇದ ಸಸ್ಯಗಳನ್ನು ವೀಕ್ಷಿಸಿದರು. ಉಪಮೇಯರ್ ಡಾ.ಜಿ.ರೂಪಾ, ಪಾಲಿಕೆ ಸದಸ್ಯೆ ಎಂ.ಪ್ರಮೀಳಾ ಭರತ್, ಸ್ವಾತಂತ್ರ್ಯ ಹೋರಾಟಗಾರರ ಸಂಘದ ಕಾರ್ಯಾಧ್ಯಕ್ಷ ಎ.ಯೋಗಾನಂದ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಯುಗಾದಿ ಸಂಗೀತೋತ್ಸವ ಕಾರ್ಯಕ್ರಮ

ಮೈಸೂರು, ಮಾ.16– ಅರಮನೆ ಮಂಡಳಿ ವತಿಯಿಂದ ಯುಗಾದಿ ಹಬ್ಬದ ಪ್ರಯುಕ್ತ ಮಾ.22 ರಿಂದ 24ರ ವರೆಗೆ 2023ರ ಯುಗಾದಿ ಸಂಗೀತೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, 6.30ಕ್ಕೆ ಕಾರ್ಯಕ್ರಮದ ಉದ್ಘಾಟನೆ ನಡೆಯಲಿದೆ.

ಮಾ.22 ರಂದು ಸಂಜೆ 5.30 ರಿಂದ 6 ಗಂಟೆವರೆಗೆ ಯದುಕುಮಾರ್ ಮತ್ತು ತಂಡದವರಿಂದ ಮಂಗಳವಾದ್ಯ ಮತ್ತು ಸ್ಯಾಕ್ಸ್ ಫೋನ್ ವಾದನ, ಸಂಜೆ 6 ರಿಂದ 6.30ರವರೆಗೆ ವೇದ ಬ್ರಹ್ಮ ಶ್ರೀ ಶ್ರೀಧರ್ ಶರ್ಮ ಹಾಗೂ ಅರಮನೆ ಪುರೋಹಿತರಿಂದ ಪಂಚಾಂಗ ಶ್ರವಣ ಹಾಗೂ ಸಂಜೆ 7.15 ರಿಂದ ರಾತ್ರಿ 9.30ರವರೆಗೆ ಖ್ಯಾತ ಹಿನ್ನೆಲೆ ಗಾಯಕರಾದ ರಘು ದೀಕ್ಷಿತ್ ಹಾಗೂ ತಂಡದವರಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಲಿದೆ. ಮಾ.23ರಂದು ಸಂಜೆ 6 ರಿಂದ 7 ರವರೆಗೆ ಕರ್ನಾಟಕ ಪೊಲೀಸ್ ಬ್ಯಾಂಡ್, ಸಂಜೆ 7ರಿಂದ 9.30ವರೆಗೆ ಗುರುಕಿರಣ್ ಅವರಿಂದ ನೈಟ್ಸ್ ಕಾರ್ಯಕ್ರಮ ನಡೆಯಲಿದೆ. ಮಾ.24 ರಂದು ಸಂಜೆ 6 ರಿಂದ 7 ಗಂಟೆವರೆಗೆ ಆಂಗ್ಲ ಪೊಲೀಸ್ ಬ್ಯಾಂಡ್ ಹಾಗೂ 7 ರಿಂದ 9.30 ರವರೆಗೆ ವಾಸು ವೈಭವ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ ಜರುಗಲಿದೆ. ಸದರಿ ಕಾರ್ಯಕ್ರಮಗಳ ನಿಮಿತ್ತ ಮಾ.22 ರಿಂದ 24ರ ವರೆಗೆ ಸಂಜೆ 7 ರಿಂದ ರಾತ್ರಿ 9.30ವರೆಗೆ ಅರಮನೆಯ ವಿದ್ಯುತ್ ದೀಪಾಲಂಕಾರ ಇರುತ್ತದೆ ಎಂದು ಜಿಲ್ಲಾಧಿಕಾರಿಗಳು ಹಾಗೂ ಅರಮನೆ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಕೆ.ವಿ.ರಾಜೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗ್ಯಾಸ್ ಪೈಪ್‌ಲೈನ್ ಕಟ್ಟಾಗಿ ಭೀಕರ ಸ್ಫೋಟ– ಮನೆಗಳು ಧ್ವಂಸ, ಮೂವರಿಗೆ ಗಂಭೀರ ಗಾಯ

ಬೆಂಗಳೂರು, ಮಾ.16– ಸಿಲಿಕಾನ್ ಸಿಟಿಯ ಎಚ್‌ಎಸ್‌ಆರ್ ಲೇಔಟ್‌ನ 7ನೇ ಸೆಕ್ಟರ್‌ನಲ್ಲಿ ಗ್ಯಾಸ್ ಪೈಪ್‌ಲೈನ್ ಕಟ್ಟಾಗಿ ಭೀಕರ ಸ್ಫೋಟ ಸಂಭವಿಸಿದ ಪರಿಣಾಮ ಮನೆಗಳು ಧ್ವಂಸಗೊಂಡು, ಮೂವರು ಗಂಭೀರ ಗಾಯಗೊಂಡ ಘಟನೆ ನಡೆದಿದೆ.

ಅಬ್ಬು(40), ಮುಬಾಷೀರ್, (40) ಹಾಗೂ ಜುಬೇರ್ (26) ಗಾಯಾಳುಗಳು. ಇಬ್ಬರು ಮಹಿಳೆಯರಿಗೆ ಶೇ.30 ರಷ್ಟು ಗಂಭೀರ ಗಾಯಗಳಾಗಿದ್ದು, ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಿಡಬ್ಲ್ಯೂಎಸ್‌ಎಸ್ಬಿ ಕಾಮಗಾರಿ ಮಾಡುವ ವೇಳೆ ಗ್ಯಾಸ್ ಪೈಪ್‌ಲೈನ್ ಕಟ್ ಆಗಿದೆ. ಪರಿಣಾಮ ಎರಡು ಮನೆಗಳು ಸಂಪೂರ್ಣ ಧ್ವಂಸಗೊಂಡಿವೆ. ಬೆಂಕಿ ಕಾಣಿಸಿಕೊಂಡ ಕೂಡಲೇ ಸಿಬ್ಬಂದಿ ವಾಲ್ ಬಂದ್ ಮಾಡಿದ್ದಾರೆ. ಬಳಿಕ ಸಾರ್ವಜನಿಕರು ಅಗ್ನಿಶಾಮಕ ಸಿಬ್ಬಂದಿಗೆ ಕರೆ ಮಾಡಿದರು. ಸ್ಥಳಕ್ಕೆ ದೌಡಾಯಿಸಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ. ಗೇಲ್ ಗ್ಯಾಸ್ ಅಧಿಕಾರಿಗಳಿಂದ ಬಿಡಬ್ಲ್ಯೂಎಸ್ಎಸ್ಬಿ ಅಧಿಕಾರಿಗಳು ಯಾವುದೇ ಅನುಮತಿ ಪಡೆದಿರಲಿಲ್ಲವಂತೆ. ಈ ಹಿನ್ನೆಲೆಯಲ್ಲಿ ಗುಂಡಿ ತೆಗೆಯುವ ವೇಳೆ ಗ್ಯಾಸ್ ಲೈನ್ ಕಟ್ ಆಗಿದೆ. ಎರಡು ಮನೆಗಳ ಶೌಚಾಲಯದ ಮೂಲಕ ಗ್ಯಾಸ್ ನುಗ್ಗಿದೆ. ಹೀಗಾಗಿ ಕಾಮಗಾರಿ ಮಾಡುವ ವೇಳೆ ಯಾವುದೇ ಮುಂಜಾಗ್ರತಾ ಕ್ರಮ ಕೈಗೊಂಡಿಲ್ಲ ಎಂದು ಆರೋಪ ಕೇಳಿಬಂದಿದೆ.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.16–2022–23ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ವೃತ್ತಿನಿರತ ಗ್ರಾಮೀಣ ಕುಶಲಕರ್ಮಿ, ಗುಡಿ ಕೈಗಾರಿಕೆಯಲ್ಲಿ ತೊಡಗಿರುವ ಅಭ್ಯರ್ಥಿಗಳು ತಮ್ಮ ಕಸುಬನ್ನು ಮುಂದುವರೆಸಿಕೊಂಡು ಹೋಗಲು ಇಲಾಖಾ ವತಿಯಿಂದ ಮರಗೆಲಸದ ಉಪಕರಣಗಳನ್ನು ಪಡೆಯಲು ಇಚ್ಛಿಸಿದಲ್ಲಿ, ಅನುಬಂಧದಲ್ಲಿರುವ ಮಾಹಿತಿಯಂತೆ ಸಂಬಂಧಪಟ್ಟ, ಎಲ್ಲಾ ದಾಖಲಾತಿಗಳನ್ನು, https://mysore.nic.in ಅಪ್ಲೋಡ್ ಮಾಡಿ ಆನ್‌ಲೈನ್ ಮೂಲಕ ಮಾ.16 ರಿಂದ ಮಾ.26 ರೊಳಗೆ ಅರ್ಜಿ ಸಲ್ಲಿಸಲು ಕೋರಿದೆ.

ಒಂದನೇ ಪುಟದಿಂದ

ಸರಗಳ್ಳನ ಬಂಧನ



ಸರಗಳ್ಳನನ್ನು ಸೆರೆಹಿಡಿದ ಇನ್ಸ್‌ಪೆಕ್ಟರ್ ಮೋಹನ್‌ಕುಮಾರ್ ನೇತೃತ್ವದ ಪೊಲೀಸ್ ತಂಡ.

ವಿಚಾರಿಸಿದಾಗ ಸ್ಕೂಟರನ ಮಾಲೀಕ, ತನ್ನ ಸ್ಕೂಟರ್ ಅನ್ನು ಕೆಲ ದಿನಗಳ ಮಟ್ಟಿಗೆ ಸ್ನೇಹಿತ ವಿಕಾಸ್ ಕೊಂಡೊಯ್ದಿದ್ದಾನೆ ಎಂದು ತಿಳಿಸಿ, ಆತನ ವಿಳಾಸ ಹಾಗೂ ಮೊಬೈಲ್ ನಂಬರ್ ಕೂಡ ಕೊಟ್ಟಿದ್ದಾನೆ. ಇಷ್ಟೆಲ್ಲಾ ಪ್ರಕ್ರಿಯೆಗಳನ್ನು ಕ್ಷಿಪ್ರ ರೀತಿ ಕೈಗೊಂಡ ಇನ್ಸ್‌ಪೆಕ್ಟರ್ ಮೋಹನ್‌ಕುಮಾರ್ ನೇತೃತ್ವದ ತಂಡ ವಿಜಯನಗರ 2ನೇ ಹಂತದಲ್ಲಿರುವ ವಿಕಾಸ್ ಮನೆಗೆ ಲಗ್ಗೆ ಇಟ್ಟಿದೆ. ಪೊಲೀಸರು ಅಲ್ಲಿಗೆ ತಲುಪಿದಾಗ ಮನೆಯಿಂದ ಹೊರ ಬರುತ್ತಿದ್ದ ಆತನನ್ನು ವಶಕ್ಕೆ ಪಡೆದು ಶೋಧನಾ ಕಾರ್ಯ ಕೈಗೊಂಡಾಗ ಆತನ ಜೇಬಿನಲ್ಲೇ ಮಾಂಗಲ್ಯವಿದ್ದ ಚಿನ್ನದ ಸರ ದೊರೆತಿದೆ.

ವಿಕಾಸ್‌ನನ್ನು ಬಂಧಿಸಿ, ಚಿನ್ನದ ಸರ, ಮನೆ ಮುಂದೆ ನಿಲ್ಲಿಸಿದ್ದ ಸ್ಕೂಟರ್ ವಶಪಡಿಸಿಕೊಂಡರು. ಇಂದು ಸಂಜೆ ವಿಕಾಸ್‌ನನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಗಿ ಆತನನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಘಟನೆ ನಡೆದ ಕೇವಲ 6 ಗಂಟೆ ಅಂತರದಲ್ಲಿ ಸರಗಳ್ಳನನ್ನು ಬಂಧಿಸಿದ ಇನ್ಸ್‌ಪೆಕ್ಟರ್ ಮೋಹನ್ ಕುಮಾರ್ ನೇತೃತ್ವದ ತಂಡದ ಕ್ಷಿಪ್ರ ಕಾರ್ಯಾಚರಣೆಯನ್ನು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಶ್ಲಾಘಿಸಿದ್ದಾರೆ. ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಜಾಹ್ನವಿ ಹಾಗೂ ಎನ್.ಆರ್. ಉಪ ವಿಭಾಗದ ಎಸಿಪಿ ಸಿ.ಕೆ.ಅಶ್ವತ್ಥನಾರಾಯಣ ಮಾರ್ಗದರ್ಶನದಲ್ಲಿ ಇನ್ಸ್‌ಪೆಕ್ಟರ್ ಎಂ.ಮೋಹನ್ ಕುಮಾರ್ ನೇತೃತ್ವದಲ್ಲಿ ಸಬ್ ಇನ್ಸ್‌ಪೆಕ್ಟರ್‌ಗಳಾದ ಕೆ.ಲೇಪಾಕ್ಷ, ಕೆ.ಕೆ.ಮೋಹನ್, ಸಿಬ್ಬಂದಿಗಳಾದ ಪ್ರಸನ್ನ, ಈರಣ್ಣ, ರವೀಂದ್ರ, ಪರಶುರಾಂ, ಮಹೇಶ್, ಸುರೇಶ್, ಕುಮಾರ್, ಉಮೇಶ್, ಸುನೀಲ್ ಕಾಂಬ್ಳೆ ಅವರು ಈ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.

ಕ್ರಿಯಾಶೀಲ ಅಧಿಕಾರಿ ಮೋಹನ್‌ಕುಮಾರ್

ಅಪರಾಧ ಪತ್ತೆ ಪ್ರಕರಣದಲ್ಲಿ ಇನ್ಸ್‌ಪೆಕ್ಟರ್ ಎಂ.ಮೋಹನ್‌ಕುಮಾರ್ ಅತ್ಯಂತ ಕ್ರಿಯಾಶೀಲ ಅಧಿಕಾರಿಯಾಗಿದ್ದು, ಯಾವುದೇ ಅಪರಾಧ ಕೃತ್ಯ ನಡೆದಾಗಲೂ ಸ್ಥಳ ಪರಿಶೀಲನೆ ವೇಳೆ ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ಸಾಕ್ಷ್ಯವನ್ನು ಕಲೆ ಹಾಕಿ, ಮುಂದಿನ ಕಾರ್ಯಾಚರಣೆಗಿಳಿಯುವಲ್ಲಿ ಎತ್ತಿದ ಕೈ. ಜೊತೆಗೆ ಆಧುನಿಕ ತಂತ್ರಜ್ಞಾನವನ್ನು ಅಪರಾಧ ಪತ್ತೆ ಕಾರ್ಯಕ್ಕೆ ಇವರು ಯಶಸ್ವಿಯಾಗಿ ಬಳಸಿಕೊಳ್ಳುತ್ತಾರೆ ಎಂಬ ಮಾತು ಪೊಲೀಸ್ ವಲಯದಲ್ಲಿ ಕೇಳಿಬರುತ್ತಿದೆ. 2022ರ ನವೆಂಬರ್ 4ರಂದು ಮಾನಸ ಗಂಗೋತ್ರಿ ಆವರಣದಲ್ಲಿ ನಡೆದಿದ್ದ ನಿವೃತ್ತ ಐಬಿ ಅಧಿಕಾರಿ ಆರ್.ಎಸ್. ಕುಲಕರ್ಣಿ ಅವರ ಹತ್ಯೆ ಪ್ರಕರಣವನ್ನು ಅತ್ಯಲ್ಪ ಅವಧಿಯಲ್ಲೇ ಇವರು ಪತ್ತೆ ಹಚ್ಚಿದ್ದರು. ಅಲ್ಲದೇ ಇವರು ವಿವಿ ಪುರಂ ಠಾಣೆ ಇನ್ಸ್‌ಪೆಕ್ಟರ್ ಆಗಿದ್ದಾಗ, ಜಯಲಕ್ಷ್ಮಿಪುರಂ ಠಾಣೆ ಪ್ರಭಾರವನ್ನು ಇವರಿಗೇ ವಹಿಸಲಾಗಿತ್ತು. ಆ ಪ್ರಕರಣದಲ್ಲೂ ಕೂಡ ಸಿಸಿ ಕ್ಯಾಮರಾ ದೃಶ್ಯಾವಳಿಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದರು.

ಸಾಲ ತೀರಿಸಲು ಸರ ಕಳವು!

ವೃದ್ಧೆಯ ಚಿನ್ನದ ಸರ ಅಪಹರಿಸಿ ಕೇವಲ 6 ಗಂಟೆ ಅವಧಿಯಲ್ಲೇ ಸೆರೆಯಾದ ವಿಕಾಸ್, ಹಣದ ಮುಗ್ಗಟ್ಟಿನಿಂದ ಬಳಲುತ್ತಿದ್ದು, ಇದೇ ಮೊದಲ ಬಾರಿಗೆ ಸರ ಅಪಹರಿಸಿ ಸಿಕ್ಕಿಬಿದ್ದಿದ್ದಾನೆ. ಮೂಲತಃ ಹಂಚ್ಯಾ ಸಾತಗಳ್ಳಿ ನಿವಾಸಿಯಾದ ಈತ ತಾನು ಪ್ರೀತಿಸಿದ ಯುವತಿಯನ್ನು ಕಳೆದ ಒಂದು ತಿಂಗಳ ಹಿಂದೆಯಷ್ಟೇ ಮದುವೆಯಾಗಿ ವಿಜಯನಗರ 2ನೇ ಹಂತದ ಪುಟ್ಟ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದ. ಪದವೀಧರನಾದರೂ ಸೂಕ್ತ ಉದ್ಯೋಗ ಸಿಗದ ಕಾರಣ ಫುಡ್ ಡೆಲಿವರಿ ಬಾಯ್ ಹಾಗೂ ಮೆಡಿಕಲ್ ಬಿಲ್ ಮಾಡುವ ಕೆಲಸದಿಂದ ಜೀವನ ಸಾಗಿಸುತ್ತಿದ್ದ. ಮದುವೆಗಾಗಿಯೂ ಸಾಲ ಮಾಡಿಕೊಂಡಿದ್ದ. ತನ್ನ ಕೆಲಸಕ್ಕಾಗಿ ಸ್ವಂತ ದ್ವಿಚಕ್ರ ವಾಹನವೂ ಕೂಡ ಇಲ್ಲದ ಈತ, ಸ್ನೇಹಿತನಿಂದ ಸ್ವಲ್ಪ ದಿನಗಳಿಗಾಗಿ ಎಂದು ಸ್ಕೂಟರ್ ಪಡೆದಿದ್ದ. ತನಗೆ ಬರುವ ಅಲ್ಪ ಪ್ರಮಾಣದ ಆದಾಯದಿಂದ ಸಾಲ ತೀರಿಸಲಾಗದೇ ಕಷ್ಟಪಡುತ್ತಿದ್ದ, ಸಾಲ ತೀರಿಸುವ ಸಲುವಾಗಿ ಸರ ಅಪಹರಣ ಮಾಡಿರುವುದಾಗಿ ವಿಚಾರಣೆ ವೇಳೆ ಪೊಲೀಸರಿಗೆ ತಿಳಿಸಿದ್ದಾನೆ.

ಬಿಜೆಪಿ ಅಭ್ಯರ್ಥಿಗಳ ಪಟ್ಟಿ ಪ್ರಕಟ

ಕುಳಿತು ಚರ್ಚಿಸಿದರೆ ಬಗೆಹರಿಸುತ್ತೇವೆ. ಅಮಿತ ಬಳಸುವ ಭಾಷೆ ಯಾವ ಕನ್ನಡಿಗರೂ ಒಪ್ಪುವುದಿಲ್ಲ ಅವರಲ್ಲಿ ಸಭ್ಯತೆಯೇ ದಿವಾಳಿಯಾಗಿದೆ ಎಂದು ಕಿಡಿಕಾರಿದರು. ಜನರ ಸಂಕಷ್ಟಕ್ಕೆ ಧಾವಿಸುವುದು ಸರ್ಕಾರದ ಜವಾಬ್ದಾರಿ ಲಕ್ಷಣ. ಆದರೆ ಬಿಜೆಪಿಯ ಡಬಲ್ ಇಂಜಿನ್ ಸರ್ಕಾರ ನಿರಂತರವಾಗಿ ಮಾಡಿಕೊಂಡು ಬಂದಿದೆ ಎಂದರು. ನಮ್ಮ ಯೋಜನೆಗಳು ಸಮಾಜದ ಕಟ್ಟಕಡೆ ಮನುಷ್ಯನಿಗೆ ದೀನ ದಲಿತರಿಗೆ, ಹೆಣ್ಣುಮಕ್ಕಳಿಗೆ, ಹಿಂದುಳಿದ ವರ್ಗದ ಮಕ್ಕಳಿಗೆ ತಲುಪಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಜನರಿಗೆ ಮನ್ನಣೆ ಸಿಗಬೇಕು ಆದ್ದರಿಂದ ಜನ ಮತ ನೀಡುತ್ತಾರೆಯೇ ಹೊರತು ವಿಸಿಟಿಂಗ್ ಕಾರ್ಡ್‌ಗೆ ಅಲ್ಲ ಎಂದರು.

ಮೈಸೂರಲ್ಲಿ ವಿಶ್ವ ಗ್ರಾಹಕರ ದಿನಾಚರಣೆ: ಗ್ರಾಹಕರು ಪರಿಹಾರಕ್ಕಾಗಿ

ಕೇವಲ ಬಿಳಿ ಹಾಳೆ ಮೇಲೆ ನಷ್ಟದ ವಿವರ ಸಲ್ಲಿಸಿದರೆ ಸಾಕು

- ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿ ಮಾಹಿತಿ
- ದೂರು ನೀಡಲು ನಿರ್ದಿಷ್ಟ ಅರ್ಜಿ ನಮೂನೆಯೇನಿಲ್ಲ

ಮೈಸೂರು,ಮಾ.16(ಪಿಎಂ)– ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗಕ್ಕೆ ಗ್ರಾಹಕರು ದೂರು ನೀಡಲು ನಿರ್ದಿಷ್ಟ ಅರ್ಜಿ ನಮೂನೆಯೇನೂ ಇಲ್ಲ. ಪೂರಕ ದಾಖಲೆಗಳೊಂದಿಗೆ ಕಾಗದದಲ್ಲಿ ತಮಗೆ ಆಗಿರುವ ನಷ್ಟದ ವಿವರ ಬರೆದು ಸಲ್ಲಿಸಿದರೆ ಸಾಕು ಎಂದು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿ ತಿಳಿಸಿದರು.

ಮೈಸೂರಿನ ಕುವೆಂಪುನಗರದ ಜೆಎಸ್‌ಎಸ್ ಕಾನೂನು ಕಾಲೇಜು ಆವರಣದಲ್ಲಿ ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ಕಾಲೇಜಿನ ಸಂಯುಕ್ತಾಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ 'ವಿಶ್ವ ಗ್ರಾಹಕರ ದಿನಾಚರಣೆ (ಮಾ.15) ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪೂರಕ ದಾಖಲೆಗಳೊಂದಿಗೆ ಸರಳವಾಗಿ ತಮಗೆ ಆಗಿರುವ ತೊಂದರೆ ಕುರಿತು ಕಾಗದದಲ್ಲಿ ಬರೆದು ಸಲ್ಲಿಸಿದರೆ ಆಯೋಗ ಇದನ್ನೇ ದೂರೆಂದು ಪರಿಗಣಿಸಲಿದೆ ಜೊತೆಗೆ ವಕೀಲರನ್ನು ನೇಮಿಸಿಕೊಳ್ಳಬೇಕೆಂದೂ ಇಲ್ಲ. ಜಿಲ್ಲಾ ಆಯೋಗಕ್ಕೆ 50 ಲಕ್ಷ ರೂ.ವರೆಗಿನ ಮೌಲ್ಯದ ವಸ್ತು ಮತ್ತು ಸೇವೆಗಳಿಗೆ ಸಂಬಂಧಿಸಿದಂತೆ ದೂರು ನೀಡಬಹುದು. ಅದೇ ರೀತಿಯಲ್ಲಿ ರಾಜ್ಯ ಆಯೋಗಕ್ಕೆ 2 ಕೋಟಿ ರೂ. ಮಿತಿ ಇದ್ದು, 2 ಕೋಟಿ ರೂ. ಮೊತ್ತದ ಅಧಿಕ ಮೌಲ್ಯವಿದ್ದರೆ ರಾಷ್ಟ್ರೀಯ ಆಯೋಗಕ್ಕೆ ದೂರು ಸಲ್ಲಿಸಬೇಕಾಗುತ್ತದೆ. ಇಲ್ಲಿ ಪರಿಹಾರ ಮೊತ್ತಕ್ಕೆ ಮಿತಿಯಿಲ್ಲ ಎಂದು ಹೇಳಿದರು.

ಜಿಲ್ಲಾ ಆಯೋಗದ ಆದೇಶ ಸಂಬಂಧ ರಾಜ್ಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು. ಅಂತೆಯೇ ರಾಜ್ಯ ಆಯೋಗದ ಆದೇಶ ಸಂಬಂಧ ರಾಷ್ಟ್ರೀಯ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಬಹುದು. ರಾಷ್ಟ್ರೀಯ ಆಯೋಗದ ಆದೇಶ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ವಸ್ತು ಖರೀದಿಸಿದಾಗ ಬಿಲ್ (ರಶೀದಿ) ಪಡೆಯಬೇಕು. ಕೆಲವರು ಜಿಎಸ್‌ಟಿ ತಪ್ಪಿಸಲು ಬಿಲ್ ತೆಗೆದುಕೊಳ್ಳುವುದಿಲ್ಲ. ಒಂದು ವೇಳೆ ವಸ್ತು ಹಾನಿಯಾದರೆ ರಶೀದಿ ಇಲ್ಲದೆ ಆಯೋಗಕ್ಕೆ ದೂರು ನೀಡಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಗ್ರಾಹಕರು ತಮ್ಮ ಹಕ್ಕು ಮತ್ತು ಜವಾಬ್ದಾರಿ ತಿಳಿದುಕೊಳ್ಳಬೇಕು. ವಸ್ತು ಖರೀದಿಸಿದಾಗ ಅದರಲ್ಲಿ ದೋಷವಿದ್ದರೆ ನಂತರ ಯಾವ ರೀತಿ ಪರಿಹಾರ ಪಡೆದುಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳಬೇಕು. ಆಯೋಗದಲ್ಲಿ ಶೀಘ್ರದಲ್ಲಿ ಪ್ರಕರಣದ ವಿಲೇವಾರಿ ಆಗಲಿದೆ. ಜೊತೆಗೆ ಶುಲ್ಕವೂ ಕಡಿಮೆ. ಆನ್‌ಲೈನ್ ಮೂಲಕವೇ ದೂರು ದಾಖಲಿಸಲೂ ಅವಕಾಶವಿದೆ. ದೋಷಪೂರಿತ ವಸ್ತುವಿಗೆ ಪರಿಹಾರ ದೊರೆಯುವ ಜೊತೆಗೆ ಅದರಿಂದ ಗ್ರಾಹಕ ಅನುಭವಿಸಿದ ತೊಂದರೆಗೂ ಪರಿಹಾರ ದೊರೆಯುತ್ತದೆ. ಖರೀದಿಸಿದ ವಸ್ತು ದೋಷಪೂರಿತ ಎಂದು ಕಂಡುಬಂದ 2 ವರ್ಷಗಳ ಒಳಗೆ ಆಯೋಗದಲ್ಲಿ ಪ್ರಕರಣ ದಾಖಲಿಸಬಹುದು ಎಂದು ಹೇಳಿದರು.



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಶ್ವ ಗ್ರಾಹಕರ ದಿನಾಚರಣೆಯಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯಿಂದ ತೂಕ ಮತ್ತು ಲೀಟರ್‌ಗಳಲ್ಲಿ ನಡೆಯುವ ಮೋಸದ ಕುರಿತು ಪ್ರಾತ್ಯಕ್ಷಿಕೆ ನೀಡಲಾಯಿತು. ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿ ಸೇರಿದಂತೆ ಇತರ ಗಣ್ಯರು ಈ ವೇಳೆ ಮಾಹಿತಿ ಪಡೆದರು.

ವ್ಯಕ್ತಿ ಹುಟ್ಟುವ ಮುಂಚೆಯೇ ಗ್ರಾಹಕ!

ಮೈಸೂರು,ಮಾ.16(ಪಿಎಂ)– ಗ್ರಾಹಕ ಎಂದರೆ ಕೇವಲ ಹುಟ್ಟಿನ ನಂತರ ಮಾತ್ರವಲ್ಲ, ಹುಟ್ಟುವ ಮುಂಚೆಯೇ ಗ್ರಾಹಕ! ಹೌದು, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಎ.ಕೆ.ನವೀನ್‌ಕುಮಾರಿಯವರ ಈ ಹೇಳಿಕೆಯು ಗ್ರಾಹಕರ ಮಹತ್ವ ಅನಾವರಣಗೊಳಿಸಿತು.

ನಾವು ತಾಯಿಯ ಗರ್ಭದಲ್ಲಿ ಇರುವಾಗಲೇ ಗ್ರಾಹಕರಾಗುತ್ತೇವೆ. ತಾಯಿಯೊಬ್ಬರು ಗರ್ಭಾವಸ್ಥೆ ಸಂದರ್ಭದಲ್ಲಿ ಮಗುವಿನ ಬೆಳವಣಿಗೆ ಸಂಬಂಧ ಪಡೆಯುವ ವೈದ್ಯಕೀಯ ಚಿಕಿತ್ಸೆ ಹಂತದಲ್ಲಿ ಏನಾದರೂ ಹಾನಿಯಾದರೆ ಈ ಸಂಬಂಧ ಪರಿಹಾರ ಪಡೆಯಲು ಅಂತಹ ತಾಯಿ ಅರ್ಹತೆ ಹೊಂದಿರುತ್ತಾರೆ ಎಂದು ತಿಳಿಸಿದರು.

ತಾಯಿ ಪರಿಹಾರ ಪಡೆದುಕೊಳ್ಳಲು ವೈದ್ಯಕೀಯ ನಿರ್ಲಕ್ಷ್ಯ ಅಡಿಯಲ್ಲಿ ಅರ್ಹರು. ಗರ್ಭಿಣಿಯರು ಆಗಾಗ್ಗೆ ವೈದ್ಯರಲ್ಲಿ ಪರೀಕ್ಷೆ ಮಾಡಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ವೈದ್ಯರು ಮಗುವಿನ ಬೆಳವಣಿಗೆಯು ಸರಿ ಇದೆಯೇ ಎಂಬುದನ್ನು ತಿಳಿಸಬೇಕು. ಆದರೆ ಮಗುವಿನ ಲಿಂಗದ ಬಗ್ಗೆ ಹೇಳುವಂತಿಲ್ಲ. ಉಳಿದಂತೆ ಮಗುವಿನ ಆರೋಗ್ಯ ಹಾಗೂ ದೈಹಿಕ ಬೆಳವಣಿಗೆ ಬಗ್ಗೆ ಮಾಹಿತಿ ಒದಗಿಸಬೇಕು. ಒಂದು ವೇಳೆ ಮಾಹಿತಿ ಒದಗಿಸದೇ ಇದ್ದರೆ ಜನನದ ಬಳಿಕ ಮಗುವಿನಲ್ಲಿ ಹೆಚ್ಚಿನ ನ್ಯೂನತೆ ಕಂಡು ಬಂದರೆ ವೈದ್ಯಕೀಯ ನಿರ್ಲಕ್ಷ್ಯದಡಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದರು.

ಮೈಸೂರಲ್ಲಿ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ಸ್ಥಾಪನೆ

ಆಹಾರ ಇಲಾಖೆ ವತಿಯಿಂದ ಗ್ರಾಹಕರ ಜಾಗೃತಿಗೆ ಹೆಚ್ಚಿನ ಒತ್ತು ನೀಡಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಇದಕ್ಕಾಗಿ ಜಿಲ್ಲಾಡಳಿತ ವಾರ್ಷಿಕ ಅನುದಾನ ಕಲ್ಪಿಸುತ್ತಿದೆ. ಮೈಸೂರಿನಲ್ಲಿ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ಸ್ಥಾಪನೆ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈಗಾಗಲೇ ಕೇಂದ್ರ ಇತ್ತಾದರೂ ಅದರ ಅವಧಿ ಮುಗಿದ ಕಾರಣ ಮುಂದಿನ ಆರ್ಥಿಕ ವರ್ಷದಲ್ಲಿ ಪ್ರಾರಂಭಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

-ಕುಮುದಾ ಶರತ್.
ಜಂಟಿ ನಿರ್ದೇಶಕರು, ಆಹಾರ ಇಲಾಖೆ

ಕಲಬೆರಕೆ ಆಹಾರ ಮಾರಾಟದ ವಿರುದ್ಧ ಜಿಲ್ಲಾಧಿಕಾರಿಗಳಿಗೆ ದೂರು ನೀಡಲು ಅವಕಾಶವಿದ್ದು, ಅವರು ಕ್ರಮ ಕೈಗೊಳ್ಳುವ ಅಧಿಕಾರ ಹೊಂದಿದ್ದಾರೆ. ದಂಡ ವಿಧಿಸಲೂ ಅವರಿಗೆ ಅಧಿಕಾರ ಇರುತ್ತದೆ. 1890ರಲ್ಲಿ ದಕ್ಷಿಣ ಆಫ್ರಿಕಾದಲ್ಲಿದ್ದ ಮಹಾತ್ಮ ಗಾಂಧಿ ಅಂದೇ ಗ್ರಾಹಕರ ಹಕ್ಕ ಬಾಧ್ಯತೆ ಬಗ್ಗೆ ಮಾತನಾಡಿದ್ದಾರೆ. 'ಗ್ರಾಹಕ ಎಂದರೆ ಅನಪೇಕ್ಷಿತ ವ್ಯಕ್ತಿ ಅಲ್ಲ. ಆತ ನಮ್ಮಲ್ಲಿಗೆ (ವ್ಯಾಪಾರಸ್ಥರು) ಬರುವ ಗೌರವಾನ್ವಿತ ವ್ಯಕ್ತಿ. ಆತನ ಸೇವೆಗೆ ನಮಗೆ ಅವಕಾಶ ಕಲ್ಪಿತವಾಗುತ್ತದೆ' ಎಂದು ಗಾಂಧಿ ಗ್ರಾಹಕರ ಮಹತ್ವವನ್ನು ಅಂದೇ ಉಲ್ಲೇಖಿಸಿದ್ದಾರೆ ಎಂದರು.

ಕಾಲೇಜು ಆವರಣದಲ್ಲಿ ಕಾನೂನು ಮಾಪನಶಾಸ್ತ್ರ ಇಲಾಖೆಯ ತಜ್ಞರ ತಂಡವು ತೂಕ, ಲೀಟರ್‌ನಲ್ಲಿ ಆಗುವ ಮೋಸ ಕುರಿತು ಪ್ರಾತ್ಯಕ್ಷಿಕೆ ಮೂಲಕ ಅರಿವು ಮೂಡಿಸಿತು. ಅಂತೆಯೇ ವಿವಿಧ ತಜ್ಞರ ತಂಡಗಳು ವಿವಿಧ ಉತ್ಪನ್ನಗಳ ಮಾರಾಟದಲ್ಲಿ ನಡೆಯುವ ವಂಚನೆ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಜಾಗೃತಿ ಮೂಡಿಸಿದವು. ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದೇವರಾಜ ಭೂತೆ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯ ಮಾರುತಿ ಹೆಚ್.ವಡ್ಡರ್, ಜೆಎಸ್‌ಎಸ್ ಕಾನೂನು ಕಾಲೇಜು ಮುಖ್ಯ ಕಾರ್ಯನಿರ್ವಾಹಕ ಪ್ರೊ.ಕೆ.ಎಸ್.ಸುರೇಶ್, ಪ್ರಾಂಶುಪಾಲ ಡಾ.ಎಸ್.ನಟರಾಜು, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್ ಮತ್ತಿತರರು ಹಾಜರಿದ್ದರು.

ಇಂದು ಮೈಸೂರು ಉತ್ತರ ರೋಟರಿ ಗವರ್ನರ್ ಭೇಟಿ

ವಿವಿಧ ಸೇವಾ ಕಾರ್ಯಕ್ರಮ ಆಯೋಜನೆ



ಮೈಸೂರು, ಮಾ.16(ಜಿಎ)–ರೋಟರಿ ಕ್ಲಬ್ ಆಫ್ ಮೈಸೂರು ಉತ್ತರದ ಜಿಲ್ಲಾ ಗವರ್ನರ್ ಪ್ರಕಾಶ್ ಕಾರಂತ್ ಅವರು ಶುಕ್ರವಾರ(ಮಾ.17)ದಂದು ಮೈಸೂರು ಜಿಲ್ಲೆಗೆ ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಕ್ಲಬ್ ವತಿಯಿಂದ ವಿವಿಧ ಸೇವಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಮೈಸೂರು ಉತ್ತರದ ಅಧ್ಯಕ್ಷ ಎಸ್.ಎಚ್.ಜಗದೀಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲಾ ಗವರ್ನರ್ ಜಿಲ್ಲಾ ಭೇಟಿ ಹಿನ್ನೆಲೆಯಲ್ಲಿ ಜಲ ಸಿರಿ ಮತ್ತು ಆರೋಗ್ಯ ಸಿರಿ ಯೋಜನೆಯಡಿ ಮೈಸೂರಿನ ಆಲನಹಳ್ಳಿಯಲ್ಲಿರುವ ಅಕ್ಕಮಹಾದೇವಿ ವಿದ್ಯಾರ್ಥಿ ನಿಲಯಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ನಜರ್‌ಬಾದ್‌ನ ಡಯಟ್ ಕಾಲೇಜಿನ ಬೋರ್‌ವೆಲ್ ಮೋಟಾರ್ ರೂಂ, ಹೆಚ್.ಡಿ.ಕೋಟೆಯ ನೂರಲಕುಪ್ಪೆ ಗ್ರಾಮದ ರೈತರಿಗೆ ಸೋಲಾರ್ ಲೈಟ್ ಟ್ರ್ಯಾಪ್ ನೀಡಲಿದ್ದೇವೆ.


ನಂತರ ಕೆಆರ್‌ಎಸ್‌ನ ವ್ಯಾಪ್ತಿಯಲ್ಲಿರುವ ಕಲ್ಲೂರು, ನಾಗನಹಳ್ಳಿ, ಆನಂದೂರು ಹಾಗೂ ಚಿಕ್ಕನಹಳ್ಳಿ ರೈತರಿಗೆ ಔಷಧಿ, ಪಂಪುಗಳನ್ನು ವಿತರಣೆ ಮಾಡಲಾಗುತ್ತದೆ. ಹೈನುಗಾರಿಕೆಗೆ ಒತ್ತು ನೀಡುವ ಉದ್ದೇಶದಿಂದ ಎಚ್.ಡಿ.ಕೋಟೆ ಗ್ರಾಮದ ಇಬ್ಬರು ಮಹಿಳೆಯರಿಗೆ ಎರಡು ಹಸುಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ನಂತರ ಕದಂಬರಂಗ ವೇದಿಕೆಯ ರಾಜಶೇಖರ್ ಕದಂಬ ಮಾತನಾಡಿ, ರೋಟರಿ ಮೈಸೂರು ಉತ್ತರ ಮತ್ತು ಕದಂಬರಂಗ ವೇದಿಕೆಯ ಸಹಯೋಗದಲ್ಲಿ ಮಾ.19ರಂದು ಬೆಳಗ್ಗೆ 10.30ಕ್ಕೆ ನಗರದ ಜೆಎಲ್‌ಬಿ ರಸ್ತೆಯ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್‌ನಲ್ಲಿ 'ರೋಟರಿ ಕದಂಬ ರಂಗ ಪ್ರಶಸ್ತಿ' ಯನ್ನು ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಲೇಖಕರು, ನಿರ್ದೇಶಕರಾದ ಪ್ರೊ.ಸಿ.ಎ.ಶ್ರೀಧರ ಮೂರ್ತಿ, ನಟ ಹಾಗೂ ನಾಟಕಕಾರ ಡಿ.ತಿಪ್ಪಣ್ಣ ಹಾಗೂ ಹಿರಿಯ ನಟಿ ನಾಗರತ್ನ ಅವರನ್ನು ಜಾನಪದ ತಜ್ಞ ಹಾಗೂ ಪ್ರಗತಿಪರ ಚಿಂತಕ ಡಾ.ಕಾಳೇಗೌಡ ನಾಗವಾರ ಸನ್ಮಾನಿಸಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರೋಟರಿ ಮೈಸೂರು ಉತ್ತರ ಕ್ಲಬ್‌ನ ಕಾರ್ಯದರ್ಶಿ ಕೆ.ಲೋಕನಾಥ್ ಉಪಸ್ಥಿತರಿದ್ದರು.

ವಿಧಾನಸಭಾ ಚುನಾವಣೆ ಹಿನ್ನೆಲೆ

ಮೈಸೂರಲ್ಲಿ ಪಾಲಿಕೆಯಿಂದ ಅನಧಿಕೃತ ಫ್ಲೆಕ್ಸ್ ತೆರವು



ಮೈಸೂರು, ಮಾ. 16 (ಆರ್‌ಕೆ)– ವಿಧಾನಸಭೆ ಚುನಾವಣೆ ದಿನಾಂಕ ನಿಗದಿಗೆ ದಿನಗಣನೆ ಆರಂಭವಾಗಿರುವುದರಿಂದ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಅಭಯ ತಂಡದ ಸಿಬ್ಬಂದಿಗಳ ಮೂಲಕ ಮೈಸೂರಿನಲ್ಲಿರುವ ಅನಧಿಕೃತ ಫ್ಲೆಕ್ಸ್, ಬ್ಯಾನರ್ ಹಾಗೂ ಪೋಸ್ಟರ್‌ಗಳನ್ನು ತೆರವುಗೊಳಿಸುವ ಕಾರ್ಯ ಆರಂಭಿಸಿದ್ದಾರೆ.

ಮೈಸೂರಿನ ಮಾನಸಗಂಗೋತ್ರಿಯ ಸೆನೆಟ್ ಭವನದಲ್ಲಿ ಬುಧವಾರ ನಡೆದ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಅವರ ನಿರ್ದೇಶನದಂತೆ ನಿನ್ನೆ ರಾತ್ರಿಯಿಂದಲೇ ಕಾರ್ಯಾಚರಣೆ ಆರಂಭಿಸಿರುವ ಪಾಲಿಕೆಯ 3 ಅಭಯ ತಂಡದ ಸಿಬ್ಬಂದಿ, ಸರ್ಕಲ್, ರಸ್ತೆ, ಜಂಕ್ಷನ್, ವಾಣಿಜ್ಯ ಕೇಂದ್ರ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಎಲ್ಲಾ ಬಗೆಯ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಪೋಸ್ಟರ್‌ಗಳನ್ನು ತೆರವುಗೊಳಿಸುತ್ತಿದ್ದಾರೆ.

ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ್ ರೆಡ್ಡಿ ಅವರ ಸೂಚನೆ ಮೇರೆಗೆ ಉಪ ಆಯುಕ್ತ (ಕಂದಾಯ)ರ ನೇತೃತ್ವದಲ್ಲಿ ತೆರವು ಕಾರ್ಯಾಚರಣೆ ನಡೆಸುತ್ತಿರುವ ಅಭಯ ತಂಡದ ಮಂಜು, ಶಿವು ಹಾಗೂ ರಮೇಶ ಹಾಗೂ ಸಿಬ್ಬಂದಿಗಳು ಇಂದು ಸಂಜೆವರೆಗೂ ಎಲ್ಲಾ ಬಗೆಯ ಫ್ಲೆಕ್ಸ್, ಬ್ಯಾನರ್‌ಗಳನ್ನು ತೆರವುಗೊಳಿಸಿದರು.

ಸರ್ಕಾರಿ ಕಟ್ಟಡಗಳಲ್ಲದೆ ಖಾಸಗಿ ಕಟ್ಟಡಗಳ ಗೋಡೆ ಮೇಲೆ ಬರೆಯಲಾಗಿದ್ದ ರಾಜಕೀಯ ಪಕ್ಷಗಳ ಪ್ರಚಾರ, ಘೋಷಣೆಗಳಿಗೂ ಬಣ್ಣ ಬಳಿದು ಮತ್ತೆ ಮಾಡಲಾಗುತ್ತಿದೆ. ಚುನಾವಣೆ ಅಧಿಸೂಚನೆ ಹೊರಬೀಳುವ ಮೊದಲೇ ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಂಪೂರ್ಣವಾಗಿ ಅನಧಿಕೃತ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್, ಪೇಯಿಂಟಿಂಗ್ ಅನ್ನು ತೆರವುಗೊಳಿಸಲಾಗುವುದು ಎಂದು ಆಯುಕ್ತ ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದರು. ಎಲ್ಲಿಯಾದರೂ ಅಂತಹ ಹೋರ್ಡಿಂಗ್ಸ್, ಬ್ಯಾನರ್‌ಗಳು ಅಥವಾ ಜಾಹೀರಾತು ಫಲಕಗಳು ಕಂಡು ಬಂದಲ್ಲಿ ಸಾರ್ವಜನಿಕರು ಪಾಲಿಕೆ ಕಚೇರಿಗೆ ಮಾಹಿತಿ ನೀಡಿದಲ್ಲಿ ತಕ್ಷಣ ತೆರವುಗೊಳಿಸಲಾಗುವುದು ಎಂದು ಅವರು ತಿಳಿಸಿದರು.

ಮಾ.20, ಡಿಸಿ ಕಚೇರಿ ಮುಂದೆ 'ನಮ್ಮ ಭೂಮಿ ನಮ್ಮ ಹಕ್ಕು' ಪ್ರತಿಭಟನೆ



ಮೈಸೂರು, ಮಾ.16(ಜಿಎ)– ಆದಿವಾಸಿಗಳ ಅರಣ್ಯ ಹಕ್ಕು ಕಾಯ್ದೆ ಜಾರಿ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ದಲಿತ ಚಳುವಳಿ ನವ ನಿರ್ಮಾಣ ವೇದಿಕೆ ವತಿಯಿಂದ ಮಾ.20ರಂದು ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ಮಾಡಲಿದ್ದೇವೆಂದು ವೇದಿಕೆಯ ಸಂಸ್ಥಾಪಕ ಹರಿಹರಾನಂದಸ್ವಾಮಿ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಮ್ಮ ಭೂಮಿ ನಮ್ಮ ಹಕ್ಕು' ಎಂಬ ಉದ್ದೇಶದಿಂದ ಪ್ರತಿಭಟನೆ ಮಾಡಲು ನಿರ್ಧರಿಸಿದ್ದು, ಪ್ರಮುಖವಾಗಿ ಕಳೆದ 60–70 ವರ್ಷಗಳಿಂದ ಕಾಡಂಚಿನ ಆದಿವಾಸಿಗಳು ಮತ್ತು ಗ್ರಾಮಾಂತರ ಪ್ರದೇಶಗಳ ಕುಟುಂಬಗಳು ಸಾಗುವಳಿ ಮಾಡುತ್ತಿರುವ ಭೂಮಿಗೆ ಕಂದಾಯ ಇಲಾಖೆ ದಾಖಲೆಗಳನ್ನು ಒಗಿಸಬೇಕಿದೆ. ಹಾಗೇ ಆದಿವಾಸಿಗಳ ಅರಣ್ಯ ಹಕ್ಕು ಕಾಯ್ದೆ 2006ಅನ್ನು ಯಥಾವತ್ತಾಗಿ ಜಾರಿಗೊಳಿಸಬೇಕಿದೆ.

219 ಹಾಡಿಗಳು ಹಾಗೂ 164 ಜೇನು ಕುರುಬರಿಗೆ ಬೀಡು ಬಿಟ್ಟಿರುವ ಜಾಗದ ಮೇಲಿನ ಹಕ್ಕು ಪತ್ರಗಳನ್ನು ನೀಡಬೇಕು. ಜೊತೆಗೆ ಲಕ್ಷ್ಮಣ ತೀರ್ಥ ನದಿಗೆ ಕಲುಷಿತ ನೀರು ಸೇರುತ್ತಿದ್ದು, ಅದನ್ನು ತಡೆಯುವ ಮೂಲಕ ಪರಿಸರ ಮಾಲಿನ್ಯದಿಂದ ನದಿಯನ್ನು ರಕ್ಷಿಸಬೇಕಿದೆ ಈ ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಪ್ರತಿಭಟನೆ ಮಾಡಲಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆಯ ಡಾ.ಶ್ರೀಕಾಂತ್, ಬಂಗವಾದಿ ನಾರಾಯಣಪ್ಪ, ಹೊರಳವಾಡಿ ನಂಜುಂಡಸ್ವಾಮಿ, ತಳೂರು ಪ್ರಸನ್ನ ಕುಮಾರ್ ಹಾಗೂ ಪಿ.ಕೆ. ರಾಮು ಇದ್ದರು.

ಏ.1 ರಿಂದ ಬೇಸಿಗೆ ಮೇಳ ಆರಂಭ

ಮೈಸೂರು,ಮಾ.16– ಏಪ್ರಿಲ್ 1 ರಿಂದ ಬೇಸಿಗೆ ಮೇಳವನ್ನು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಬಾಡಿಗೆ ಆಧಾರದ ಮೇರೆಗೆ ನಡೆಸಲು ಉದ್ದೇಶಿಸಲಾಗಿದ್ದು, ಬೇಸಿಗೆ ಮೇಳ ಆಯೋಜಿಸಲು ಆಸಕ್ತಿ ಉಳ್ಳವರು ಪ್ರಾಧಿಕಾರದ ಕಛೇರಿಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ವಸ್ತುಪ್ರದರ್ಶನ ಪಾಧಿಕಾರ ಕಛೇರಿಯ ದೂ.ಸಂ:0821–2444265 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಉರಿಗೌಡ, ನಂಜೇಗೌಡ' ಸೃಷ್ಟಿಯಿಂದ ಒಕ್ಕಲಿಗ ಸಮುದಾಯದ ತೇಜೋವಧೆ

ಒಕ್ಕಲಿಗರ ಸಂಘಟನೆಗಳ ಒಕ್ಕೂಟ ಖಂಡನೆ



ಮೈಸೂರು, ಮಾ.16(ಜಿಎ)–ಉರಿಗೌಡ, ನಂಜೇಗೌಡ ಎಂಬ ಕಟ್ಟು ಕಥೆಯ ಮೂಲಕ ಒಕ್ಕಲಿಗರ ಸಮುದಾಯಕ್ಕೆ ಅಗೌರವ ತರಬೇಡಿ. ದಾಖಲೆ ಇಟ್ಟುಕೊಂಡು ಮಾತನಾಡಿ ಎಂದು ಸಚಿವ ಡಾ.ಅಶ್ವಥ್ ನಾರಾಯಣ್ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿಗೆ ಮೈಸೂರು ಒಕ್ಕಲಿಗರ ಸಂಘಟನೆಗಳ ಒಕ್ಕೂಟ ಎಚ್ಚರಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್‌ನ ಅಧ್ಯಕ್ಷ ಬೀಡನಹಳ್ಳಿ ಸತೀಶ್ ಗೌಡ ಮಾತನಾಡಿ, 2014ರ ಸಿದ್ದರಾಮಯ್ಯ ಸರ್ಕಾರ ಟಿಪ್ಪು ಜಯಂತಿ ಆರಂಭಿಸಿತು ಎಂಬ ಕಾರಣಕ್ಕೆ ಟಿಪ್ಪು ಅನ್ನು ಕೊಂದಿದ್ದು, ಒಕ್ಕಲಿಗ ಸಮುದಾಯದ ಉರಿಗೌಡ, ನಂಜೇಗೌಡ ಎಂದು ಸೃಷ್ಟಿಸಿ, ಬಿಜೆಪಿ ಮತ್ತು ರಾಜ್ಯ ಆರ್‌ಎಸ್‌ಎಸ್ ಪ್ರಚಾರ ಮಾಡುತ್ತಿದೆ. ಉರಿಗೌಡ, ನಂಜೇಗೌಡ ಎಂದು ಇವರು ಬಳಸುತ್ತಿರುವ ಚಿತ್ರಗಳು 18ನೇ ಶತಮಾನದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಿದ ತಮಿಳುನಾಡಿನ ಮುರುದ್ ಪಾಂಡ್ಯರ್ ಸಹೋದರರ ಚಿತ್ರಗಳು ಎಂದರು.

ಉರಿಗೌಡ, ನಂಜೇಗೌಡ ಬಗ್ಗೆ ಮೈಸೂರು ಸಂಸ್ಥಾನ ಅಥವಾ ಬ್ರಿಟಿಷರ ಗೆಜೆಟೇರಿಯರ್‌ನಲ್ಲಿ ಯಾವುದೇ ದಾಖಲೆ ಇಲ್ಲ. ರಾಜಕೀಯಕ್ಕಾಗಿ ಬಿಜೆಪಿಯವರು ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ಈ ವಿಷಯ ಮಾತನಾಡಿದ್ದರೆ, ಅದಕ್ಕೆ ಅಷ್ಟು ಪ್ರಾಮುಖ್ಯತೆ ಕೊಡಬೇಕಾಗಿರಲಿಲ್ಲ. ಆದರೆ, ರಾಜ್ಯದ ಉಪಮುಖ್ಯಮಂತ್ರಿಯಾಗಿದ್ದ ಡಾ.ಅಶ್ವಥ್ ನಾರಾಯಣ ಮತ್ತು ಸಿಟಿ ರವಿ ಅವರು ಬಾಲಗಂಗಾಧರನಾಥ ಸ್ವಾಮೀಜಿಯವರ ದ್ವಾರವನ್ನು ಮುಚ್ಚಿ ಮೋದಿ ಅವರನ್ನು ಮೆಚ್ಚಿಸಲು ಉರಿಗೌಡ, ನಂಜೇಗೌಡ ದ್ವಾರ ನಿರ್ಮಿಸುತ್ತಾರೆ ಎಂದರೆ, ಅವರ ಹೀನ ಮನಸ್ಥಿತಿ ಎಂತಹದ್ದು, ಎಂಬುದು ತಿಳಿಯುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು.

ಈ ಹಿಂದೆ ಹೈದರಾಲಿ ವಿಚಾರವನ್ನು ಇಟ್ಟುಕೊಂಡು ಚಿತ್ರದುರ್ಗ ಮತ್ತು ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿಯಲ್ಲಿಯೂ ವಿವಾದ ಮಾಡಿ ಆಯಿತು. ಈಗ ಉರಿಗೌಡ, ನಂಜೇಗೌಡ ಹೆಸರು ಮುಂದಿಟ್ಟುಕೊಂಡು ಮೈಸೂರು ಭಾಗದಲ್ಲಿ ವಿವಾದ ಸೃಷ್ಟಿ ಮಾಡಿ ಅಮಾಯಕರನ್ನು ಬಲಿಕೊಡಲು ಮುಂದಾಗಿದ್ದೀರಾ. ತಮ್ಮಲ್ಲಿ ನೈತಿಕತೆ ಇದ್ದರೆ, ದಾಖಲೆಗಳನ್ನು ಇಟ್ಟುಕೊಂಡು ಪ್ರಚಾರ ಮಾಡಿ. ಆಧಾರವಿಲ್ಲದೆ ಒಂದು ಸಮುದಾಯದ ಹೆಸರು ಬಳಸಿಕೊಳ್ಳುವುದನ್ನು ಒಕ್ಕಲಿಗರ ಸಂಘಟನೆಗಳ ಒಕ್ಕೂಟವು ಖಂಡಿಸುತ್ತದೆ.

ಈಗಾಗಲೇ ರಾಜ್ಯ ಸಂಘವು ಸಮುದಾಯದ ವಿರುದ್ಧ ಮಾತನಾಡುವವರಿಗೆ ಎಚ್ಚರಿಕೆಯನ್ನು ನೀಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಇತಿಹಾಸ ತಜ್ಞರೊಂದಿಗೆ ವಿಶೇಷ ಚರ್ಚೆಯನ್ನು ಏರ್ಪಡಿಸಲು ಚಿಂತನೆ ನಡೆಸಿದ್ದೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಸಿ.ಜಿ. ಗಂಗಾಧರ್, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ. ಮರಿಸ್ವಾಮಿ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶುಕ್ರವಾರ 17 ಮಾರ್ಚ್ 2023

ಚುನಾವಣೆ ವೇಳೆ ಅಭಿವೃದ್ಧಿ ನೋಡಿ ಮತ ನೀಡಿ

ಶಾಸಕ ಸಾ.ರಾ.ಮಹೇಶ್ ಮನವಿ



ಕೆ.ಆರ್.ನಗರ, ಮಾ.16– ಚುನಾವಣೆ ವೇಳೆ ಜಾತಿ ನೋಡಿ ಮತ ನೀಡಬೇಡಿ. ಅಭಿವೃದ್ಧಿ ನೋಡಿ ಮತ ನೀಡುವಂತೆ ಶಾಸಕ ಸಾ.ರಾ.ಮಹೇಶ್ ಮನವಿ ಮಾಡಿದರು.

ಪಟ್ಟಣದ ಕೆಎಸ್‌ಆರ್‌ಟಿಸಿ ಬಸ್ ಡಿಪೋ ಎದುರಿನ ದೇವಾಲಯದ ಆವರಣದಲ್ಲಿ ಸಾರಿಗೆ ನೌಕರರಿಗೆ ಯುಗಾದಿ ಹಬ್ಬದ ಶುಭಾಶಯ ಕೋರಿ, ಉಡುಗೊರೆ ನೀಡಿ ಮಾತನಾಡಿದ ಅವರು, ಚಾಲಕರು ಬಸ್ ಚಾಲನೆ ಮಾಡುವಾಗ ಎಚ್ಚರಿಕೆ ವಹಿಸಬೇಕು. ನಿರ್ವಾಹಕರು ವಿದ್ಯಾರ್ಥಿಗಳಿಗೆ ಗೌರವದಿಂದ ಬಸ್ಸಿನಲ್ಲಿ ಸಂಚರಿಸಲು ಅವಕಾಶ ಮಾಡಿಕೊಡಿ ಎಂದರು.

ಪ್ರಸ್ತುತ ರಾಜಕೀಯ ವ್ಯವಸ್ಥೆ ಹದಗೆಟ್ಟಿದ್ದು, ಚುನಾವಣೆಯಲ್ಲಿ ಸ್ಪರ್ಧಿಸಿದ ವ್ಯಕ್ತಿ ಹಿನ್ನೆಲೆ, ತಾಲೂಕಿಗೆ ನೀಡಿರುವ ಕೊಡುಗೆ ನೋಡದೆ ನಮ್ಮ ಜಾತಿ ಎನ್ನುವ ಕಾರಣಕ್ಕಾಗಿ ಮತ ನೀಡುವ ಬದಲು ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಪ್ರತಿದಿನ ಮತದಾರರ ಕೈಗೆ ಸಿಗುವ ಕಷ್ಟ–ಸುಖಗಳಿಗೆ ಸ್ಪಂದಿಸುವ ವ್ಯಕ್ತಿಗೆ ಮತ ನೀಡಿ. ಆಗ ಮಾತ್ರ ತಾಲೂಕಿನ ಅಭಿವೃದ್ಧಿ ಮಾತ್ರ ಸಾಧ್ಯ ಎಂದರು.

4 ವರ್ಷ ಕಾಣೆಯಾಗಿದ್ದ ವ್ಯಕ್ತಿ ಚುನಾವಣೆ ಹತ್ತಿರ ಬಂದಾಗ ತಮಗಿಂತ ಕಿರಿಯರಿಗೆ ನಮಸ್ಕರಿಸಿ ನನಗೆ ಮತ ನೀಡುವ ಭರವಸೆ ನೀಡುವ ತನಕ ನಿಮ್ಮ ಕಾಲು ಬಿಡುವುದಿಲ್ಲ. ಸಾ.ರಾ.ಮಹೇಶ್‌ಗೆ 3 ಬಾರಿ ಮತ ನೀಡಿದ್ದೀರಿ. ನನಗೆ ಈ ಬಾರಿ ಮತ ನೀಡದಿದ್ದರೆ ನಾನು ಮತ್ತು ನಮ್ಮ ಕುಟುಂಬ ಜೀವಂತವಾಗಿ ಬದುಕಲ್ಲ ಎಂದು ಒತ್ತಾಯ ಮಾಡುತ್ತಿರುವುದು ಎಷ್ಟು ಸರಿ ಎಂದು ಪ್ರಶ್ನಿಸಿದರು.

ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ 167 ಸಾವಿರ ಕೋಟಿ ಸಾಲ ಮಾಡಿ ಅಧಿಕಾರ ನಡೆಸಿದರು. ಈಗಿನ ಮುಖ್ಯಮಂತ್ರಿ 5 ಸಾವಿರ ಕೋಟಿ ಸಾಲ ಮಾಡಿ ಆಡಳಿತ ನಡೆಸಿದ್ದು, ಇಬ್ಬರು ಸೇರಿ ಹುಟ್ಟಿದ ಮಗುವಿನಿಂದ ಹಿಡಿದು ದೊಡ್ಡವರವರೆಗೆ ಪ್ರತಿಯೊಬ್ಬರ ತಲೆ ಮೇಲೆ 50 ಸಾವಿರ ಸಾಲ ಹೊರಿಸಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

2 ರಾಷ್ಟ್ರೀಯ ಪಕ್ಷಗಳು ರಾಜ್ಯದಲ್ಲಿ ಆಡಳಿತ ನಡೆಸುವಾಗ ಕೇಂದ್ರದಿಂದ ಅನುದಾನ ತರದೆ ಸಾಲ ಮಾಡಿ ಆಡಳಿತ ನಡೆಸಿದ್ದೆ ಸಾಧನೆಯಾಗಿದೆ. ಆದರೆ ಈ ಬಾರಿ ರಾಜ್ಯದ ಜನತೆ ತೀರ್ಮಾನ ಮಾಡಿದ್ದಾರೆ. ಪ್ರಾದೇಶಿಕ ಪಕ್ಷವನ್ನು ಆಡಳಿತಕ್ಕೆ ತರುವ ಮೂಲಕ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ತರುವಂತ ಕೆಲಸವನ್ನು ನಮ್ಮ ಜೆಡಿಎಸ್ ಪಕ್ಷ ಮಾಡಲಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಚಾರಿ ನಿಯಂತ್ರಿಕ ರಘು, ನಿವೃತ್ತ ನೌಕರರಾದ ರಾಮರಾಜು, ರಾಜೇಗೌಡ, ಚಂದ್ರಣ್ಣ, ನೌಕರರಾದ ಸುಧಾಕರ, ಆರ್.ಕೃಷ್ಣೇಗೌಡ, ಟಿ. ಆನಂದ, ಪ್ರಸನ್ನ, ಮಹದೇವ, ದೇವಸ್ಥಾನ ಸಮಿತಿ ಅಧ್ಯಕ್ಷ ಸದಾನಂದ, ವಿವಿಧ ಸಹಕಾರ ಸಂಘಗಳ ಅಧ್ಯಕ್ಷರಾದ ಶಿವನಾಂದ ಕುಂಬಾರ್, ಲೋಕೇಶ್, ಜೆಡಿಎಸ್ ಮುಖಂಡರಾದ ಹರೀಶ, ಕುಮಾರ್, ಮನುಗೌಡ, ನಾರಾಯಣ, ಹರ್ಷಿತ್, ಮಂಜುನಾಥ್, ಕಿಶೋರ್, ಸೂರಿ ಸೇರಿದಂತೆ ಇನ್ನಿತರರಿದ್ದರು.

ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸಾವು

ನಂಜನಗೂಡು, ಮಾ.16– ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ನಗರದ ಹೈಟೆಕ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿಯ ಬೈಪಾಸ್ ರಸ್ತೆಯಲ್ಲಿ ಗುರುವಾರ ನಡೆದಿದೆ.



ಮೈಸೂರು ತಾಲೂಕಿನ ಕೋಚನಹಳ್ಳಿ ಗ್ರಾಮದ ನಿವಾಸಿ ಮಹೇಂದ್ರ(35) ಸಾವನ್ನಪ್ಪಿದವರು. ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿರುವ ಸಂಬಂಧಿಕರನ್ನು ನೋಡಲು ಬೈಕ್‌ನಲ್ಲಿ ಬರುವಾಗ ಈ ಘಟನೆ ನಡೆದಿದ್ದು, ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಹೊಡೆದು ಅಪಘಾತ ನಡೆದಿದೆಯೋ ಅಥವಾ ಅಪರಿಚಿತ ವಾಹನ ಡಿಕ್ಕಿ ಹೊಡೆದಿದೆಯೋ ಎಂಬುದು ಖಚಿತಗೊಂಡಿಲ್ಲ.

ವಿಷಯ ತಿಳಿದು ಸ್ಥಳಕ್ಕೆ ಧಾವಿಸಿದ ಸಂಚಾರ ಪೊಲೀಸ್ ಠಾಣೆ ಎಸ್‌ಐ ಯಾಸ್ಮಿನ್ ತಾಜ್ ಮಹಜರು ನಡೆಸಿದರು. ಮೃತ ಮಹೇಂದ್ರನ ದೇಹದಲ್ಲಿ ಗಂಭೀರ ಗಾಯ ಕಂಡು ಬಂದಿಲ್ಲ. ತಲೆಗೆ ಪೆಟ್ಟು ಬಿದ್ದು ಮೃತಪಟ್ಟಿರುವ ಬಗ್ಗೆ ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. ಮೃತದೇಹವನ್ನು ತಾಲೂಕು ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದ್ದು, ಮೃತರ ಕುಟುಂಬದವರು ನೀಡುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಮರಣೋತ್ತರ ಪರೀಕ್ಷೆಗೆ ಒಳಪಡಿಸುವುದಾಗಿ ಎಂದು ಯಾಸ್ಮಿನ್ ತಾಜ್ ತಿಳಿಸಿದ್ದಾರೆ.

ಮುಸ್ಲಿಂ ಬಾಂಧವರು ಜೆಡಿಎಸ್ ಬೆಂಬಲಿಸಿ: ಮಂಜೇಗೌಡ

ಕೆ.ಆರ್.ನಗರ, ಮಾ.16– ರಾಜ್ಯದಲ್ಲಿ ಈ ಬಾರಿ ಜೆಡಿಎಸ್ ಅಧಿಕಾರಕ್ಕೆ ಬರಲಿದ್ದು, ಕುಮಾರಣ್ಣ ಮುಖ್ಯಮಂತ್ರಿಯಾಗುವುದು ಖಚಿತ. ಆದ್ದರಿಂದ ಮುಸ್ಲಿಂ ಬಾಂಧವರು ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮನವಿ ಮಾಡಿದರು.

ಪಟ್ಟಣದಲ್ಲಿ ಡಾ.ಮಹಬೂಬ್ ಖಾನ್ ಹಾಗೂ ಮುಸ್ಲಿಂ ಬಾಂಧವರಿಂದ ಸನ್ಮಾನ ಸ್ವೀಕರಿಸಿ ಅವರು ಮಾತನಾಡಿದರು. ಈ ವೇಳೆ ಮುಸ್ಲಿಂ ಬಾಂಧವರು ಕೆ.ಆರ್.ನಗರದಲ್ಲಿ ಶಾದಿಮಹಲ್ ನಿರ್ಮಿಸುತ್ತಿದ್ದೇವೆ. ವಿಧಾನಪರಿಷತ್ ಸದಸ್ಯರ ಅನುದಾನದಲ್ಲಿ 35 ಲಕ್ಷ ರೂ. ಮಂಜೂರು ಮಾಡಿಕೊಡಬೇಕೆಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮಂಜೇಗೌಡ, ನಾನು ಮುಸ್ಲಿಂ ಬಾಂಧವರ ಪರವಾಗಿದ್ದು, ನನ್ನ ಅನುದಾನದಲ್ಲಿ 25 ಲಕ್ಷ ರೂ. ನೀಡುತ್ತೇನೆ. ಈ ಬಾರಿ ನೀವೆಲ್ಲರೂ ಜೆಡಿಎಸ್ ಬೆಂಬಲಿಸಿ ಸಾ.ರಾ. ಮಹೇಶ್ ಅವರನ್ನು ಗೆಲ್ಲಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭ ವಿಧಾನಪರಿಷತ್ ಸದಸ್ಯರಾದ ಅಡಗೂರು



ಹೆಚ್.ವಿಶ್ವನಾಥ್ ಹಾಗೂ ಸಿ.ಎನ್.ಮಂಜೇಗೌಡರಿಗೆ ಅಭಿನಂದಿಸಲಾಯಿತು. ಜಾಮೀಯಾ ಮಸೀದಿ ತಾಲೂಕು ಕಮಿಟಿ ಅಧ್ಯಕ್ಷ ಅಪ್ಸರ್ ಬಾಬು, ಡಾ.ಮಹಬೂಬ್ ಖಾನ್, ನಾಸಿಕ್ ಹುಸೇನ್, ಏಜಾಜ್ ಅಹ್ಮದ್, ಮಹ್ಮದ್ ಇರ್ಷಾದ್, ಪೈ.ಚಂದ್ರು, ಮಂಜೇಗೌಡರ ಆಪ್ತ ಸಹಾಯಕ ಹೆಚ್.ಎ.ಸುರೇಂದ್ರ, ಅನಿಲ್ ಹಾಜರಿದ್ದರು.

ಜಮೀನಿನ ಎನ್‌ಓಸಿಗಾಗಿ 10 ಲಕ್ಷ ರೂ. ಲಂಚ

ಪುರಸಭಾಧ್ಯಕ್ಷರ ವಿರುದ್ಧ ಆರೋಪ



ತಿ.ನರಸೀಪುರ, ಮಾ.16– ಮಾರಾಟವಾಗಿರುವ ಜಮೀನಿಗೆ ಎನ್‌ಓಸಿ ನೀಡಲು ಪುರಸಭಾಧ್ಯಕ್ಷ ಟಿ.ಎಂ.ನಂಜುಂಡಸ್ವಾಮಿ 10 ಲಕ್ಷ ರೂ. ಲಂಚ ಕೇಳಿದ್ದಾರೆ ಎಂದು ಸೇವಾಶ್ರಯ ಫೌಂಡೇಶನ್ ಅಧ್ಯಕ್ಷ ಮಣಿಕಂಠರಾಜು ಆರೋಪಿಸಿದ್ದಾರೆ.

ಪಟ್ಟಣದಲ್ಲಿಂದು ಸುದ್ದಿಗೋಷ್ಠಿ ನಡೆಸಿದ ಅವರು, ಟಿ.ನರಸೀಪುರದ ರಿಯಲ್ ಎಸ್ಟೇಟ್ ಉದ್ಯಮಿ ಮಲ್ಲಣ್ಣ ಹಾಗೂ ಅವರ ಸ್ನೇಹಿತ ನಾರಾಯಣ್ ಎಂಬುವವರು ಜಂಟಿಯಾಗಿ ಪುರಸಭೇ ವ್ಯಾಪ್ತಿಯಲ್ಲಿರುವ ಹೆಳವರಹುಂಡಿಯಲ್ಲಿ 12 ಗುಂಟೆ ಜಮೀನು ಖರೀದಿಸಿದ್ದರು. ನಂತರ ಅದನ್ನು ಬೇರೊಬ್ಬರಿಗೆ ಮಾರಾಟ ಮಾಡಿದ್ದಾರೆ. ಈ ಜಮೀನಿಗೆ ಎನ್‌ಓಸಿ ನೀಡಲು ಮಲ್ಲಣ್ಣ ಅವರಿಂದ ಪುರಸಭಾಧ್ಯಕ್ಷರು 10 ಲಕ್ಷ ರೂ. ಕೇಳಿದ್ದಾರೆ ಎಂದು ದೂರಿದರು.

ಇದೇ ಸುದ್ದಿಗೋಷ್ಠಿಯಲ್ಲಿದ್ದ ಮಲ್ಲಣ್ಣ, ನೀನು ಜಮೀನನ್ನು ಲಾಭಕ್ಕೆ ಮಾರಾಟ ಮಾಡಿದ್ದೀಯಾ. ಅದರಲ್ಲಿ ನನಗೂ ಸಮಪಾಲು ಬೇಕು. ಇಲ್ಲದಿದ್ದರೇ 10 ಲಕ್ಷ ರೂ. ಕೊಡಬೇಕು ಎಂದು ನಂಜುಂಡಸ್ವಾಮಿ ಒತ್ತಾಯಿಸಿದರು. ಅವರ ಮಾತುಗಳನ್ನು ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಲಾಗುತ್ತಿದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ನನ್ನಿಂದ ಮೊಬೈಲ್ ಕಸಿದುಕೊಂಡು ಕೊಲೆ ಬೆದರಿಕೆ ಹಾಕಿದ್ದಾರೆ. ಈ ಸಂಬಂಧ ಜಿಲ್ಲಾ ಎಸ್ಪಿ ಅವರಿಗೆ ದೂರು ಸಲ್ಲಿಸುತ್ತೇನೆ ಎಂದರು. ಸುದ್ದಿಗೋಷ್ಠಿಯಲ್ಲಿ ಸೇವಾಶ್ರಯ ಫೌಂಡೇಶನ್ ಕಾರ್ಯದರ್ಶಿ ಕ್ರೇಜಿ ಸುರೇಶ್ ಮತ್ತು ನಾರಾಯಣ್ ಉಪಸ್ಥಿತರಿದ್ದರು.

ರಾಜಕೀಯ ಕಾರಣಕ್ಕೆ ಆರೋಪ: ತನ್ನ ಮೇಲೆ ಲಂಚದ ಆರೋಪ ಮಾಡಿರುವವರು ಬಿಜೆಪಿಯವರಾಗಿದ್ದು, ನನ್ನ ತೇಜೋವಧೆ ಮಾಡುವ ದೃಷ್ಟಿಯಿಂದ ಸುಳ್ಳು ಆರೋಪ ಮಾಡಿದ್ದಾರೆ ಎಂದು ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ್ದಾರೆ. ಇಷ್ಟಕ್ಕೂ ಮಲ್ಲಣ್ಣ ಅವರು ಯಾವುದೇ ಎನ್‌ಓಸಿಗಾಗಿ ಪುರಸಭೆಗೆ ಅರ್ಜಿಯನ್ನೇ ಸಲ್ಲಿಸಿಲ್ಲ. ಹೀಗಿರುವಾಗ ಅವರಿಗೆ ಯಾವ ಎನ್‌ಓಸಿ ಕೊಡಲು ಸಾಧ್ಯ? ಅದಕ್ಕೆ ಲಂಚ ಕೇಳುವುದಾದರೂ ಹೇಗೆ? ಎಂದು ಪ್ರಶ್ನಿಸಿದರು. ತನ್ನ ವಿರುದ್ಧ ಸುಳ್ಳು ಆರೋಪ ಮಾಡಿರುವ ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುತ್ತೇನೆ ಎಂದು ಅವರು ಹೇಳಿದರು.



ಪಿರಿಯಾಪಟ್ಟಣ ತಾಲೂಕಿನ ಕರಡಿಪುರ ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘವನ್ನು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಉದ್ಘಾಟಿಸಿದರು. ಈ ವೇಳೆ ಮುಖಂಡರಾದ ಕುಮಾರ್, ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಪ್ರಧಾನ ಕಾರ್ಯದರ್ಶಿ ವಿದ್ಯಾಶಂಕರ್, ಮಾಜಿ ತಾಪಂ ಸದಸ್ಯ ಅತ್ತರ್ ಮತ್ತಿನ್, ಹಲಗನಹಳ್ಳಿ ವಿಎಸ್‌ಎಸ್‌ಎನ್ ಅಧ್ಯಕ್ಷ ಸೈಯದ್ ಹಸೀಬ್, ರೇವಣ್ಣ, ಜಯಣ್ಣ, ಚೆಲುವಯ್ಯ, ಚೆಲುವರಾಜು, ಸುಲೋಚನಾ ಸೇರಿದಂತೆ ಇನ್ನಿತರರಿದ್ದರು.

ಜೆಡಿಎಸ್ ಗೆಲುವು ತಡೆಯಲು ಸಾಧ್ಯವಿಲ್ಲ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ. ಹರೀಶ್‌ಗೌಡ



ಹುಣಸೂರು, ಮಾ.16– ಮುಂಬರುವ ಚುನಾವಣೆಯಲ್ಲಿ ತಾಲೂಕಿನ ಜನರ ಆಶೀರ್ವಾದದಿಂದ ಕ್ಷೇತ್ರದಲ್ಲಿ ಜೆಡಿಎಸ್ ಗೆಲುವು ಸಾಧಿಸಲಿದ್ದು, ಇದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ ಎಂದು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ತಾಲೂಕಿನ ಕೂಡ್ಲೂರು ಗ್ರಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ತೊರೆದ ಮುಖಂಡರನ್ನು ಜೆಡಿಎಸ್‌ಗೆ ಬರಮಾಡಿಕೊಂಡು ಮಾತನಾಡಿದ ಅವರು, ಚುನಾವಣೆ ಹತ್ತಿರವಾಗುತ್ತಿದ್ದಂತೆ ತಾಲೂಕಿನ ಇನ್ನಷ್ಟು ಯುವಕರು ನನ್ನ ಕೈ ಹಿಡಿಯಲಿದ್ದಾರೆ. ಸಾಮಾಜಿಕ ಜಾಲತಾಣದಲ್ಲಿ ನನ್ನ ವಿರುದ್ಧ ಯಾವುದೇ ತಪ್ಪು ಸಂದೇಶ ಹಾಕಿದರೂ ಯುವ ಸಮೂಹ ತಲೆ ಕೆಡಿಸಿಕೊಳ್ಳದೇ ನನ್ನ ಮೇಲೆ ನಂಬಿಕೆ ಇಟ್ಟು ಬರುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಆ ನಂಬಿಕೆಗೆ ಚ್ಯುತಿಯಾಗದ ರೀತಿ ನೋಡಿಕೊಳ್ಳುವ ಜವಾಬ್ದಾರಿ ನನ್ನದು ಎಂದರು.

ಜಿಪಂ ಮಾಜಿ ಸದಸ್ಯ ಸಿ.ಟಿ.ರಾಜಣ್ಣ ಮಾತನಾಡಿದರು. ಈ ವೇಳೆ ಗ್ರಾಪಂ ಸದಸ್ಯ ರಕ್ಷಿತ್, ಡೇವಿಡ್, ಜಾರ್ಜ್, ವಿನ್ಸೆಂಟ್ ಜಾನ್, ಸುನೀಲ್, ಪೋಲ್ ಜಾರ್ಜ್, ಜಯಕುಮಾರ್, ಹೃದಯರಾಜ್, ಜೋಸೆಫ್, ಮರಿ, ಆನಂದ್, ಬಾಲರಾಜ್, ರಾಜೇಂದ್ರ ಕುಮಾರ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

ವಿಜೃಂಭಣೆಯ ಗುಜ್ಜಮ್ಮ ತಾಯಿ ರಥೋತ್ಸವ



ಜಯಪುರ ಗ್ರಾಮ ದೇವತೆ ಗುಜ್ಜಮ್ಮ ತಾಯಿ ರಥೋತ್ಸವ ಗುರುವಾರ ವಿಜೃಂಭಣೆಯಿಂದ ನಡೆಯಿತು. ರಥೋತ್ಸವಕ್ಕೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ ನೀಡಿದರು.

ಮಾ.26, ಧ್ರುವಗೆ ಶ್ರದ್ಧಾಂಜಲಿ: ಶಾಸಕ ಅನಿಲ್ ಚಿಕ್ಕಮಾದು

ಹೆಚ್.ಡಿ.ಕೋಟೆ, ಮಾ.16– ಪಟ್ಟಣದಲ್ಲಿ ಮಾ.26ರಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಾಸಕ ಅನಿಲ್ ಚಿಕ್ಕಮಾದು ತಿಳಿಸಿದರು.

ಪಟ್ಟಣದ ಬಿ.ಆರ್.ಅಂಬೇಡ್ಕರ್ ಸಮುದಾಯ ಭವನದಲ್ಲಿ ಆರ್.ಧ್ರುವನಾರಾಯಣ್ ಅವರ ಶ್ರದ್ಧಾಂಜಲಿ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಧ್ರುವ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು. ಅಂದು ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಪಕ್ಷಾತೀತ ಹಾಗೂ ಜಾತ್ಯತೀತವಾಗಿ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಸೋಣ ಎಂದ ಅವರು, ಕಾರ್ಯಕ್ರಮಕ್ಕೆ ಎಲ್ಲಾ ಪಕ್ಷದ ಮುಖಂಡರನ್ನು ಆಹ್ವಾನಿಸಲಾಗುವುದು ಎಂದರು.

ತಾಲೂಕಿನ ಅಭಿವೃದ್ಧಿಗೆ ಶ್ರಮಿಸಿದ್ದ ಧ್ರುವನಾರಾಯಣ್ ಅವರು ಪಕ್ಷ ಸಂಘಟನೆಗೆ ಹಗಲಿರುಳು ಶ್ರಮಿಸಿದ್ದರು. ನಮ್ಮಂತಹ ಅನೇಕ ಯುವಕರಿಗೆ ಭವಿಷ್ಯ ರೂಪಿಸಿಕೊಟ್ಟ ಧ್ರುವ ಅವರ ನಿಧನ ಕಾಂಗ್ರೆಸ್ ಪಕ್ಷ ಹಾಗೂ ರಾಜ್ಯಕ್ಕೆ ತುಂಬಲಾರದ ನಷ್ಟ ಎಂದರು.

ಧ್ರುವನಾರಾಯಣ್ ಅವರ ಕುಟುಂಬದ ಸದಸ್ಯರ ಉಪಸ್ಥಿತಿಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಸುಮಾರು 15 ಸಾವಿರಕ್ಕೂ ಹೆಚ್ಚು ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದ್ದು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪ್ರಿಯಾಂಕ ಖರ್ಗೆ, ಸತೀಶ್ ಜಾರಕಿಹೊಳಿ, ಕೃಷ್ಣ ಭೈರೇಗೌಡ ಸೇರಿದಂತೆ ರಾಜ್ಯ ಹಾಗೂ ಜಿಲ್ಲೆಯ ಎಲ್ಲಾ ನಾಯಕರು ಭಾಗವಹಿಸಲಿದ್ದಾರೆ ಎಂದರು.



ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಮಾದಪ್ಪ, ಮುಖಂಡರಾದ ಸತೀಶ್‌ಗೌಡ, ಹೆಚ್.ಸಿ.ನರಸಿಂಹಮೂರ್ತಿ, ಜಿ.ವಿ.ಸೀತಾರಾಮ್, ಸೋಮೇಶ್, ನಯಾಜ್, ನಾಗರಾಜ್, ಹೆಚ್.ಸಿ.ಮಂಜುನಾಥ್, ರಾಜನಾಯಕ, ಶ್ರೀನಿವಾಸ್, ಶಂಭುಲಿಂಗ ನಾಯಕ, ಚಿಕ್ಕವೀರ ನಾಯ್ಕ, ಶಿವಪ್ಪ ಕೋಟೆ, ರಾಜು, ಇಬ್ರಾಹಿಂ, ಭಾಗ್ಯಲಕ್ಷ್ಮಿ, ಸೌಮ್ಯ, ಬಾಲಯ್ಯ, ಪ್ರದೀಪ್, ಮಧುಕರ್, ಪ್ರೇಮ ಸಾಗರ್, ರಾಜೇಗೌಡ, ಶಿವಮಲ್ಲು, ಸುರೇಂದ್ರ ಡಿ.ಗೌಡ, ಅಶೋಕ್, ಪರಶಿವಮೂರ್ತಿ, ಗಣೇಶಾಚಾರ್, ಶಿವಯ್ಯ, ಶಂಕರ್ ಉಮೇಶ್, ರಾಜೇಗೌಡ, ಶಿವಮಲ್ಲ, ರಮೇಶ್, ಪ್ರಕಾಶ್, ಬೀರೇಗೌಡ, ಸಿದ್ದರಾಮ, ಸಂತೋಷ್‌ಗೌಡ, ವೀರೇಗೌಡ, ಜಯರಾಮ್, ಇತರರಿದ್ದರು.

ಚಿಕ್ಕಯ್ಯನಛತ್ರದಲ್ಲಿ ರೈತ ಸಂಪರ್ಕ ಕೇಂದ್ರ ಉದ್ಘಾಟನೆ

ನಂಜನಗೂಡು, ಮಾ.16– ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ರೈತರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲಾಗಿತ್ತು. ಬಿಜೆಪಿ ಸರ್ಕಾರ ಬೆಲೆ ಏರಿಕೆ ಮಾಡುವ ಮೂಲಕ ರೈತರ ಬದುಕನ್ನು ಮೂರಾಬಟ್ಟೆ ಮಾಡಿದೆ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ತಾಲೂಕಿನ ಚಿಕ್ಕಯ್ಯನಛತ್ರ ಗ್ರಾಮದಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ರೈತ ಸಂಪರ್ಕ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸಾಲ ಮನ್ನಾ, ಕೃಷಿ ಭಾಗ್ಯ, ಹಾಲಿನ ಸಬ್ಸಿಡಿ ಹೆಚ್ಚಳ, ಹೈನುಗಾರಿಕೆಗೆ ಉತ್ತೇಜನ ಸೇರಿದಂತೆ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ರೈತರ ಬದುಕನ್ನು ಸುಧಾರಣೆ ಮಾಡಲಾಗಿತ್ತು. ಮೋದಿ ನೇತೃತ್ವದ ಬಿಜೆಪಿ ಕೇಂದ್ರ ಸರ್ಕಾರ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಭರವಸೆ ನೀಡಿತ್ತು. ಆದರೆ ರಸಗೊಬ್ಬರ ಬೆಲೆ ಏರಿಕೆ, ಅಗತ್ಯ ವಸ್ತುಗಳ ಬೆಲೆ ಏರಿಕೆ, ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮೂಲಕ ರೈತರ ಬದುಕನ್ನು ಮೂರಾಬಟ್ಟೆ ಮಾಡಿದೆ. ರಾಜ್ಯ ಸರ್ಕಾರ ಕೂಡ ಬಡವರ ಪರ ಯಾವುದೇ ಜನಪರ ಯೋಜನೆ ಜಾರಿಗೆ ತರುವಲ್ಲಿ ವಿಫಲವಾಗಿದೆ. ಜೊತೆಗೆ ವ್ಯಾಪಕ ಭ್ರಷ್ಟಾಚಾರದಿಂದ ಅವರ ಆಡಳಿತ ಯಂತ್ರ ಸಂಪೂರ್ಣವಾಗಿ ಕುಸಿದಿದೆ ಎಂದರು.

ರೈತ ಸಂಪರ್ಕ ಕೇಂದ್ರದ ಕಾಮಗಾರಿ ಹಲವು ವರ್ಷಗಳಿಂದ ಜಾಗದ ಸಮಸ್ಯೆಯಿಂದ ನೆನೆಗುದಿಗೆ ಬಿದ್ದಿತ್ತು. ಈಗ ಸ್ಥಳೀಯ ಮುಖಂಡರ ಸಹಾಯದಿಂದ ಸಮಸ್ಯೆ ಬಗೆಹರಿಸಿ 50 ಲಕ್ಷ ವೆಚ್ಚದಲ್ಲಿ ಕಾಮಗಾರಿ ಮುಕ್ತಾಯವಾಗಿ ಕಟ್ಟಡ ಉದ್ಘಾಟನೆಗೊಂಡಿದೆ. ಇದರಿಂದ ಈ ಭಾಗದ ರೈತರಿಗೆ ಸಕಾಲದಲ್ಲಿ ನೆರವು ದೊರಕುವ ಮೂಲಕ ಸಹಾಯವಾಗಲಿದೆ ಎಂದರು.

ಈ ವೇಳೆ ತಾಂಡ್ಯ ಕೈಗಾರಿಕಾ ಪ್ರದೇಶದಲ್ಲಿ 1 ಕೋಟಿ 4 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ, ತಾಂಡವಪುರ, ಕುಪ್ಪರವಳ್ಳಿ, ಬಿಳಿಗೆರೆ ಸರ್ಕಾರಿ ಶಾಲೆಯಲ್ಲಿ ವಿವೇಕ ಯೋಜನೆಯಡಿ ತಲಾ 15 ಲಕ್ಷ ವೆಚ್ಚದಲ್ಲಿ ನೂತನ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.



ಟೋಲ್ ಸಮಸ್ಯೆ ಬಗೆಹರಿಸಲಿ: ಬೆಂಗಳೂರು–ಮೈಸೂರು ದಶಪಥ ರಸ್ತೆಯಲ್ಲಿ ಹೆಚ್ಚಿನ ಟೋಲ್ ಸುಂಕ ವಸೂಲಿ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ. ಈ ಬಗ್ಗೆ ಸಾರ್ವಜನಿಕರು ತಮ್ಮ ಅಳಲು ತೋಡಿಕೊಂಡರೂ ಸಹ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈ ಬಗ್ಗೆ ಪರಿಶೀಲಿಸಿ ಸಾರ್ವಜನಿಕರಿಗೆ ಹೆಚ್ಚಿನ ಹೊರೆಯಾಗದಂತೆ ಟೋಲ್ ದರ ನಿಗದಿಪಡಿಸಿ ಸಮಸ್ಯೆ ಬಗೆಹರಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಮಾ.19ರಂದು ವರುಣಾ ಕಾಂಗ್ರೆಸ್‌ನಿಂದ ತಾಲೂಕಿನ ಬಿಳಿಗೆರೆಯಲ್ಲಿ ಧ್ರುವನಾರಾಯಣ್ ಅವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಈ ಸಂದರ್ಭ ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ತಾಂಡವಪುರ ಗ್ರಾಪಂ ಅಧ್ಯಕ್ಷೆ ನಾಗವೇಣಿ, ಉಪಾಧ್ಯಕ್ಷೆ ಲೀಲಾವತಿ, ಸದಸ್ಯರಾದ ಬಿ.ಪಿ.ಮಹದೇವು, ಎಪಿಎಂಸಿ ಮಾಜಿ ಉಪಾಧ್ಯಕ್ಷ ಮಹದೇವು, ಮುಖಂಡರಾದ ರಾಜು, ಅರ್ಕೇಶ್, ಶಿವಕುಮಾರ್, ರಘು, ರೈತ ಸಂಘದ ಜಿಲ್ಲಾಧ್ಯಕ್ಷ ಟಿ.ಆರ್.ವಿದ್ಯಾಸಾಗರ್, ಕೃಷಿ ಇಲಾಖೆ ಜಿಲ್ಲಾ ಉಪ ನಿರ್ದೇಶಕ ಧನಂಜಯ, ಕೃಷಿ ಸಹಾಯಕ ನಿರ್ದೇಶಕ ದೀಪಕ್, ತೇಜಸ್ವಿ, ಜಿಪಂ ಇಲಾಖೆ ಎಇಇ ಸಹನ ಹಾಗೂ ಇತರರಿದ್ದರು.

ಕೌಟುಂಬಿಕ ಕಲಹ: ಅಪ್ಪ, ಮಗ ಆತ್ಮಹತ್ಯೆ

ಹೆಚ್.ಡಿ.ಕೋಟೆ, ಮಾ.16– ಕೌಟುಂಬಿಕ ಕಲಹದ ಹಿನ್ನೆಲೆಯಲ್ಲಿ ಅಪ್ಪ, ಮಗ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಎನ್.ಬೇಗೂರು ಸಮೀಪದ ಜಕ್ಕಳ್ಳಿ ಕಾಲೋನಿಯಲ್ಲಿ ನಡೆದಿದೆ.



ನಾಗೇಗೌಡ



ಮಧು

ಕಾಲೋನಿ ನಿವಾಸಿ ನಾಗೇಗೌಡ(55) ಅವರ ಪುತ್ರ ಮಧು(24) ಆತ್ಮಹತ್ಯೆ ಮಾಡಿಕೊಂಡವರು. ಮಂಗಳವಾರ ಸಂಜೆ ಮನೆಯಲ್ಲಿ ಗಲಾಟೆ ಸಂಭವಿಸಿದೆ. ಬಳಿಕ ಮನೆಯಲ್ಲಿ ಯಾರೂ ಇಲ್ಲದ ವೇಳೆ ನಾಗೇಗೌಡ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಈ ವಿಷಯ ತಿಳಿದ ಮಗ ಮಧು ಜಮೀನಿನಲ್ಲಿದ್ದ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ಯಾವುದೇ ದೂರು ದಾಖಲಾಗಿಲ್ಲ. ಬುಧವಾರ ಗ್ರಾಮಸ್ಥರ ಸಮ್ಮುಖದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಮಹಿಳಾ ಗ್ರಾಮ ಲೆಕ್ಕಾಧಿಕಾರಿ ಆತ್ಮಹತ್ಯೆ ಪ್ರಕರಣ

ಪತಿ ಸೇರಿ 7 ಮಂದಿ ವಿರುದ್ಧ ದೂರು: ಇಬ್ಬರ ಬಂಧನ



ಹುಣಸೂರು, ಮಾ.16– ತಾಲೂಕಿನ ಬಿಳಿಕೆರೆ ಹೋಬಳಿ ಮಹಿಳಾ ಗ್ರಾಮಲೆಕ್ಕಿಗರಾಗಿದ್ದ ಕೃಷ್ಣಬಾಯಿ ತುಕಾರಾಂ ಪಡ್ಕೆ ಅನುಮಾನಾಸ್ಪದ ಸಾವಿನ ಪ್ರಕರಣಕ್ಕೆ ತಿರುವು ಸಿಕ್ಕಿದ್ದು, ಪುತ್ರಿ ವರದಕ್ಷಿಣೆ ದಾಹಕ್ಕೆ ಬಲಿಯಾಗಿದ್ದಾಳೆ ಎಂದು ತಂದೆ ಪತಿ ಸೇರಿದಂತೆ 7 ಮಂದಿ ವಿರುದ್ಧ ದೂರು ದಾಖಲಿಸಿದ್ದಾರೆ. ಈ ಸಂಬಂಧ ಇಬ್ಬರನ್ನು ಬಂಧಿಸಲಾಗಿದ್ದು, ಐವರು ನಾಪತ್ತೆಯಾಗಿದ್ದಾರೆ.

ಮೃತ ಕೃಷ್ಣಬಾಯಿ ತುಕಾರಾಂ ಪಡ್ಕೆ ಮಾವ ಬಾಳಪ್ಪ ಅಣ್ಣಪ್ಪ ಮತ್ತು ಕೃಷ್ಣಾಬಾಯಿ ಬಾವ ಅಮರನಾಥ ಪಾಟೀಲ್ ಬಂಧಿತರು. ಪತಿ ಹನೂರಿನ ಫಾರೆಸ್ಟ್ ಗಾರ್ಡ್ ಸುಭಾಷ್ ಬೋಸ್ಲೆ ಸೇರಿದಂತೆ ಅವರ ಕುಟುಂಬದ 7 ಮಂದಿ ವಿರುದ್ಧ ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು, ಆರೋಪಿ ಪತಿ ಸೇರಿದಂತೆ ಉಳಿದ ಐದು ಮಂದಿ ನಾಪತ್ತೆಯಾಗಿದ್ದಾರೆಂದು ಡಿವೈಎಸ್ಪಿ ಮಹೇಶ್ ತಿಳಿಸಿದ್ದಾರೆ. ಮೂಲತಃ ಬೆಳಗಾಂ ಜಿಲ್ಲೆಯ ಅಥಣಿ ತಾಲೂಕಿನ ಎಸ್‌ಗಳ್ಳಿ ಗ್ರಾಮದ ಮೃತ ಕೃಷ್ಣಬಾಯಿ ತುಕಾರಾಂ ಪಡ್ಕೆಯವರು ಶ್ಯಾನುಬೋಗನಹಳ್ಳಿ ವಲಯದ ಗ್ರಾಮ ಲೆಕ್ಕಾಧಿಕಾರಿಯಾಗಿದ್ದು, ಕಳೆದ 40 ದಿನಗಳ ಹಿಂದಷ್ಟೆ ಬಿಜಾಪುರ ಮೂಲದ ಫಾರೆಸ್ಟ್ ಗಾರ್ಡ್ ಸುಭಾಷ್ ಬೋಸ್ಲೆಯವರನ್ನು ಮದುವೆಯಾಗಿದ್ದರು. ವಾರದ ಹಿಂದಷ್ಟೆ ಮದುವೆ ಸಂಭ್ರಮ ಮುಗಿಸಿಕೊಂಡು ಕರ್ತವ್ಯಕ್ಕೆ ಹಾಜರಾಗಿದ್ದರು. ಕಳೆದ ಶನಿವಾರ ಬಿಳಿಕೆರೆಯ ಬಾಡಿಗೆ ಮನೆಯಲ್ಲಿ ಅನುಮಾನಾಸ್ಪದವಾಗಿ ನೇಣುಬಿಗಿದ ಸ್ಥಿತಿಯಲ್ಲಿ ಸಾವನ್ನಪ್ಪಿದ್ದರು.

ವಿಷಯ ತಿಳಿದು ಬೆಳಗಾಂನಿಂದ ಬಂದ ಮೃತ ಕೃಷ್ಣಾಬಾಯಿಯ ತಂದೆ ಅಳಿಯ ಸುಭಾಷ್ ಬೋಸ್ಲೆ ಪತ್ನಿ ಶವ ನೋಡಲು ಸಹ ಬಾರದಿರುವುದನ್ನು ಕಂಡು ಅನುಮಾನಗೊಂಡು ಮಗಳ ಸಾವಿಗೆ ಅಳಿಯನ ಮನೆಯವರೇ ಕಾರಣ ಎಂದು ಪೊಲೀಸರಿಗೆ ದೂರು ನೀಡಿದ್ದರು.

ಶತಾಯುಷಿ ಶೀರಮ್ಮ ನಿಧನ



ಸರಗೂರು, ಮಾ.16– ಪಟ್ಟಣದ 4ನೇ ವಾರ್ಡ್ ನಿವಾಸಿ, ರಾಜ್ಯ ಮಟ್ಟದ ವಾಲಿಬಾಲ್ ಆಟಗಾರ ಚಲುವರಾಜ್ ಅವರ ತಾಯಿ ಶೀರಮ್ಮ (102) ಗುರುವಾರ ಬೆಳಗ್ಗೆ ನಿಧನರಾದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಪಟ್ಟಣದ ಆದಿಕರ್ನಾಟಕ ಸಮಾಜದ ಡಾ.ಬಿ.ಆರ್.ಅಂಬೇಡ್ಕರ್ ರುದ್ರಭೂಮಿಯಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಚಪ್ಪ ನಿಧನ



ಮೂಗೂರು, ಮಾ.16– ಗ್ರಾಮದ ಬಂಡಿ ಬೀದಿ ನಿವಾಸಿ, ಗ್ರಾಪಂ ನಿವೃತ್ತ ನೌಕರ ವಾಟರ್‌ಮನ್ ರಾಚಪ್ಪ(62) ಬುಧವಾರ ರಾತ್ರಿ ನಿಧನರಾದರು. ಮೃತರು ಪತ್ನಿ ಹಾಗೂ ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್‌ಗೆ 2023ರ 'ವರ್ಷದ ಗವರ್ನರ್' ಪ್ರಶಸ್ತಿ ಗರಿ



ಮುಂಬಯಿ, ಮಾ.16– ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಅವರಿಗೆ ಇಂಟರ್‌ನ್ಯಾಷನಲ್ ಎಕನಾಮಿಕ್ ರಿಸರ್ಚ್ ಜರ್ನಲ್ ಸೆಂಟ್ರಲ್ ಬ್ಯಾಂಕಿಂಗ್ 2023ರ 'ವರ್ಷದ ಗವರ್ನರ್' ಪ್ರಶಸ್ತಿ ನೀಡಿದೆ. ಕಷ್ಟದ ಸಮಯದಲ್ಲಿ ಅವರ ಸ್ಥಿರ ನಾಯಕತ್ವಕ್ಕಾಗಿ ದಾಸ್ ಈ ಪ್ರಶಸ್ತಿಯನ್ನು ಪಡೆದಿದ್ದಾರೆ. ಕೋವಿಡ್ ಮತ್ತು ಉಕ್ರೇನ್–ರಷ್ಯಾ ನಡುವಿನ ಯುದ್ಧದಿಂದಾಗಿ ಸೃಷ್ಟಿಯಾದ ಬಿಕ್ಕಟ್ಟನ್ನು ಯಶಸ್ವಿಯಾಗಿ ನಿರ್ವಹಣೆ ಮಾಡಿದ್ದಕ್ಕೆ ಅಂತರರಾಷ್ಟ್ರೀಯ ಆರ್ಥಿಕ ಸಂಶೋಧನಾ ಜರ್ನಲ್ ಆಗಿರುವ ಸೆಂಟ್ರಲ್ ಬ್ಯಾಂಕಿಂಗ್ 2023ರ ವರ್ಷದ ಗವರ್ನರ್ ಪ್ರಶಸ್ತಿ ನೀಡಿದೆ.

ಕೋವಿಡ್ 19 ಉಕ್ರೇನ್ ಯುದ್ಧದಿಂದಾಗಿ ಸೃಷ್ಟಿಯಾದ ಹಣದುಬ್ಬರ ಮತ್ತು ಹಲವು ಸವಾಲಿನ ಮಧ್ಯೆಯೂ ಶಕ್ತಿಕಾಂತ್ ದಾಸ್ ಅವರ ಸ್ಥಿರ ನಾಯಕತ್ವವನ್ನು ಶ್ಲಾಘಿಸಲಾಗಿದೆ. ದಾಸ್ ಅವರ ನಾಯಕತ್ವದಲ್ಲಿ ಹಣದುಬ್ಬರ ನಿಯಂತ್ರಿಸಲು ಹಲವಾರು ಬಾರಿ ರೆಪೋ ದರಗಳನ್ನು ಹೆಚ್ಚಿಸುವ ಹಲವಾರು ನಿರ್ಣಾಯಕ ಸುಧಾರಣೆಗಳನ್ನು ಜಾರಿಗೆ ತಂದಿತು. ನವೀನ ಪಾವತಿ ವ್ಯವಸ್ಥೆಗಳನ್ನು ಪರಿಚಯಿಸಿತು. ತೀವ್ರವಾದ ರಾಜಕೀಯ ಒತ್ತಡ ಮತ್ತು ಆರ್ಥಿಕ ಸಂಕಷ್ಟದ ನಡುವೆಯೂ ಆರ್‌ಬಿಐಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿದ್ದಾರೆ ಎಂದು ಪ್ರಕಟಣೆ ಮೆಚ್ಚುಗೆ ವ್ಯಕ್ತಪಡಿಸಿದೆ.

ಸಾರ್ವಜನಿಕ ನೀತಿ ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿ ಪರಿಣತಿ ಹೊಂದಿರುವ ಹಣಕಾಸು ಪ್ರಕಾಶಕವಾಗಿರುವ ಸೆಂಟ್ರಲ್ ಬ್ಯಾಂಕಿಂಗ್ ಕೇಂದ್ರೀಯ ಬ್ಯಾಂಕುಗಳು ಮತ್ತು ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಮೇಲೆ ಅಧ್ಯಯನ ನಡೆಸುತ್ತದೆ. ಭಾರತೀಯ ಸೆಂಟ್ರಲ್ ಬ್ಯಾಂಕ್‌ನ ಗವರ್ನರ್ ಈ ಪ್ರಶಸ್ತಿಯನ್ನು ಗೆದ್ದಿರುವುದು ಇದು ಎರಡನೇ ಬಾರಿ. ಶಕ್ತಿಕಾಂತ್ ದಾಸ್‌ಗೂ ಮೊದಲು, ರಘುರಾಮ್ ರಾಜನ್ ಅವರು 2015ರಲ್ಲಿ 'ವರ್ಷದ ಗವರ್ನರ್' ಪ್ರಶಸ್ತಿಯನ್ನು ಪಡೆದರು. ಸೆಂಟ್ರಲ್ ಬ್ಯಾಂಕಿಂಗ್ ಪಬ್ಲಿಕೇಷನ್ಸ್ ಸಾರ್ವಜನಿಕ ನೀತಿ ಮತ್ತು ಹಣಕಾಸು ಮಾರುಕಟ್ಟೆಗಳಲ್ಲಿ ತೊಡಗಿರುವ ಒಂದು ಪ್ರಕಾಶನ ಕಂಪನಿಯಾಗಿದೆ.

ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಮೈಸೂರು ದಂಪತಿ ಬೆದರಿಸಿ ಚಿನ್ನಾಭರಣ, ನಗದು ದರೋಡೆ

ಚನ್ನಪಟ್ಟಣ, ಮಾ.16– ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಮೈಸೂರು ದಂಪತಿಯನ್ನು ಬೆದರಿಸಿ ಹಣ ಹಾಗೂ ಚಿನ್ನಾಭರಣ ದೋಚಿರುವ ಘಟನೆ ತಡವಾಗಿ ಬೆಳಕಿಗೆ ಬಂದಿದೆ.

ತಾಲೂಕಿನ ದೇವರ ಹೊಸಹಳ್ಳಿ ಹಾಗೂ ತಿಟ್ಟಮಾರನಹಳ್ಳಿ ನಡುವೆ ದಶಪಥದಲ್ಲಿ ಈ ಘಟನೆ ನಡೆದಿದ್ದು, ಮೈಸೂರಿನ ವೈದ್ಯ ಲೋಹಿತ್ ರಾವ್ ಮತ್ತು ಅವರ ಪತ್ನಿಯಿಂದ ಖದೀಮರು ಸುಲಿಗೆ ಮಾಡಿದ್ದಾರೆ. ಕೆಲಸದ ನಿಮಿತ್ತ ಬೆಂಗಳೂರಿಗೆ ತೆರಳಿದ್ದ ಲೋಹಿತ್ ರಾವ್ ಮತ್ತು ಅವರ ಪತ್ನಿ ಸೋಮವಾರ ರಾತ್ರಿ ಕಾರಿನಲ್ಲಿ ವಾಪಸ್ಸಾಗುತ್ತಿದ್ದಾಗ ದೇವರ ಹೊಸಹಳ್ಳಿ ಹಾಗೂ ತಿಟ್ಟಮಾರನಹಳ್ಳಿ ನಡುವೆ ಕಾರು ಕೆಟ್ಟು ನಿಂತಿತು. ಕೂಡಲೇ ಅವರು ಹೆದ್ದಾರಿ ಸಹಾಯವಾಣಿ 1033ಕ್ಕೆ ಕರೆ ಮಾಡಿದರೂ ಯಾವುದೇ ಪ್ರತಿಕ್ರಿಯೆ ಲಭ್ಯವಾಗಿಲ್ಲ. ಹಾಗಾಗಿ ವಿಧಿಯಿಲ್ಲದೆ ಕಾರಿನಲ್ಲಿ ಕುಳಿತಿದ್ದರು. ಅಷ್ಟರಲ್ಲಿ ಬೈಕ್‌ನಲ್ಲಿ ಇಬ್ಬರು ಅಪರಿಚಿತರು ದಂಪತಿ ಬಳಿ ಬಂದು ಚಾಕು ತೋರಿಸಿ, ಲೋಹಿತ್ ಅವರ ಪತ್ನಿಯ ಕೊರಳಲ್ಲಿದ್ದ ಚಿನ್ನಾಭರಣ ಹಾಗೂ 2.50 ಲಕ್ಷ ನಗದು ದೋಚಿ ಪರಾರಿಯಾಗಿದ್ದಾರೆ. ಈ ಬಗ್ಗೆ ಮಂಗಳವಾರ ಬೆಳಗ್ಗೆ ಡಾ.ಲೋಹಿತ್ ರಾವ್, ಚನ್ನಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಬೆಂಗಳೂರು–ಮೈಸೂರು ದಶಪಥದಲ್ಲಿ ಪ್ರಯಾಣಿಸುವವರಿಗೆ ಯಾವುದೇ ಸುರಕ್ಷತೆ ಇಲ್ಲ. ಹೆದ್ದಾರಿಯ ಸಹಾಯವಾಣಿ ಕಾರ್ಯನಿರ್ವಹಿಸುತ್ತಿಲ್ಲ. ವಿಶ್ರಾಂತಿ ತಾಣಗಳೂ ಇಲ್ಲ. ಬೀದಿ ದೀಪಗಳು ಸರಿಯಾಗಿಲ್ಲ. ಹೆದ್ದಾರಿಯಲ್ಲಿ ಸುರಕ್ಷಿತ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯ ಎಂದು ಆಗ್ರಹಿಸಿದ್ದಾರೆ.


ಮೂಡಿಗೆರೆಯಲ್ಲಿ ಹೈಡ್ರಾಮಾ: ಎಂಪಿ ಕುಮಾರಸ್ವಾಮಿಗೆ ಟಿಕೆಟ್ ನೀಡದಂತೆ ಘೇರಾವ್, ಬಿಎಸ್‌ವೈ ರೋಡ್ ಶೋ ರದ್ದು

ಮೂಡಿಗೆರೆ, ಮಾ.16– ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆಯಲ್ಲಿ ಇಂದು ನಡೆದ ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ವೇಳೆಯಲ್ಲಿ ದೊಡ್ಡ ಹೈಡ್ರಾಮಾವೇ ನಡೆಯಿತು. ಶಾಸಕ ಎಂಪಿ ಕುಮಾರಸ್ವಾಮಿಗೆ ಈ ಬಾರಿ ಟಿಕೆಟ್ ನೀಡದಂತೆ ಒತ್ತಾಯಿಸಿ ಪಕ್ಷದ ಕಾರ್ಯಕರ್ತರು ಮಾಜಿ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರಿಗೆ ಘೇರಾವ್ ಹಾಕಿದರು. ಎಂಪಿ ಕುಮಾರಸ್ವಾಮಿ ವಿರುದ್ಧ ಭಿತ್ತಿ ಪತ್ರ ಹಿಡಿದು ಘೋಷಣೆ ಕೂಗಿದ ಕಾರ್ಯಕರ್ತರು, ಯಾವುದೇ ಕಾರಣಕ್ಕೂ ಎಂ.ಪಿ. ಕುಮಾರಸ್ವಾಮಿಗೆ ಬಿಜೆಪಿ ಟಿಕೆಟ್ ನೀಡದಂತೆ ಒತ್ತಾಯಿಸಿದರು. ಈ ಹೈಡ್ರಾಮಾದಿಂದ ಬೇಸರಗೊಂಡ ಯಡಿಯೂರಪ್ಪ ರೋಡ್ ಶೋ ರದ್ದುಗೊಳಿಸಿದರು. ನಂತರ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ, ಭಿತ್ತಪತ್ರ ಹಿಡಿಯದಂತೆ, ಘೋಷಣೆ ಕೂಗದಂತೆ ತಾಕೀತು ಮಾಡಿದ ನಂತರ ಕಾರ್ಯಕರ್ತರು ಸುಮ್ಮನಾದರು.

ಇಂದಿನಿಂದ ನೂತನ ವಿದ್ಯುತ್ ಉಪ ಕೇಂದ್ರಕ್ಕೆ ವಿದ್ಯುತ್ ಸಂಪರ್ಕ

ಮೈಸೂರು, ಮಾ.16–ಮಳವಳ್ಳಿ ತಾಲೂಕು ಪೂರಿಗಾಲಿ ಸಮಗ್ರ ಹನಿ, ತುಂತುರು ನೀರಾವರಿ ಯೋಜನೆಯು ಘನ ಕರ್ನಾಟಕ ಸರ್ಕಾರದ ಬಹುಮುಖ್ಯ ಏತ ನೀರಾವರಿ ಯೋಜನೆಯಾಗಿದ್ದು, ಸದರಿ ಯೋಜನೆಯ ಬಳಿ ನೂತನವಾಗಿ ಸ್ಥಾಪಿಸಲಾಗಿರುವ ವಿದ್ಯುತ್ ಉಪ ಕೇಂದ್ರಕ್ಕೆ ನೂತನವಾಗಿ ನಿರ್ಮಿಸಿರುವ 66 ಕೆವಿ ವಿದ್ಯುತ್ ಮಾರ್ಗದ ಮೂಲಕ ವಿದ್ಯುತ್ ಸರಬರಾಜು ಪಡೆಯಲು ಉದ್ದೇಶಿಸಿದ್ದು, ಸದರಿ ವಿದ್ಯುತ್ ಮಾರ್ಗವನ್ನು ಮಾ.17ರಿಂದ ನಂತರದ ಯಾವುದೇ ದಿನಾಂಕದಂದು(ವಿದ್ಯುತ್ ಹರಿಸಲಾಗುವುದು) ಚೇತನ ಗೊಳಿಸಲು ಉದ್ದೇಶಿಸಲಾಗಿದೆ.

ಸದರಿ 66 ಕೆ.ವಿ ವಿದ್ಯುತ್ ಮಾರ್ಗವು (ಸುಮಾರು 4.456 ಕಿ.ಮೀ ಉದ್ದ) ಹಾಲಿ 66 ಕೆ.ವಿ ತಲಕಾಡು ವಿದ್ಯುತ್ ಉಪ ಕೇಂದ್ರದಿಂದ ತಲಕಾಡು, ಟಿ.ಬೆಟ್ಟಹಳ್ಳಿ



ಮತ್ತು ಪೂರಿಗಾಲಿ ಗ್ರಾಮಗಳ ಸರಹದ್ದಿನಲ್ಲಿ ಹಾದು ಹೋಗಿ ಪಂಪ್ ಹೌಸ್ ಬಳಿ ಹೊಸದಾಗಿ ನಿರ್ಮಾಣ ಮಾಡಿರುವ ಪೂರಿಗಾಲಿ ವಿದ್ಯುತ್ ಉಪಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸಲಿದೆ. ಆದ್ದರಿಂದ ಸಾರ್ವಜನಿಕರು ವಿದ್ಯುತ್ ಗೋಪುರಗಳಿಗೆ ದನಕರುಗಳನ್ನು ಕಟ್ಟುವುದಾಗಲೀ, ಲೋಹದ ಪಟ್ಟಿಯನ್ನು ತೆಗೆಯುವುದಾಗಲೀ, ಗೋಪುರಗಳನ್ನು ಹತ್ತುವುದಾಗಲೀ, ತಂತಿಗಳನ್ನು ಮುಟ್ಟುವುದಾಗಲೀ, ಗೋಪುರಗಳ ಕೆಳಗಡೆ ಮರಗಿಡಗಳನ್ನು ನೆಡುವುದಾಗಲೀ, ಗೋಪುರಗಳಿಗೆ ಬಳ್ಳಿ ಮತ್ತು ಹಗ್ಗ ಮುಂತಾದವುಗಳನ್ನು ಎಳೆಯುವುದಾಗಲೀ, ಗಾಳಿಪಟವನ್ನು ಗೋಪುರದ ಹತ್ತಿರ ಹಾರಿಸುವುದಾಗಲೀ ಮಾಡುವುದು ತುಂಬಾ ಅಪಾಯಕಾರಿಯಾಗಿರುತ್ತದೆ ಹಾಗೂ ಪ್ರಾಣ ಹಾನಿಯಾಗುತ್ತದೆ. ಈ ಸೂಚನೆಯನ್ನು ಉಲ್ಲಂಘಿಸಿದ ಪಕ್ಷದಲ್ಲಿ ಉಂಟಾಗುವ ಯಾವುದೇ ತರಹದ ಅಪಘಾತ ಅಥವಾ ಪ್ರಾಣ ಹಾನಿಗೆ ಕಾವೇರಿ ನೀರಾವರಿ ನಿಗಮ ನಿಯಮಿತವು ಜವಾಬ್ದಾರಿಯಲ್ಲ ಎಂದು ಮಳವಳ್ಳಿ ಕಾನೀನಿನಿ, ಕೆ.ಆರ್.ಎಸ್.ಎಂ & ಎಂ.ಐ.ಪಿ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ತಿಳಿಸಿದ್ದಾರೆ.

ತಮಿಳುನಾಡಿನ ಪಟಾಕಿ ಕಾರ್ಖಾನೆಯಲ್ಲಿ ಸ್ಫೋಟ, ಇಬ್ಬರು ಮಹಿಳೆಯರು ಸಾವು, ಓರ್ವ ಕಾರ್ಮಿಕನಿಗೆ ಗಂಭೀರ ಗಾಯ

ಧರ್ಮಪುರಿ, ಮಾ.16– ಜಿಲ್ಲೆಯ ಪೆನ್ನಾಗರಂನ ನಾಗದಾಸಂಪಟ್ಟಿ ಗ್ರಾಮದ ಪಟಾಕಿ ತಯಾರಿಕಾ ಘಟಕದಲ್ಲಿ ಗುರುವಾರ ಸಂಭವಿಸಿದ ಸ್ಫೋಟದಲ್ಲಿ ಇಬ್ಬರು ಮಹಿಳೆಯರು ಸಾವಿಗೀಡಾಗಿದ್ದಾರೆ ಮತ್ತು ಪುರುಷ ಕಾರ್ಮಿಕರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದೇವಸ್ಥಾನದ ಉತ್ಸವಗಳಿಗೆ ಪಟಾಕಿ ತಯಾರಿಕೆಯಲ್ಲಿ ತೊಡಗಿದ್ದ ವೇಳೆ, ಕಾರ್ಮಿಕರು ದಹಿಸುವ ವಸ್ತುವನ್ನು ನಿರ್ವಹಿಸುತ್ತಿದ್ದಾಗ ಘರ್ಷಣೆಯಿಂದ ಘಟಕದಲ್ಲಿ ಬೆಂಕಿ ಹೊತ್ತಿಕೊಂಡಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನಾಗದಾಸಂಪಟ್ಟಿ ಗ್ರಾಮದ ಕೆ.ಮುನಿಯಮ್ಮಾಳ್ (65) ಮತ್ತು ಸೇಲಂನ ಮೇಚೇರಿಯ ಬಿ ಪಳನಿಯಮ್ಮಾಳ್ (50) ಸ್ಥಳದಲ್ಲೇ ಮೃತಪಟ್ಟರೆ, ಮೂರನೇ ಕೆಲಸಗಾರ ಪಿ.ಶಿವಲಿಂಗಂಗೆ ಗಂಭೀರ ಸುಟ್ಟ ಗಾಯಗಳಾಗಿವೆ. ಸಾವಿನ ಬಗ್ಗೆ ಸಂತಾಪ ವ್ಯಕ್ತಪಡಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ದುರಂತದ ಸುದ್ದಿ ಕೇಳಿ ಬೇಸರವಾಗಿದೆ ಎಂದು ಹೇಳಿದ್ದಾರೆ. ಅಪಘಾತ ಮತ್ತು ರಕ್ಷಣಾ ಕಾರ್ಯಾಚರಣೆಯ ಜೊತೆಗೆ ಚಿಕಿತ್ಸೆಯ ವಿವರಗಳನ್ನು ನಾನು ಧರ್ಮಪುರಿ ಜಿಲ್ಲಾಧಿ ಕಾರಿಗಳಿಂದ ಪಡೆದುಕೊಂಡಿದ್ದೇನೆ. ದುಃಖಿತಪ್ತ ಕುಟುಂಬಗಳಿಗೆ ನನ್ನ ಹೃತ್ಪೂರ್ವಕ ಸಂತಾಪ ಎಂದು ಹೇಳಿದ ಅವರು ಸಂತ್ರಸ್ತ ಕುಟುಂಬಕ್ಕೆ ತಲಾ 3 ಲಕ್ಷ ಹಾಗೂ ಗಾಯಗೊಂಡವರಿಗೆ ಒಂದು ಲಕ್ಷ ರೂ. ಘೋಷಿಸಿದ್ದಾರೆ. ಅಲ್ಲದೆ, ಶಿವಲಿಂಗಂಗೆ ಸರ್ಕಾರಿ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ನೀಡುವಂತೆ ಅಧಿಕಾರಿಗಳಿಗೆ ಮುಖ್ಯಮಂತ್ರಿ ಸೂಚಿಸಿದರು. ಅಪಘಾತ ಸಂಭವಿಸಿದ ತಕ್ಷಣ ಜಿಲ್ಲಾಧಿಕಾರಿ ಕೆ.ಸಂತಿ ಸ್ಫೋಟ ಸ್ಥಳವನ್ನು ಪರಿಶೀಲನೆ ನಡೆಸಿ, ಪಂಚನಾಮೆ ನಡೆಸಿದರು.

ನಾಳೆ ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ

ಮೈಸೂರು, ಮಾ.16–ಮೈಸೂರು ತಾಲೂಕಿನ ಇಲವಾಲ ಹೋಬಳಿಯ ಕಲ್ಲೂರು ನಾಗನಹಳ್ಳಿ ಗ್ರಾಮದಲ್ಲಿ ಮಾ.18 ರಂದು ಜಿಲ್ಲಾಧಿಕಾರಿಗಳ ನಡೆ ಗ್ರಾಮಗಳ ಕಡೆ ಗ್ರಾಮ ಭೇಟಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಗ್ರಾಮಸ್ಥರು ಗ್ರಾಮಕ್ಕೆ ಸಂಬಂಧಿಸಿದಂತೆ ಸಮಸ್ಯೆಗಳ ಬಗ್ಗೆ ಮುಂಚಿತವಾಗಿಯೇ ಸಂಬಂಧಪಟ್ಟ ನಾಡ ಕಚೇರಿ, ಉಪ ತಹಸೀಲ್ದಾರ್, ರಾಜಸ್ವ ನಿರೀಕ್ಷಕರಿಗೆ ತಮ್ಮ ಮನವಿಗಳನ್ನು ಸಲ್ಲಿಸಿ, ಪರಿಹಾರ, ಸಮಸ್ಯೆ ಇತ್ಯರ್ಥ ಪಡಿಸಿಕೊಳ್ಳಲು ತಿಳಿಸಲಾಗಿದೆ.

ಜಿಲ್ಲಾಧಿಕಾರಿಗಳು ಭೇಟಿ ನೀಡಲಿರುವ ತಾಲೂಕನ್ನು ಹೊರತುಪಡಿಸಿ ಉಪವಿಭಾಗಾಧಿಕಾರಿಗಳು ಮತ್ತು ತಹಸೀಲ್ದಾರರು ಕೆ.ಆರ್.ನಗರ ತಾಲೂಕು ಮತ್ತು ಸಾಲಿಗ್ರಾಮ ತಾಲೂಕಿನ ಸಾಲಿಗ್ರಾಮ ಹೋಬಳಿಯ ಅಂಕನಹಳ್ಳಿ ಗ್ರಾಮದಲ್ಲಿ, ಹೆಚ್.ಡಿ.ಕೋಟೆ ತಾಲೂಕಿನ ಕಸಬಾ ಹೋಬಳಿಯ ಕಟ್ಟೆ ಮನುಗನಹಳ್ಳಿಯಲ್ಲಿ ಪಿರಿಯಾಪಟ್ಟಣ ತಾಲೂಕಿನ ಹಾರನಹಳ್ಳಿ ಹೋಬಳಿಯ ಬೈಲುಕುಪ್ಪೆ ಗ್ರಾಮದಲ್ಲಿ, ನಂಜನ ಗೂಡು ತಾಲೂಕಿನ ಚಿಕ್ಕಯ್ಯನ ಛತ್ರ ಹೋಬಳಿಯ ತುಮ್ಮನೇರಳೆ ಗ್ರಾಮ ದಲ್ಲಿ, ಟಿ.ನರಸೀಪುರ ತಾಲೂಕಿನ ಸೋಸಲೆ ಹೋಬಳಿಯ ಕೊಳತ್ತೂರು ಗ್ರಾಮದಲ್ಲಿ, ಸರಗೂರು ತಾಲೂಕಿನ ಸರಗೂರು ಹೋಬಳಿಯ ಚಂಗೌಡನಹಳ್ಳಿ ಹಾಗೂ ಹುಣಸೂರು ತಾಲೂಕಿನ ಬಿಳಿಕೆರೆ ಹೋಬಳಿಯ ಚಲ್ಲಹಳ್ಳಿ ಗ್ರಾಮದಲ್ಲಿ ಕಾರ್ಯಕ್ರಮ ನಡೆಸಲಿದ್ದಾರೆ ಎಂದು ಅಪರ ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ತಾತನವರಾದ ಲೇಟ್. ವೇ॥ಬ್ರಾ॥ಶ್ರೀ॥ ಬಿ. ವೆಂಕಟಸುಬ್ರಮಣ್ಯ ಸೋಮಯಾಜಿ ರವರ ಶ್ರೀ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಸ್ವಸ್ತಿವಾಚನದ ವಂಶಪಾರಂಪರೆಯ ಹುದ್ದೆಗೆ ಸಂಬಂಧ ಪಟ್ಟಂತೆ 1. ಬಿ.ವಿ.ಲಲಿತ, 2. ಬಿ.ವಿ.ಲೀಲಾವತಿ, 3. ಬಿ.ವಿ. ಯಮುನಾದೇವಿ, 4. ಬಿ.ವಿ.ವಂಸತಲಕ್ಷ್ಮೀ, ನಿಮ್ಮಗಳಿಗೆ ಯಾವುದೇ ತಂಟೆ – ತಕರಾರು ಇದ್ದಲ್ಲಿ, ದೇವಸ್ಥಾನದ ಆಡಳಿತ ಕಛೇರಿಗೆ 15 ದಿನಗಳ ಒಳಗಾಗಿ ಖುದ್ದು ಹಾಜರಾಗಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳತಕ್ಕದ್ದು.

ಸಹಿ/– ವಿಕ್ರಮ್.ಎನ್,
ಅರ್ಜಿದಾರರು

ಸವಿನೆನಪು



ಡಿ.ಗೋಪಾಲ್

ಸೂರ್ಯನಂತೆ ಮಿಂಚಿ ಹೋದ ನೀವು ಇಂದಿಗೆ ನಮ್ಮನ್ನು ಅಗಲಿ 27 ವರ್ಷಗಳು ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ,
ಇಂತಿ ದುಃಖಿತಪ್ತರು
ಚಲುವರಾಜು, ಸುಧಾಲಕ್ಷ್ಮೀ, ಜಿ. ಲಲಿತಾ, ಜಿ. ಇಂದುಮತಿ
ಮೊಮ್ಮಕ್ಕಳು: ರಾಜೇಶ್, ರಂಜಿತಾ ಮತ್ತು ಕುಟುಂಬವರ್ಗ

ಕಳೆದಿದೆ

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಮೈದನಹಳ್ಳಿ ಗ್ರಾಮದ ಸರ್ವೆ ನಂ. 117/1 ಮತ್ತು ಸರ್ವೆ ನಂ. 117/3 (ಹಳೆ ಸರ್ವೆ ನಂ. 117/1) ರ ಜಮೀನುಗಳ ಕ್ರಯಪತ್ರದ ನೋಂದಣಿ ಸಂಖ್ಯೆ : MYN-1-18269-2007-08, ಸಿ.ಡಿ.ಸಂಖ್ಯೆ. MYND167 ದಿನಾಂಕ : 20-03-2008 ರಂದು ಶ್ರೀಮತಿ ಶಾಂತಮ್ಮ ಕೋಂ ಶ್ರೀ ವೆಂಕಟೇಶಯ್ಯ ರವರಿಗೆ ಕ್ರಯಪತ್ರ ನೋಂದಣಿಯಾಗಿರುತ್ತದೆ. ಈ ಜಮೀನುಗಳ ಮೂಲ ಕ್ರಯಪತ್ರ ದಿನಾಂಕ : 01.02.2023 ರಂದು ಮೈಸೂರು ಸಿಟಿ, ಕುವೆಂಪುನಗರದಲ್ಲಿ ಕಳೆದುಹೋಗಿದ್ದು, ಈ ವಿಚಾರವಾಗಿ ದಿನಾಂಕ : 15.03.2023 ರಂದು, ಕುವೆಂಪುನಗರ ಪೋಲೀಸ್ ಠಾಣೆಯಲ್ಲಿ ದೂರು ನೀಡಿದ್ದು, ಸದರಿ ದೂರಿನ ಸಂಖ್ಯೆ : 1646523230000265 ಆಗಿರುತ್ತದೆ, ಯಾರಿಗಾದರು ಸಿಕ್ಕಿದ್ದಲ್ಲಿ ಸಂಪರ್ಕಿಸಿ ಮೊಬೈಲ್ ನಂ. 9108235061.

In the Court of the I Addl. Senior Civil Judge and C.J.M. (Sr. Dn.) At Mysuru

P & S.C. No. 03/2022

Petitioner: 1) Lakshmamma, W/o Srinivasamurthy K.V., aged about 70 years. (2) S. Girish, S/o Srinivasamurthy K.V., aged about 52 years. (3) S. Yogesh, S/o Srinivasamurthy K.V., aged about 47 years. R/at: 1143/94, 1st Cross, Sarvajanika Hostel Road, Vidyaranyapuram, Mysuru.

V/s

Resondent: NIL

PUBLIC NOTICE

The petitioner has filed the above petition under the Section 376 of Indian Succession Act. sought for succession Certificate in respect of the schedule mentioned amount for which they are eligible.

It is hereby notified to the general public that, if any person/s has got any objection or interested in connection to the same, such persons may appear before the Court in person or through advocate on 4-4-2023 at 11 am and may object failing which the court will be proceed to grant Succession Certificate to the petitioner with respect to the schedule property.

SCHEDULE

Death benefit amount of Rs. 10,00,154/- of Late K.V. Srinivasamurthy who was working in Karnataka Soaps and Detergent Limited, Mysuru, as Assistant tinkaring.

By order of the Court
Sd/- Chief Ministerial Officer, Court of Senior Civil Judge and CJM, Mysuru.
Date: 16-03-2023
Place: Mysuru
Vaman A.K., Advocate
KAR 3535 / 1999. Mob: 9448246223

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು, ಅದರ ಮಾಲೀಕರಾದ ಮೈಸೂರು ಸಿಟಿ, ಕುಂಬಾರಕೊಪ್ಪಲು, ಕೊನೆ ಬಸ್ ನಿಲ್ದಾಣ, 7ನೇ ಕ್ರಾಸ್, ಮನೆ ನಂ. ಜೆ – 36 ರಲ್ಲಿ ವಾಸವಾಗಿರುವ ಲೇಟ್ ಪುಟ್ಟಮಾದೇಗೌಡರ ಮಗ ಸುಮಾರು 49 ವರ್ಷ ವಯಸ್ಸುಳ್ಳ ಶ್ರೀ ಕೆ.ಪಿ.ಜೈಕುಮಾರ್ ಮತ್ತು ಮೈಸೂರು ಸಿಟಿ ಮಹದೇಶ್ವರ ಬಡಾವಣೆ ಹೈಟೆನ್ಷನ್ ಮುಖ್ಯ ರಸ್ತೆ, ವಿಜಯನಗರ, 2ನೇ ಹಂತ, 7ನೇ ಮುಖ್ಯ ರಸ್ತೆ, ಮನೆ ನಂ.345 ರಲ್ಲಿ ವಾಸವಾಗಿರುವ ಶ್ರೀ ಶಂಕರೇಗೌಡರವರ ಮಗನಾದ ಸುಮಾರು 42 ವರ್ಷ ವಯಸ್ಸುಳ್ಳ ಶ್ರೀ ಪಿ.ಎಸ್.ಸತೀಶ್ ಮತ್ತು ಇವರುಗಳ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಶಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳೊಂದಿಗೆ ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು.

ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಶಕ್ತಿ, ಭಾಗಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಸಂಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಶ್ಯಾದನಹಳ್ಳಿ ಗ್ರಾಮ, ಸರ್ವೆ ನಂ.117/4 ರ ವಿಸ್ತೀರ್ಣ 0.0 ಎಕರೆ 35 ಗುಂಟೆ ಜಮೀನನ್ನು (10 ಗುಂಟೆ ಖರಾಬು ಸೇರಿ) ವ್ಯವಸಾಯ ಉದ್ದೇಶದಿಂದ ವ್ಯವಸಾಯೇತರ ಉದ್ದೇಶಕ್ಕಾಗಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ 146636/2019–20 ದಿನಾಂಕ: 13–02–2020 ರಂದು ಅನ್ಯಕ್ರಾಂತ ಮಂಜೂರಾತಿ ಪಡೆದುಕೊಂಡು ಅಭಿವೃದ್ಧಿ ಹೊಂದ ಇರುವ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ : ಸರ್ಕಾರಿ ರಸ್ತೆ (40 ಅಡಿ ರಸ್ತೆ) ಹಾಗೂ ಸರ್ವೆ ನಂ.73/2 ರ ಜಮೀನು, ಪಶ್ಚಿಮಕ್ಕೆ : ಅನುಸೂಯ ರವರ ಜಮೀನು, ಉತ್ತರಕ್ಕೆ : ಸರ್ವೆ ನಂ. 119 ರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.67 ರ ಜಮೀನು. ಈ ಮಧ್ಯೆ ಇರುವ ಸರ್ವೆ ನಂ. 117/4 ರ ವಿಸ್ತೀರ್ಣ 0.0 ಎಕರೆ 35 ಗುಂಟೆ ಜಮೀನು (10 ಗುಂಟೆ ಖರಾಬು ಸೇರಿ)

ಸಹಿ/– ಜೆ.ಕೆ.ಶೇಷಗಿರಿರಾವ್, ವಕೀಲರು
ಕಛೇರಿ 67/7ಎ, ಮೊದಲನೇ ಮಹಡಿ, ನಂ.4, ಖಿಲ್ಲೆ ಮೊಹಲ್ಲಾ, ನ್ಯೂ ಸಯ್ಯಾಜಿ ರಾವ್ ರಸ್ತೆ, ಮೈಸೂರು – 04.
ಮೊ.: 9980072770
Email:jksheshagirirao@gmail.com
ದಿನಾಂಕ: 15–03–2023, ಮೈಸೂರು.

NOTICE

Notice is hereby given that Sri. M.L.Narasimha Murthy and others, have agreed to sell the under mentioned property to my client and the original will dated 05.04.2012 executed by Smt. M.C.Mallamma, which is probated, in favour of Sri. M.L.Narasimha Murthy pertaining to the Sechedule Property, is lost and not traceable by Sri. M.L. Narasimha Murthy as informed to the undersigned. Therefore, any person or persons claiming interest on the Schedule Property or any part thereof, is hereby required to communicate the same to the undersigned at his office situated at Door No. 2765/1A D13/A1, "KEYANS", 5th Main Road, V.V.Puram (V.V. Mohalla), Mysore - 570 002, within 15 (Fifteen) days from the date of this publication, as otherwise the said sale will be completed without any reference or regard to any such purported claim or interest, which shall be deemed to have been waived to all intents and purposes.

SCHEDULE PROPERTY

House Property No.10, 10/1, situated at Gokulam 3rd Stage, Devaraja Mohalla, Mysore City with building thereon, site measuring East to West: 90 1/2 Feet and North to South: (97 3/4 Feet + 89 1/2 Feet) / 2 and bounded on : East : Road, West : Private Property, North: Road and South : Private Property.

Sd/- Dhirendra Kumar R. Mehta
Advocate
KEY -ANS Law Solutions
Mob: 9448274711
Date : 10.03.2023
Place: Mysore



ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107

ಈ–ಮೇಲ್: itstaff_ulb_periyapatna@yahoo.com Phone(O): 08223-273036
ಸಂ:ಪಿಪುಸ/ತಾಂತ್ರಿಕ/ಜೆಇ.2/ಟೆಂಡರ್–22/2022–23 ದಿನಾಂಕ: 07.03.2023

ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಕಟಿಸುವುದೇನೆಂದರೆ 2022–23ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಟೆಂಡರ್‌ಗಳನ್ನು ನಿಗಧಿತ ಇ.ಎಂ.ಡಿ. (ಮುಖ್ಯಾಧಿಕಾರಿಗಳ ಹೆಸರಿಗೆ ಡಿ.ಡಿ.)ಯನ್ನು ಲಕೋಟೆಯಲ್ಲಿಟ್ಟು ಸೀಲ್ ಮಾಡಿ ಸೂಚಿತ ದಿನಾಂಕದೊಳಗೆ ಮುಖ್ಯಾಧಿಕಾರಿಗಳು, ಪುರಸಭೆ, ಪಿರಿಯಾಪಟ್ಟಣ ಇವರಿಗೆ ತಲುಪಿಸತಕ್ಕದ್ದು. **ಟೆಂಡರ್ ಸಲ್ಲಿಸುವ ವಿವರ: 1)** ಟೆಂಡರ್ ಫಾರಂಗಳಿಗೆ ಕೋರಿಕೆ ಅರ್ಜಿ ಸಲ್ಲಿಸಲು ಮತ್ತು ಟೆಂಡರ್ ಫಾರಂ ಪಡೆಯಲು ಕೊನೆಯ ದಿ: 30.03.2023ರ ಸಾಯಂಕಾಲ 03.30 ಗಂಟೆವರೆಗೆ. **2)** ಭರ್ತಿ ಮಾಡಿದ ಸೀಲ್ಡ್ ಟೆಂಡರ್‌ಗಳನ್ನು ಕಛೇರಿಗೆ ಸಲ್ಲಿಸುವ ಕೊನೆಯ ದಿ: 31.03.2023ರ ಸಾಯಂಕಾಲ 04.00 ಗಂಟೆವರೆಗೆ. **3)** ಟೆಂಡರ್ ತೆರೆಯುವ ದಿ: 31.03.2023ರ ಸಾಯಂಕಾಲ 05.00 ಗಂಟೆ ಅಥವಾ ಸೂಚಿಸಿದ ದಿನದಂದು.

ಕ್ರ. ಸಂ.	ಕಾಮಗಾರಿ ಹೆಸರು	ಅಂದಾಜು ಮೊತ್ತ (ರೂ.ಗಳಲ್ಲಿ)	ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಟೆಂಡರ್ ಫಾರಂ ಬೆಲೆ (ರೂ.ಗಳಲ್ಲಿ)
1	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಬೆಟ್ಟದಪುರ ರಸ್ತೆಯ ಕ್ರೀಡಾಂಗಣದ ಹತ್ತಿರ ಇರುವ ವಿದ್ಯುತ್ ಪರಿವರ್ತಕವನ್ನು ಸ್ಥಳಾಂತರಿಸುವ ಕಾಮಗಾರಿ.	1,05,000/–	2,625/–	200/– (+ ಜಿಎಸ್‌ಟಿ)
2	ಪಿರಿಯಾಪಟ್ಟಣ ಪುರಸಭೆ ವ್ಯಾಪ್ತಿಯಲ್ಲಿ ಬಸವೇಶ್ವರ ವೃತ್ತದಲ್ಲಿ ಫೌಂಟೇನ್ ನಿರ್ಮಾಣ ಕಾಮಗಾರಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾಮಗಾರಿ.	3,30,000/–	8,250/–	400/– (+ ಜಿಎಸ್‌ಟಿ)
3	ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯ ಒಳಕೋಟೆಯಲ್ಲಿ ಮತ್ತು ಹುಣಸೆಕೊಪ್ಪ ರಸ್ತೆಯಲ್ಲಿ ಮತ್ತು ಗಾಂಧಿನಗರದಲ್ಲಿ ಶ್ರೀಮತಿ ಕಮಲಮ್ಮ ಕೋಂ ಲೇಟ್ ಗಣೇಶ್‌ರವರ ಮನೆಯ ಹತ್ತಿರ ಹೊಸದಾಗಿ ವಿದ್ಯುತ್ ಕಂಬ ಅಳವಡಿಸುವ ಕಾಮಗಾರಿ.	3,40,000/–	8,500/–	400/– (+ ಜಿಎಸ್‌ಟಿ)

ಗುತ್ತಿಗೆದಾರರ ದರ್ಜೆ: 4ನೇ ದರ್ಜೆ ಮತ್ತು ಮೇಲ್ಪಟ್ಟ ಎಲೆಕ್ಟ್ರಿಕಲ್ ಗುತ್ತಿಗೆದಾರರು

ಸೂಚನೆ: ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– (ಶ್ರೀ. ಕೆ. ಮಹೇಶ್) ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/– (ಶ್ರೀಮತಿ ಆಶಾ ಪಿ.ಕೆ.) ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/– (ಶ್ರೀ ಪಿ.ಸಿ. ಕೃಷ್ಣ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ
ಸಹಿ/– (ಶ್ರೀ ಮಹೇಂದ್ರ ಬಿ) ಮುಖ್ಯಾಧಿಕಾರಿ, ಪುರಸಭೆ, ಪಿರಿಯಾಪಟ್ಟಣ

DIPR/DDMYS/KSMCA/1193/2022-23